ಸೋಮವಾರ, ಮಾರ್ಚ್ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 83 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಆಳ–ಅಗಲ
ಒಳಮೀಸಲು
ತೆಲುಗು ರಾಜ್ಯಗಳ ಮುನ್ನುಡಿ


ಚುನಾವಣಾ ಆಯೋಗವು ನಿಷ್ಕ್ರಿಯ ಸಂಸ್ಥೆ: ಕಪಿಲ್ 9

ಸೌಜನ್ಯ ಕೊಲೆ: ಮರು ತನಿಖೆಗೆ ಆಗ್ರಹ 5

ಪ್ರವಾಸಿಗರಿಗೆ ಟ್ಯುಲಿಪ್ ಸ್ವಾಗತ

ಮಾರ್ಚ್ 26 ಶ್ರೀನಗರದ 'ಇಂದಿರಾ ಗಾಂಧಿ ಸ್ಮಾರಕ ಟ್ಯುಲಿಪ್ ಉದ್ಯಾನ'ವು ಈ ವರ್ಷ ಪ್ರವಾಸಿಗರಿಗೆ ಮುಕ್ತವಾಗಲಿರುವ ದಿನ. ಇದು ಏಷ್ಯಾದಲ್ಲಿಯೇ ಅತಿ ದೊಡ್ಡ ಟ್ಯುಲಿಪ್ ಉದ್ಯಾನ





ಕಾಡಾನೆ ಸೆರೆ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ಉಪಟಳ ನೀಡುತ್ತಿರುವ ಕಾಡಾನೆಗಳ ಸೆರೆ ಕಾರ್ಯಾಚರಣೆ ಆರಂಭಿಸಿರುವ ಅರಣ್ಯ ಇಲಾಖೆ ಸಿಬ್ಬಂದಿ ಸಕಲೇಶಪುರ ತಾಲ್ಲೂಕಿನ ಹೆಬ್ಬನಹಳ್ಳಿ ಗ್ರಾಮದಲ್ಲಿ ಮಖ್ನಾ ಆನೆಯನ್ನು ಭಾನುವಾರ ಸೆರೆ ಹಿಡಿದರು. ಒಟ್ಟು ಮೂರು ಆನೆಗಳನ್ನು ಸೆರೆ ಹಿಡಿದಿದ್ದು, ಮಖ್ನಾವನ್ನು (ದಂತ ಇಲ್ಲದ ಗಂಡಾನೆ) ಸಕ್ರೆಬೈಲು ಆನೆ ಶಿಬಿರಕ್ಕೆ ರವಾನಿಸಲಾಯಿತು

ಸಿದ್ದರಾಮಯ್ಯ–ಮಲ್ಲಿಕಾರ್ಜುನ ಖರ್ಗೆ ಭೇಟಿ • ಮುಂದಿನ ಹೆಜ್ಜೆ ಕುರಿತು ಗಂಭೀರ ಸಮಾಲೋಚನೆ

ಮಧುಬಲೆ: ಹೈಕಮಾಂಡ್ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಮತ್ತು ವಿಧಾನ ಪರಿಷತ್ ಸದಸ್ಯರೂ ಆಗಿರುವ ಅವರ ಮಗ ಕೆ. ರಾಜೇಂದ್ರ ಅವರನ್ನು 'ಮಧುಬಲೆ'ಗೆ (ಹನಿಟ್ರ್ಯಾಪ್) ಕೆಡವಲು ಯತ್ನಿಸಿದ ಪ್ರಕರಣದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶ ಮಾಡಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಭೇಟಿಯಾಗಿ ಈ ಕುರಿತು ರಹಸ್ಯ ಚರ್ಚೆ ನಡೆಸಿದರು.

ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪವಾದ ಬಳಿಕ ಕಾಂಗ್ರೆಸ್ ನಾಯಕರ ಮಧ್ಯೆ ತೀವ್ರ ವಾಕ್ಸಮರ ನಡೆಯುತ್ತಿದೆ. ಪ್ರಕರಣದ ಕುರಿತು ರಾಷ್ಟ್ರವ್ಯಾಪಿ ಚರ್ಚೆ ನಡೆಯುತ್ತಿದೆ. ಪಕ್ಷದ ಪ್ರಭಾವಿ ನಾಯಕರೊಬ್ಬರು ತಮ್ಮದೇ ಪಕ್ಷದ ನೇತೃತ್ವದ ಸರ್ಕಾರದಲ್ಲಿನ ಸಚಿವರು, ಅವರ ಕುಟುಂಬದ ಸದಸ್ಯರನ್ನು ಹನಿಟ್ರ್ಯಾಪ್‌ಗೆ ಬೀಳಿಸಲು ಯತ್ನಿಸಿದ್ದರು ಎಂಬ ಆರೋಪ ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಪಕ್ಷವನ್ನು ಮುಜುಗರಕ್ಕೆ ಸಿಲುಕಿಸಿದೆ.

ದೆಹಲಿಯಿಂದ ಬೆಂಗಳೂರಿಗೆ ಮರಳಿದ್ದ ಖರ್ಗೆ ಅವರು ಮುಖ್ಯಮಂತ್ರಿಯವರ ಅಧಿಕೃತ ನಿವಾಸಕ್ಕೆ ಭಾನುವಾರ ಬೆಳಿಗ್ಗೆಯೇ ಬಂದರು. ಸಚಿವ ಪ್ರಿಯಾಂಕ್ ಖರ್ಗೆ ಜೊತೆಗಿದ್ದರು. ಉಭಯ ಕುಶಲೋಪರಿ ಬಳಿಕ ಉಭಯ ನಾಯಕರು, ಕೊಠಡಿಯೊಂದರಲ್ಲಿ ಕುಳಿತು ಸುಮಾರು ಅರ್ಧ ಗಂಟೆ ರಹಸ್ಯ ಸಮಾಲೋಚನೆ ನಡೆಸಿದರು.

ಅಸಮಾಧಾನದ ಸಂದೇಶ: 'ಈ ಪ್ರಕರಣದಲ್ಲಿ ರಾಜಣ್ಣ ಮತ್ತು ರಾಜೇಂದ್ರ ಅವರು ನೀಡಿದ್ದ ಮಾಹಿತಿಗಳನ್ನು ಸಿದ್ದರಾಮಯ್ಯ ಅವರು ಖರ್ಗೆ ಅವರೊಂದಿಗೆ ಹಂಚಿಕೊಂಡಿದ್ದಾರೆ. ರಾಜಕೀಯ ಮೇಲುಗೈಗಾಗಿ ನಡೆಸುತ್ತಿರುವ ಇಂತಹ ಪ್ರಯತ್ನಗಳು ಸರ್ಕಾರ, ಪಕ್ಷದ ವರ್ಚಸ್ಸಿಗೆ ಹಾನಿ ಮಾಡುತ್ತಿವೆ ಎಂದು ಎಐಸಿಸಿ ಅಧ್ಯಕ್ಷರಿಗೆ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ



ಮಲ್ಲಿಕಾರ್ಜುನ ಖರ್ಗೆ ಅವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು

'ಆರೋಗ್ಯ ವಿಚಾರಿಸಲು ಬಂದಿದ್ದೆ'

ಮುಖ್ಯಮಂತ್ರಿ ಅವರ ನಿವಾಸದಿಂದ ಹೊರಬಂದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸುದ್ದಿಗಾರರು ಪ್ರಶ್ನಿಸಿದಾಗ, 'ಸಿದ್ದರಾಮಯ್ಯ ಅವರ ಆರೋಗ್ಯ ವಿಚಾರಿಸಲು ಬಂದಿದ್ದೆ' ಎಂದರು.

'ಅವರಿಗೆ ಮೊಣಕಾಲು ನೋವು ಇತ್ತು. ಈಗ ಹೇಗಿದೆ ಎಂದು ವಿಚಾರಿಸಿದೆ. ಬೇಗ ಗುಣಮುಖರಾಗಿ ಎಂದು ಹಾರೈಸಿದೆ' ಎಂದರು.

'ಮಧುಬಲೆ' ಯತ್ನ ಪ್ರಕರಣದ ಬಗ್ಗೆ ಪ್ರಶ್ನಿಸಿದಾಗ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ಸಿದ್ದರಾಮಯ್ಯ ಅವರನ್ನೇ ಕೇಳಿ: ಡಿಕೆಶಿ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಚಿವ ಕೆ.ಎನ್. ರಾಜಣ್ಣ ಭೇಟಿ ಮಾಡಿದ್ದರ ಬಗ್ಗೆ ನನ್ನನ್ನೇಕೆ ಕೇಳುತ್ತೀರಿ? ಆ ಬಗ್ಗೆ ಸಿದ್ದರಾಮಯ್ಯ ಅವರನ್ನೇ ಕೇಳಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುದ್ದಿಗಾರರ ಪ್ರಶ್ನೆಗೆ ಖಾರವಾಗಿ ಪ್ರತಿಕ್ರಿಯಿಸಿದರು.

'ಮಧುಬಲೆ' ಯತ್ನ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದ್ದಕ್ಕೆ ಹೈಕಮಾಂಡ್ ಸಿಟ್ಟಾಗಿದೆಯಂತಲ್ಲಾ' ಎಂದು ಪ್ರಶ್ನಿಸಿದಾಗ, 'ಯಾರು ಸಿಟ್ಟಾಗಿದ್ದಾರೆ? ನಿಮಗೆ ಯಾರು ಹೇಳಿದ್ದು? ಇವೆಲ್ಲವೂ ಬೋಗಸ್. ಕೆಲವರು ಸುಮ್ಮನೆ ಸುಳ್ಳುಸುದ್ದಿ ಸೃಷ್ಟಿಸುತ್ತಿದ್ದಾರೆ' ಎಂದರು.

'ಹನಿಟ್ರ್ಯಾಪ್ ಯತ್ನದ ಬಗ್ಗೆ ನಿಮ್ಮಲ್ಲಿರುವ ಮಾಹಿತಿ ನೀಡಿ, ಪರಿಶೀಲಿಸುತ್ತೇವೆ ಎಂದು ರಾಜಣ್ಣಗೆ ಕೇಳಿದ್ದೆ. ಅವರು, 'ನನ್ನ ಬಳಿ ಏನೂ ಇಲ್ಲ' ಎಂದರು. ಅವರು ಇನ್ನೂ ಏನೇನೋ ಹೇಳಿದ್ದಾರೆ. ಅವನ್ನೆಲ್ಲಾ ನಿಮ್ಮ ಮುಂದೆ ಹೇಳಲಾಗದು. ನಿಮ್ಮದು ಏನಾದರೂ ಇದ್ದರೆ ದೂರು ನೀಡಿ ಎಂದು ಹೇಳಿದ್ದೇನೆ. ಅವರು ಕೋಲಾರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಖರ್ಗೆ ನಿವಾಸಕ್ಕೆ ಹೊರಟಿದ್ದ ಸಿದ್ದರಾಮಯ್ಯ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಬಂದಿರುವುದು ತಿಳಿಯುತ್ತಿದ್ದಂತೆಯೇ ಅವರ ಮನೆಗೆ ಹೋಗಿ ಪ್ರಕರಣದ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಾಗಿದ್ದರು. ಭೇಟಿಗಾಗಿ ಮನೆಗೆ ಬರುತ್ತಿರುವುದಾಗಿ ಖರ್ಗೆ ಅವರಿಗೆ ಭಾನುವಾರ ಬೆಳಿಗ್ಗೆಯೇ ದೂರವಾಣಿ ಕರೆಮಾಡಿ ತಿಳಿಸಿದ್ದರು.

'ಮೊಣಕಾಲಿನ ನೋವು ಇರುವ ಕಾರಣದಿಂದ ನೀವು ಬರುವುದು ಬೇಡ. ನಾನೇ ನಿಮ್ಮ ಮನೆಗೆ ಬರುತ್ತೇನೆ. ಅಲ್ಲಿಯೇ ಚರ್ಚೆ ಮಾಡೋಣ ಎಂದು ಖರ್ಗೆಯವರು ಮುಖ್ಯಮಂತ್ರಿಯವರಿಗೆ ತಿಳಿಸಿದರು. ಬಳಿಕ ಸಿ.ಎಂ ಮನೆಗೆ ಬಂದು ಚರ್ಚಿಸಿದರು' ಎಂದು ಮೂಲಗಳು ತಿಳಿಸಿವೆ.

ರಾಜೀನಾಮೆ ನೀಡುವೆ: ಹೊರಟ್ಟಿ

ಪ್ರಜಾವಾಣಿ ವಾರ್ತೆ



ಬಸವರಾಜ ಹೊರಟ್ಟಿ

ಹುಬ್ಬಳ್ಳಿ: 'ಸದನದಲ್ಲಿ ಇತ್ತೀಚೆಗೆ ನಡೆದ ಬೆಳವಣಿಗೆಗಳಿಂದ ತುಂಬಾ ನೋವಾಗಿದೆ. ಈ ಸ್ಥಾನದಲ್ಲಿ ಮುಂದುವರಿಯುವುದರಲ್ಲಿ ಅರ್ಥ ಇಲ್ಲ ಎಂಬ ಭಾವನೆ ಬರುತ್ತಿದೆ. ಹೀಗಾಗಿ ರಾಜೀನಾಮೆ ನೀಡಲು ನಿರ್ಧಾರ ಕೈಗೊಂಡಿದ್ದೇನೆ. ಆದರೆ ಇನ್ನೂ ರಾಜೀನಾಮೆ ನೀಡಿಲ್ಲ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟಪಡಿಸಿದರು.

ಹೊರಟ್ಟಿಯವರ ಭಾವನೆ ಗೌರವಿಸುತ್ತೇನೆ. ಅವರ ಕಳವಳ ಅರ್ಥವಾಗಿದೆ. ಹನಿಟ್ರ್ಯಾಪ್ ವಿಷಯ ನಮಗೂ ಮುಜುಗರ ತಂದಿದೆ
ಸಂತೋಷ್ ಲಾಡ್, ಸಚಿವ

ಹೊರಟ್ಟಿ ಅವರ ರಾಜೀನಾಮೆ ಪತ್ರ ಭಾನುವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬಳಿಕ ಅವರು ಸಂಜೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

5ನೇ ಪುಟ ನೋಡಿ

ಇಂದು ಕೆಲವೆಡೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಸೋಮವಾರವೂ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿಕ್ಕಮಗಳೂರು, ಕೊಡಗು, ಹಾಸನ ಹಾಗೂ ಮೈಸೂರು ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ತುಂತುರು ಮಳೆ ಆಗಬಹುದು ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕೆಲ ಜಿಲ್ಲೆಗಳಲ್ಲಿ ಮಂಗಳವಾರ ಹಾಗೂ ಬುಧವಾರವೂ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ವಿವಿಧೆಡೆ ಮಳೆ: ಇಲಾಖೆ ಪ್ರಕಾರ ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಯಲ್ಲಿ ದಕ್ಷಿಣ ಒಳನಾಡಿನ ಕೆಲವು ಸ್ಥಳಗಳು ಹಾಗೂ ಉತ್ತರ ಒಳನಾಡಿನ ಒಂದೆರಡು ಸ್ಥಳಗಳಲ್ಲಿ ಮಳೆಯಾಗಿದೆ.

'ನೋಟು' ವಿಡಿಯೊ ಬಹಿರಂಗ

ನ್ಯಾಯಮೂರ್ತಿ ನಿವಾಸದಲ್ಲಿ ನೋಟುಗಳ ಪತ್ತೆ ಪ್ರಕರಣ

ನವದೆಹಲಿ (ಪಿಟಿಐ): ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮ ಅವರ ಅಧಿಕೃತ ನಿವಾಸದಲ್ಲಿ ಬೆಂಕಿ ಆರಿಸುವ ಸಂದರ್ಭದಲ್ಲಿ ನಗದು ಪತ್ತೆಯಾಗಿರಲಿಲ್ಲ ಎಂದು ದೆಹಲಿ ಅಗ್ನಿಶಾಮಕ ದಳದ ಮುಖ್ಯಸ್ಥರು ಹೇಳಿಕೆ ನೀಡಿದ್ದರೂ ವರ್ಮ ಅವರ ನಿವಾಸದಲ್ಲಿ ಅರೆಬರೆ ಸುಟ್ಟ ಸ್ಥಿತಿಯಲ್ಲಿ ನೋಟುಗಳಂತಹ ವಸ್ತು ಪತ್ತೆಯಾಗಿರುವುದನ್ನು ವಿಡಿಯೊ ಒಂದು ಬಹಿರಂಗಪಡಿಸಿದೆ.



ಯಶವಂತ್ ವರ್ಮ ಅವರ ನಿವಾಸದ ಬಳಿ ಕಸದ ನಡುವೆ ಸುಟ್ಟ ನೋಟುಗಳು ಪತ್ತೆಯಾಗಿವೆ –ಪಿಟಿಐ ಚಿತ್ರ


ಸುಪ್ರೀಂ ಕೋರ್ಟ್ ತನ್ನ ವೆಬ್‌ಸೈಟ್ ಮೂಲಕ ಈ ವಿಡಿಯೊವನ್ನು ಪ್ರಕಟಿಸಿದೆ. ಅರೆಬರೆ ಸುಟ್ಟ, ಕರೆನ್ಸಿ ನೋಟುಗಳಂತೆ ಕಾಣಿಸುವ ವಸ್ತುಗಳು ಸೇರಿದಂತೆ ಬೇರೆ ಬೇರೆ ವಸ್ತುಗಳಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ದೆಹಲಿ ಅಗ್ನಿಶಾಮಕ ದಳದ ಸಿಬ್ಬಂದಿ ಆರಿಸುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

4B ಪುಟ ನೋಡಿ

ತಾಳೆಯಾಗದ ವಿವರಣೆ

'ನ್ಯಾಯಮೂರ್ತಿ ವರ್ಮ ಅವರ ನಿವಾಸದಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ನಿಯಂತ್ರಣ ಕೊಠಡಿಗೆ ಮಾರ್ಚ್ 14ರ ರಾತ್ರಿ 11.35ಕ್ಕೆ ಕರೆ ಬಂತು. ಅಗ್ನಿಶಾಮಕ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಲಾಯಿತು' ಎಂದು ಅತುಲ್ ಗರ್ಗ್ ಅವರು ಹೇಳಿದ್ದರು.

ನ್ಯಾಯಮೂರ್ತಿ ಉಪಾಧ್ಯಾಯ ಅವರು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಈ ಹೇಳಿಕೆಗೆ ಭಿನ್ನವಾದ ವಿವರಣೆ ಇದೆ. ನ್ಯಾಯಮೂರ್ತಿ ವರ್ಮ ಅವರ ಆಪ್ತ ಕಾರ್ಯದರ್ಶಿಯು ಪೊಲೀಸ್ ನಿಯಂತ್ರಣ ಕೊಠಡಿಗೆ ಮೊದಲು ಕರೆ ಮಾಡಿ, ಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಮಾಹಿತಿ ನೀಡಿದರು. ದೆಹಲಿ ಅಗ್ನಿಶಾಮಕ ದಳಕ್ಕೆ ಅವರು ಪ್ರತ್ಯೇಕವಾಗಿ ಮಾಹಿತಿ ನೀಡಿರಲಿಲ್ಲ ಎಂಬ ಮಾಹಿತಿಯು ವರದಿಯಲ್ಲಿದೆ.



ನನ್ನ ಹೆಸರಿಗೆ ಕಳಂಕ ಅಂಟಿಸುವ ಉದ್ದೇಶದಿಂದ ನಗದು ಪತ್ತೆ ಆರೋಪ ವನ್ನು ಹೊರಿಸಲಾಗಿದೆ
ಯಶವಂತ ವರ್ಮ, ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ

ಆರ್ಥಿಕ ಇಲಾಖೆ ಕ್ರಮ; ಸರ್ಕಾರಿ ನೌಕರರಿಗೆ ತಪ್ಪದ ಅಲೆದಾಟ

₹4 ಸಾವಿರ ಕೋಟಿ ಹಿಂಬಾಕಿಗೆ ತಡೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಹಿಂದಿನ ಹಣಕಾಸು ವರ್ಷಗಳ ವೇತನ ಬಾಕಿ ನೀಡದಂತೆ ಎಲ್ಲ ಖಜಾನೆಗಳಿಗೂ ಆರ್ಥಿಕ ಇಲಾಖೆ ಲಿಖಿತ ಸೂಚನೆ ನೀಡಿದ್ದು, ಮಾರ್ಚ್ ಅಂತ್ಯದ ಒಳಗೆ ಹಣ ಪಡೆಯಲು ಅಲೆದಾಡುತ್ತಿದ್ದ ಸರ್ಕಾರಿ ನೌಕರರಿಗೆ ನಿರಾಸೆಯಾಗಿದೆ.

ರಾಜ್ಯವಲಯ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪಿಎಫ್‌ಎಂಎಸ್, ಎನ್‌ಟಿಟಿ ಸೇರಿದಂತೆ ಎಲ್ಲ ವಲಯಗಳ ನೌಕರರ 2024–25ನೇ ಸಾಲಿನ ವೇತನ ಬಾಕಿಯನ್ನಷ್ಟೇ ನೀಡಬೇಕು. ಪ್ರಸಕ್ತ ಹಣಕಾಸು ವರ್ಷದ ಎಲ್ಲ ಬಾಕಿಗಳನ್ನೂ ಮಾರ್ಚ್ 25ರ ಒಳಗೆ ಇತ್ಯರ್ಥಪಡಿಸಬೇಕು ಎಂದು ಆರ್ಥಿಕ ಇಲಾಖೆ ಸೂಚಿಸಿದೆ. ಇದರಿಂದಾಗಿ ವೇತನ ಹಿಂಬಾಕಿ ಬವಣೆ 2025–26ನೇ ಸಾಲಿನ ಹಣಕಾಸು ವರ್ಷಕ್ಕೂ ಮುಂದುವರಿಯಲಿದೆ.

9ನೇ ಪುಟ ನೋಡಿ

₹68,491 ಕೋಟಿ
2023–24ರ ವೇತನ ಮೊತ್ತ

₹80,434 ಕೋಟಿ
2024–25ನೇ ಸಾಲಿನ ವೇತನ ಮೊತ್ತ

₹85,860 ಕೋಟಿ
2025–26ನೇ ಸಾಲಿಗೆ ನಿಗದಿಪಡಿಸಿದ ಮೊತ್ತ

₹4,000 ಕೋಟಿ
2024–25ನೇ ಸಾಲಿನ ಹಿಂಬಾಕಿ

ವಿಳಂಬ ಪ್ರಕ್ರಿಯೆಯಿಂದ ನೌಕರರ ವೇತನಕ್ಕೆ ನಿಗದಿಪಡಿಸಿದ ಹಣ ಪ್ರತಿ ವರ್ಷವೂ ಉಳಿಯುತ್ತದೆ. ಇಲಾಖಾ ಮುಖ್ಯಸ್ಥರು ಖಚಿತ ವಿವರಣೆ ನೀಡಿದರಷ್ಟೇ ಹಿಂಬಾಕಿಗೆ ಅನುಮತಿ ನೀಡಲಾಗುತ್ತದೆ
ಪಿ.ಸಿ.ಜಾಫರ್, ಆರ್ಥಿಕ ಇಲಾಖೆ ಕಾರ್ಯದರ್ಶಿ

ಹಿಂಬಾಕಿಗೆ ಏಕೆ ಕತ್ತರಿ?

ಖಜಾನೆ–2 ಜಾರಿಗೆ ಬಂದ ನಂತರ ನೌಕರರಿಗೆ ಹೊಸ ಸಮಸ್ಯೆ ಸೃಷ್ಟಿಯಾಗಿದೆ. ಅನುದಾನವನ್ನು ಇಲಾಖಾವಾರು ಪರಿಗಣಿಸಲಾಗುತ್ತದೆ. ಇಲಾಖೆಗೆ ನಿಗದಿಯಾದ ಅನುದಾನವನ್ನಷ್ಟೆ ಆ ಇಲಾಖೆಯ ನೌಕರರು ಪಡೆಯಬೇಕಿದೆ. ಇಲಾಖೆಯ ಯಾವ ಕಚೇರಿಯ ಸಿಬ್ಬಂದಿ ಮೊದಲು ವೇತನದ ಪಟ್ಟಿ ಸಿದ್ಧಪಡಿಸಿ, ಖಜಾನೆಗೆ ಸಲ್ಲಿಸುತ್ತಾರೋ ಅವರಿಗೆ ವೇತನವಾಗುತ್ತದೆ. ವಿಳಂಬ ಮಾಡಿದರೆ ಆ ತಿಂಗಳ ವೇತನ ಸಿಗುವುದಿಲ್ಲ.

ಒಂದು ಕಚೇರಿಯ ಸಿಬ್ಬಂದಿ ವೇತನ ಮೊತ್ತ ₹10 ಲಕ್ಷವಿದ್ದರೆ, ಅಲ್ಲಿನ ಕೆಲ ನೌಕರರು ₹1 ಲಕ್ಷ ಹಿಂಬಾಕಿ ವೇತನವನ್ನು ಹೆಚ್ಚುವರಿ ಪಡೆದರೂ ಅನುದಾನದಲ್ಲಿ ವ್ಯತ್ಯಯವಾಗುತ್ತಿದೆ. ಹೀಗಾಗಿ, ಅದೇ ಇಲಾಖೆಯ ಕೆಲ ಸಿಬ್ಬಂದಿಗೆ ಎಲ್ಲ ತಿಂಗಳು ಸರಿಯಾಗಿ ವೇತನ ದೊರೆಯುವುದಿಲ್ಲ. ಅವರು ಮುಂದಿನ ಅನುದಾನ ಬಿಡುಗಡೆವರೆಗೂ ಕಾಯಬೇಕು

ಎಲ್ಲ ಇಲಾಖೆಗಳಲ್ಲೂ ಇದ್ದ ಈ ಹಿಂಬಾಕಿ ಸಮಸ್ಯೆಗೆ ಅಲ್ಲಿನ ಬಡಾವಡೆ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರ ವಿಳಂಬ ಕಾರಣ ಎಂದು ಗುರುತಿಸಿದ ಆರ್ಥಿಕ ಇಲಾಖೆ, ವೇತನ ಹಿಂಬಾಕಿಯನ್ನು ಅದೇ ಹಣಕಾಸು ವರ್ಷದಲ್ಲಿಯೇ ಪಡೆಯುವುದನ್ನು ಕಡ್ಡಾಯಗೊಳಿಸಿದೆ.

ಧರ್ಮಾಧಾರಿತ ಮೀಸಲಾತಿಗೆ ಅವಕಾಶ ಇಲ್ಲ: ಹೊಸಬಾಳೆ

ಪ್ರಜಾವಾಣಿ ವಾರ್ತೆ



ದತ್ತಾತ್ರೇಯ ಹೊಸಬಾಳೆ

ಬೆಂಗಳೂರು: 'ಧರ್ಮ ಆಧಾರಿತ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶ ಇಲ್ಲ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಕಾರ್ಯವಾಹ (ಪ್ರಧಾನ ಕಾರ್ಯದರ್ಶಿ) ದತ್ತಾತ್ರೇಯ ಹೊಸಬಾಳೆ ಹೇಳಿದರು.

ಚನ್ನೇನಹಳ್ಳಿಯಲ್ಲಿ ನಡೆದ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಕೊನೆಯ ದಿನವಾದ ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಮುಸ್ಲಿಮರಿಗೆ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇ 4ರಷ್ಟು ಮೀಸಲಾತಿ ನೀಡುವ ಕರ್ನಾಟಕ ಸರ್ಕಾರದ ನಿರ್ಧಾರ ಕುರಿತು, 'ಸಂವಿಧಾನದ ಪ್ರಕಾರ, ಹಿಂದುಳಿದವರಿಗೆ ಮಾತ್ರ ಮೀಸಲಾತಿ ಅನ್ವಯವಾಗಲಿದೆ. ಧರ್ಮಾಧಾರಿತವಾಗಿ ಮೀಸಲಾತಿ ನೀಡುವುದು ಎಂದರೆ ಸಂವಿಧಾನದ ವಿರುದ್ಧ ಹೋಗುವುದಾಗಿದೆ. ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ನೀಡಿದ್ದ ಧರ್ಮಾಧಾರಿತ ಮೀಸಲಾತಿ ಕೋರ್ಟ್‌ಗಳಲ್ಲಿ ಬಿದ್ದು ಹೋಗಿದೆ' ಎಂದು ಹೇಳಿದರು. 'ವಕ್ಫ್ ಹೆಸರಲ್ಲಿ ಕೃಷಿ ಜಮೀನು ಒತ್ತುವರಿ ಆಗಿರುವುದರಿಂದ ರೈತರು ಸಂತ್ರಸ್ತರಾಗಿದ್ದಾರೆ. ತಪ್ಪುಗಳನ್ನು ಸರಿಪಡಿಸಬೇಕು. ಕೇಂದ್ರ ಸರ್ಕಾರ ಸಮಸ್ಯೆ ಪರಿಹರಿಸಲು ಕೆಲಸ ಮಾಡುತ್ತಿದೆ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಕ್ಷೇತ್ರ ಮರುವಿಂಗಡನೆ ಬಗ್ಗೆ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ನೇತೃತ್ವದಲ್ಲಿ ನಡೆದ ಜಂಟಿ ಕ್ರಿಯಾ ಸಮಿತಿ ಸಭೆ ಕುರಿತು, 'ರಾಜಕೀಯದಲ್ಲಿ ಇರುವವರು ಪ್ರತಿದಿನ ಏನು ಬೇಕಾದರೂ ಹೇಳಿಕೆ ನೀಡಬಹುದು. ಆದರೆ ಯಾವುದೇ ಕರಡು ಇಲ್ಲದೆ ಅಥವಾ ಅಧಿಕೃತವಾಗಿ ಎಲ್ಲೂ ಪ್ರಕಟಣೆಯಾಗದೆ ಸಂಘ ಏನನ್ನೂ ಹೇಳುವುದಿಲ್ಲ. ಈ ಕುರಿತು ನಾವು ಮಾತನಾಡುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

9ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಗೃಹಲಕ್ಷ್ಮಿ – 31ರ ನಂತರ 2 ಕಂತು ಹಣ: ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗೃಹಲಕ್ಷ್ಮಿ ಯೋಜನೆಯ ಎರಡು ಕಂತುಗಳ ಹಣವನ್ನು ಮಾರ್ಚ್ 31ರ ನಂತರ ಬಿಡುಗಡೆ ಮಾಡಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗಲೇ ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನವನ್ನು ₹2 ಸಾವಿರ ಹೆಚ್ಚಿಸಿದ್ದೆವು. ಅದಾದ ನಂತರ ಯಾವುದೇ ಸರ್ಕಾರವು ಹೆಚ್ಚಿಸಲಿಲ್ಲ' ಎಂದರು.

ಕೆನಡಾ: ಏ.28ಕ್ಕೆ ಚುನಾವಣೆ

ಒಟ್ಟಾವ (ಎಎಫ್‌ಪಿ): ಕೆನಡಾದಲ್ಲಿ ಏ.28ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದೆ ಎಂದು ಪ್ರಧಾನಿ ಮಾರ್ಕ್ ಕಾರ್ನಿ ಭಾನುವಾರ ಘೋಷಿಸಿದ್ದಾರೆ.

‘ಸಂಸತ್ತನ್ನು ವಿಸರ್ಜಿಸಿ ಚುನಾವಣೆ ನಡೆಸಬೇಕು ಎಂದು ಗವರ್ನರ್ ಜನರಲ್ ಅವರನ್ನು ಕೋರಿದ್ದೇನೆ. ಅವರು ಒಪ್ಪಿದ್ದಾರೆ’ ಎಂದು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ.

ನಿಗದಿತ ವೇಳಾಪಟ್ಟಿಯಂತೆ ಸಾರ್ವತ್ರಿಕ ಚುನಾವಣೆ ಅ. 20ರ ಬಳಿಕ ನಡೆಯಬೇಕಿತ್ತು. ಆದರೆ ಈ ಬಾರಿ ಅವಧಿಗೂ ಮುನ್ನ ಚುನಾವಣೆ ನಡೆಯಲಿದೆ.

‘ಹೆಣ್ಣು ಭ್ರೂಣ ಹತ್ಯೆ, ಮಹಿಳೆಯರ ಸಂಖ್ಯೆ ಕುಸಿತ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ
- ಗಂಡು– ಹೆಣ್ಣು ಎಂಬ ತಾರತಮ್ಯ ಮಾಡದಿರಿ
- ಹೆಣ್ಣುಮಕ್ಕಳನ್ನು ದಿಟ್ಟವಾಗಿ ಬೆಳೆಸಿ

ಬೆಂಗಳೂರು: ‘ಗಂಡು ಮಕ್ಕಳು ಬೇಕು ಎಂಬ ಮನೋಭಾವದಿಂದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. ಇದರಿಂದ ಮಹಿಳೆಯರ ಸಂಖ್ಯೆ ಕುಸಿಯುತ್ತಿದೆ’ ಎಂದು ನ್ಯೂಕ್ಲಿಯರ್ ಮೆಡಿಸಿನ್ ತಜ್ಞೆ ಡಾ.ಆರ್.ಕೆ. ಸರೋಜಾ ಬೇಸರ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ‘ನನ್ನ ಬದುಕು ನನ್ನ ಆಯ್ಕೆ’ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ‘ವಿದ್ಯಾವಂತರು ಸಹ ಭ್ರೂಣ ಹತ್ಯೆ ಮಾಡುತ್ತಿರುವುದು ದುರಂತ. ಮನೆಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡಬಾರದು. ಮಕ್ಕಳಲ್ಲಿ ಹೆಣ್ಣು ಮತ್ತು ಗಂಡು ಇಬ್ಬರೂ ಸರಿಸಮಾನರು ಎಂಬ ಮನೋಭಾವನೆಯನ್ನು ಬೆಳೆಸಬೇಕು. ಹೆಣ್ಣುಮಕ್ಕಳನ್ನು ದಿಟ್ಟವಾಗಿ ಬೆಳೆಸಬೇಕು. ಗಂಡು ಎಂಬ ಗರ್ವಕ್ಕೆ ಕೊನೆ ಹಾಕಬೇಕು’ ಎಂದು ಹೇಳಿದರು.

‘ಸಮಾಜದಲ್ಲಿರುವ ಸ್ತ್ರೀ ಸಂವೇದನೆ, ಮದುವೆ ಹಾಗೂ ತಾಯ್ತನದಂತಹ ಸ್ಥಾಪಿತ ಪೂರ್ವಾಗ್ರಹಗಳ ಬಗ್ಗೆ ನಾವು ಹೊಸ ವ್ಯಾಖ್ಯಾನ ಬರೆಯಬೇಕಿದೆ. ಪುರುಷರು ನಮಗೆ ಬೇಕು. ನಾವು ಪುರುಷ ದ್ವೇಷಿಗಳಲ್ಲ. ಆದರೆ ನಮ್ಮ ಅಧಿಕಾರ ನಮಗೆ ಕೊಡಿ, ನಮಗೆ ಅಡ್ಡಗಾಲು ಹಾಕಬೇಡಿ’ ಎಂದರು.

ಹೋರಾಟಗಾರ್ತಿ ಕೆ.ಎಸ್. ವಿಮಲಾ ಮಾತನಾಡಿ, ‘ಭಾರತದಂತಹ ದೇಶಗಳಲ್ಲಿ ಮದುವೆ ಎನ್ನುವುದು ಮಕ್ಕಳನ್ನು ಮಾಡಿಕೊಳ್ಳಲು ಅಥವಾ ಲೈಂಗಿಕ ಕ್ರಿಯೆಗೆ ಪರವಾನಗಿ ಇದ್ದಂತೆ. ಸಹ (ಜ) ಜೀವನ ಇವತ್ತಲ್ಲ, ಪ್ರಾರಂಭದ ಕಾಲ ಘಟ್ಟದಲ್ಲಿಯೇ ಇತ್ತು. ಕಾಲ ಬದಲಾದಂತೆ ಅದನ್ನು ಒಪ್ಪಿಕೊಳ್ಳಬೇಕೋ ಅಥವಾ ಬೇಡವೋ ಎಂಬ ತಾಕಲಾಟದ ಕಾಲಘಟ್ಟದಲ್ಲಿ ನಾವು ಇದ್ದೇವೆ’ ಎಂದು ಹೇಳಿದರು.



‘ನನ್ನ ಬದುಕು ನನ್ನ ಆಯ್ಕೆ’ ಗೋಷ್ಠಿಯಲ್ಲಿ (ಎಡದಿಂದ) ಬಿ.ಯು. ಸುಮಾ, ಕೆ.ವೈ. ನಾರಾಯಣಸ್ವಾಮಿ, ಡಾ.ಆರ್.ಕೆ. ಸರೋಜಾ, ಕೆ.ಎಸ್. ವಿಮಲಾ ಅವರು ಚರ್ಚೆ ನಡೆಸಿದರು ಪ್ರಜಾವಾಣಿ ಚಿತ್ರ

‘ಆಧುನಿಕ ಕಾಲಘಟ್ಟದಲ್ಲಿ ಮದುವೆ ಮತ್ತು ತಾಯ್ತನದ ವಿನ್ಯಾಸಗಳು’ ವಿಷಯದ ಕುರಿತು ಬಿ.ಯು. ಸುಮಾ ಮಾತನಾಡಿದರು. ‘ಮಹಿಳೆ ಮತ್ತು ಅಧಿಕಾರ ನಿರ್ವಹಣೆ’ಯ ಬಗ್ಗೆ ಕೆ.ವೈ. ನಾರಾಯಣಸ್ವಾಮಿ ವಿಷಯ ಮಂಡಿಸಿದರು. ‘ಕೃಷಿ, ಪರಿಸರ ಮತ್ತು ಮಹಿಳೆ’ಯ ಕುರಿತು ಪಿ. ಚಂದ್ರಿಕಾ ಮಾತನಾಡಿದರು.

‘ಆಧುನಿಕತೆ ಹಾಗೂ ಅಸ್ಮಿತೆಯ ಅನ್ವೇಷಣಾ ಕ್ರಮಗಳು’ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಮರ್ಶಕಿ ತಾರಿಣಿ ಶುಭದಾಯಿನಿ, ‘ಹೆಣ್ಣಿನ ವಿಷಯದಲ್ಲಿ ಆಧುನಿಕತೆ ಹಾಗೂ ಅಸ್ಮಿತೆ ಆಧುನಿಕ ಸಮ್ಮಾನವಾಗಿ ರೂಪಗೊಳ್ಳುವುದಕ್ಕಿಂತ ಹೆಚ್ಚಾಗಿ ಸಾಮಾಜಿಕವಾಗಿ ರೂಪಗೊಳ್ಳಬೇಕು. ಆಧುನಿಕತೆಯನ್ನು ಹೇಗೆ ಪರಿಭಾವಿಸಬೇಕು ಎನ್ನುವುದು ಈಗ ನಮ್ಮ ಮುಂದೆ ಇರುವ ಸವಾಲು. ಇದಕ್ಕೆ ಜ್ಞಾನದ ಬಲ ಬೇಕು. ಅರಿವು ಎನ್ನುವುದು ಮಹಿಳಾ ಚಳವಳಿಗಳು ಮತ್ತು ಮಹಿಳಾ ಸಾಹಿತ್ಯದ ಮೂಲ ಧಾತು ಆಗಿದೆ’ ಎಂದು ಹೇಳಿದರು.

‘ಎಐ ಕಾಲದಲ್ಲೂ ಮಹಿಳೆ ಬಲಿಪಶು’

‘ಕೃತಕ ಬುದ್ಧಿಮತ್ತೆಯ (ಎಐ) ಈ ಕಾಲಘಟ್ಟದಲ್ಲಿ ಮಹಿಳೆಯನ್ನೇ ಬಲಿ ಪಶು ಮಾಡಲಾಗುತ್ತಿರುವುದು ವಿಷಾದನೀಯ. ಡೀಪ್ ಫೇಕ್, ಲೈಂಗಿಕ ಚಾಟ್ ಬಾಟ್‌ಗಳ ವಿಷಯದಲ್ಲಿ ಹೆಣ್ಣನ್ನೇ ಕೇಂದ್ರವಾಗಿರಿಸಿಕೊಂಡು ಪ್ರೋಗ್ರಾಮಿಂಗ್ ಮಾಡಲಾಗುತ್ತಿದೆ. ಆ ಕ್ಷೇತ್ರಕ್ಕೆ ಹೆಚ್ಚು ಮಹಿಳೆಯರು ಲಗ್ಗೆ ಇಡುವ ಮೂಲಕ ಈ ಅಪಾಯವನ್ನು ತಪ್ಪಿಸಬಹುದು’ ಎಂದು ಹುಲಿಕುಂಟೆ ಮೂರ್ತಿ ಅಭಿಪ್ರಾಯ ವ್ಯಕ್ತಪಡಿಸಿದರು.

‘ಆಧುನಿಕ ತಂತ್ರಜ್ಞಾನ–ಕೃತಕ ಬುದ್ಧಿಮತ್ತೆ’, ‘ಮಹಿಳಾ ಸಂಕಥನಗಳು ಹಾಗೂ ಹೊಸ ಹೊರಳುಗಳು’, ‘ಮಹಿಳಾ ಬರಹಗಳು ಮತ್ತು ‘ಸ್ವ’ ನಿರ್ವಹಣೆ’ ಎಂಬ ವಿಷಯಗಳ ಬಗ್ಗೆ ಹುಲಿಕುಂಟೆ ಮೂರ್ತಿ, ಸಬಿತಾ ಬನ್ನಾಡಿ ಹಾಗೂ ಡಾ.ಎಚ್.ಎಸ್. ಅನುಪಮಾ ಮಾತನಾಡಿದರು.



ಅಂತರರಾಷ್ಟ್ರೀಯ ಅರಣ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಸಿನೆಟ್ಟು ನೀರುಣಿಸಿದರು

ಶೇ 70ಕ್ಕೂ ಅಧಿಕ ಮರಗಳ ನಾಶ

ಪ್ರಜಾವಾಣಿ ವಾರ್ತೆ

ಯಲಹಂಕ: ಭೂಮಿಯ ಮೇಲಿದ್ದ ಶೇ 70ಕ್ಕೂ ಅಧಿಕ ಮರಗಳು ನಾಶವಾಗಿವೆ ಎಂದು ಗ್ಲೋಬಲ್ ಗ್ರೀನ್ ಗ್ರೋತ್ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷ ಚಂದ್ರಶೇಖರ್ ಬಿರಾದಾರ ಕಳವಳ ವ್ಯಕ್ತಪಡಿಸಿದರು.

ಅಂತರರಾಷ್ಟ್ರೀಯ ಅರಣ್ಯ ದಿನದ ಪ್ರಯುಕ್ತ ಗ್ಲೋಬಲ್ ಗ್ರೀನ್ ಗ್ರೋತ್ ಫೌಂಡೇಷನ್, ಎಸ್ಟಾ ಸೊಸೈಟಿ ಹಾಗೂ ಜಿಕೆವಿಕೆ ಆವರಣದಲ್ಲಿರುವ ತೋಟಗಾರಿಕಾ ಮಹಾವಿದ್ಯಾಲಯ, ದಂಡಿನ್ ಫೌಂಡೇಷನ್ ಹಮ್ಮಿಕೊಂಡಿದ್ದ ‘ಅರಣ್ಯ ಓಟ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಟಿಂಬರ್‌ಗೆ ಅಥವಾ ವ್ಯಾವಹಾರಿಕವಾಗಿ ಮರಗಳನ್ನು ಬೆಳೆದರೆ ಸಾಲದು. ಭೂಮಿಯೊಳಗಿನ ಉಷ್ಣಾಂಶ ಸಮತೋಲನದಲ್ಲಿ ಇರಬೇಕಾದರೆ ಮರಗಳ ಸಂಖ್ಯೆ ಹೆಚ್ಚಾಗಬೇಕು. ಮರಗಳ ಬಳಕೆಯ ಬಗ್ಗೆ ಜನರಿಗೆ ಅರಿವು ಮೂಡಿಸುವ ಮೂಲಕ ಹೆಚ್ಚಾಗಿ ಮರಗಳನ್ನು ಬೆಳೆಸಲು ಎಲ್ಲರೂ ಸಂಕಲ್ಪ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ತೋಟಗಾರಿಕಾ ಮಹಾವಿದ್ಯಾಲಯದ ಡೀನ್ ಸಿ.ಜಿ.ಕೆ. ಸ್ವಾಮಿ ಮಾತನಾಡಿ, ‘ಅರಣ್ಯ, ತೋಟಗಾರಿಕೆ ಮತ್ತು ಆಹಾರ ಭದ್ರತೆಯ ನಡುವೆ ಪರಸ್ಪರ ಸಂಬಂಧವಿದ್ದು, ಮರ ಆಧಾರಿತ ಆಹಾರ ವ್ಯವಸ್ಥೆಗಳ ಪ್ರಚಾರದ ಮೂಲಕ ಹಸಿರು ಆರ್ಥಿಕತೆ ಬಗ್ಗೆ ಅರಿವು ಮೂಡಿಸಲು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯವು ಬದ್ಧವಾಗಿದೆ’ ಎಂದು ತಿಳಿಸಿದರು.

ಎಸ್ಟಾ ಸೊಸೈಟಿಯ ಅಧ್ಯಕ್ಷ ಅಚ್ಯುತರಾವ್, ರೈತ ಉತ್ಪಾದಕ ಉತ್ಕೃಷ್ಟ ಕೇಂದ್ರದ ನಿರ್ದೇಶಕ ಮೆಸ್ತಾ ಆರ್.ಕೆ., ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಡೀನ್ (ವಿದ್ಯಾರ್ಥಿ ಕಲ್ಯಾಣ) ವೆಂಕಟರಾವ್, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಅಂಬಿಕಾ ಡಿ.ಎಸ್. ಉಪಸ್ಥಿತರಿದ್ದರು.

ಚರಂಡಿ ಸ್ವಚ್ಛಗೊಳಿಸಿದ ಸಾರ್ವಜನಿಕರು


ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಮಮೂರ್ತಿನಗರ ವಾರ್ಡ್‌ನ ಕನಕನಗರದಲ್ಲಿ ಸಾರ್ವಜನಿಕರು ಚರಂಡಿ ಸ್ವಚ್ಛಗೊಳಿಸಿದರು.

ಚರಂಡಿಯಲ್ಲಿ ಹೂಳು, ಕಸ, ಕಡ್ಡಿ ತುಂಬಿಕೊಂಡಿದ್ದ ಕಾರಣ ಸಾರ್ವಜನಿಕರಿಗೆ ತೊಂದರೆ ಆಗಿತ್ತು. ಶನಿವಾರ ರಾತ್ರಿ ಸುರಿದ ಮಳೆಯಿಂದಾಗಿ ನೀರು ಸರಾಗವಾಗಿ ಹರಿಯದೆ ಮನೆಗಳಿಗೆ ಕೊಳಚೆ ನೀರು ಹರಿಯಿತು. ಇದರಿಂದಾಗಿ ಜನರು ಹೈರಾಣಾಗಿದ್ದರು.

ಚರಂಡಿ ಸ್ವಚ್ಛಗೊಳಿಸುವಂತೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದರೂ ಪ್ರಯೋಜನವಾಗಲಿಲ್ಲ. ಇದರಿಂದ ಬೇಸತ್ತ ಸ್ಥಳೀಯರು ತಾವೇ ಹೂಳು ತೆಗೆದು ಚರಂಡಿ ಸ್ವಚ್ಛಗೊಳಿಸಿದರು.


ಹಲವು ವರ್ಷಗಳಿಂದ ಚರಂಡಿ ಸ್ವಚ್ಛಗೊಳಿಸದ ಅಧಿಕಾರಿಗಳ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.



ಸಾರ್ವಜನಿಕರು ಚರಂಡಿ ಸ್ವಚ್ಛಗೊಳಿಸಿರುವುದು

ನಗರದಲ್ಲಿ ಇಂದು

ಗೌರವ ಪ್ರಶಸ್ತಿ, ಸಾಹಿತ್ಯಶ್ರೀ ಪ್ರಶಸ್ತಿ, ಪುಸ್ತಕ ಬಹುಮಾನ ಪ್ರದಾನ: ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಉಪಸ್ಥಿತಿ: ತೇಜಸ್ವಿ ಸೂರ್ಯ, ಪ್ರಾಸ್ತಾವಿಕ ನುಡಿ: ಎಲ್.ಎನ್. ಮುಕುಂದರಾಜ್, ಅಭಿನಂದನಾ ನುಡಿ: ಹಂ.ಪ. ನಾಗರಾಜಯ್ಯ, ಅತಿಥಿಗಳು: ಮಂಜುಳಾ ಎನ್., ಕೆ.ಎಂ. ಗಾಯಿತ್ರಿ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4



ಹಂ.ಪ. ನಾಗರಾಜಯ್ಯ

ಪುರುಷ ವಿದ್ಯಾರ್ಥಿನಿಲಯ ಮತ್ತು ಹೈಟೆಕ್ ಪಂಚಕರ್ಮ ಕೊಠಡಿಗಳ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಶೋಭಾ ಕರಂದ್ಲಾಜೆ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಆಯೋಜನೆ: ಆಯುಷ್ ಇಲಾಖೆ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಸ್ಥಳ: ಆತ್ರೇಯ ಸಭಾಂಗಣ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಸಂಜೆ 4

ಬೆಂಗಳೂರು ನಿರ್ಮಾತೃ ‘ನಾಡಪ್ರಭು ಕೆಂಪೇಗೌಡ’ ಐತಿಹಾಸಿಕ ನಾಟಕ ಪ್ರದರ್ಶನ: ನಿರ್ದೇಶನ: ಎಚ್.ಎನ್. ಆನಂದಮೂರ್ತಿ, ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಸಿದ್ಧರಾಮ ಚೈತನ್ಯ ಸ್ವಾಮೀಜಿ, ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ರಂಗಗೌರವ: ನಯನ್ ಕುಮಾರ್ ಗೌಡ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ವಿಶ್ವ ರಂಗಭೂಮಿ ದಿನಾಚರಣೆ, ಐದು ದಿನಗಳ ನಾಟಕೋತ್ಸವ: ಉದ್ಘಾಟನೆ: ಜಯಕರ ಎಸ್.ಎಂ., ಅತಿಥಿಗಳು: ಗೊಲ್ಲಹಳ್ಳಿ ಶಿವಪ್ರಸಾದ್, ಕೆ. ಷರೀಫಾ, ಸಿ. ಸೋಮಶೇಖರ್, ಹಂಸಿನಿ ನಾಗೇಂದ್ರ, ಶಿವಣ್ಣ ಎಸ್., ‘ಸಿಲ್ವರ್ ಬಾಕ್ಸ್’ ನಾಟಕ ಪ್ರದರ್ಶನ: ನಿರ್ದೇಶನ: ಕೆ. ರಾಮಕೃಷ್ಣಯ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

‘ವಿಕೇಂದ್ರೀಕರಣವಲ್ಲ, ಮರು ಕೇಂದ್ರೀಕರಣ’

ಪ್ರಜಾವಾಣಿ ವಾರ್ತೆ



ಗ್ರೇಟರ್ ಬೆಂಗಳೂರು ಏನೇನಾಗುತ್ತೆ?

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ’ ಮೂಲಕ ಅಧಿಕಾರ ವಿಕೇಂದ್ರೀಕರಣದ ಬದಲು ಮರು ಕೇಂದ್ರೀಕರಣ ಮಾಡಿಕೊಳ್ಳಲು ಸರ್ಕಾರ ಹುನ್ನಾರ ನಡೆಸುತ್ತಿದೆ. ನಗರ ಪಾಲಿಕೆಗಳಿಂದ ಅಧಿಕಾರ ಕಿತ್ತುಕೊಳ್ಳಲು ಯೋಜಿಸಿದೆ’ ಎಂದು ಚಿಂತಕ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

‘ನಗರದಲ್ಲಿ ರಸ್ತೆ, ಚರಂಡಿ ಸೇರಿದಂತೆ ಬೃಹತ್ ಯೋಜನೆಗಳನ್ನೆಲ್ಲ ಮುಖ್ಯಮಂತ್ರಿ ನೇತೃತ್ವದ ಗ್ರೇಟರ್ ಬೆಂಗಳೂರು ಪ್ರಾಧಿಕಾರವೇ (ಜಿಬಿಎ) ಇಟ್ಟುಕೊಂಡರೆ, ನಗರ ಪಾಲಿಕೆಗಳಿಗೆ ಉಳಿಯುವುದಾದರೂ ಏನು? ಪಾಲಿಕೆಯಲ್ಲಿ ಕಾರ್ಪೊರೇಟರ್‌ಗಳಿಲ್ಲದೆ ಸುಮಾರು ಐದು ವರ್ಷಗಳಾಗುತ್ತಿವೆ. ಈ ಅವಧಿಯಲ್ಲಿ ನಗರದ ಸಂಪೂರ್ಣ ಅಧಿಕಾರ ಹೊಂದಿದ್ದ ಸರ್ಕಾರ ಏನೂ ಮಾಡಿಲ್ಲ, ಮತ್ತೇಕೆ ಎಲ್ಲ ಅಧಿಕಾರ ಅವರಿಗೆ ಬೇಕು’ ಎಂದು ಪ್ರಶ್ನಿಸಿದರು.

‘ರಾಜೀವ್ ಗಾಂಧಿಯವರು ಸ್ಥಳೀಯ ಸಂಸ್ಥೆಗಳಿಗೆ, ಮೇಯರ್‌ಗಳಿಗೆ ಅಧಿಕಾರ ನೀಡಲು ಸಂವಿಧಾನಕ್ಕೆ 73 ಹಾಗೂ 74ನೇ ತಿದ್ದುಪಡಿ ತಂದರು. ಅಲ್ಲದೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನಾವು ಅಧಿಕಾರಕ್ಕೆ ಬಂದರೆ ಮೇಯರ್ ಅಧಿಕಾರದ ಅವಧಿಯನ್ನು ಐದು ವರ್ಷ ಮಾಡುತ್ತೇವೆ, ಕಾರ್ಪೊರೇಟರ್‌ಗಳಿಗೆ ಅಧಿಕಾರ ನೀಡುತ್ತೇವೆ ಎಂದು ಟ್ವೀಟ್ ಮಾಡಿದ್ದರು. ಈ ಎರಡೂ ಭರವಸೆಯನ್ನು ಕಾಂಗ್ರೆಸ್‌ನವರು ಅನುಷ್ಠಾನಕ್ಕೆ ತರುತ್ತಿಲ್ಲ’ ಎಂದು ದೂರಿದರು.

‘ಸರ್ಕಾರದಲ್ಲಿ ಕುಳಿತು ನಗರಕ್ಕೆ ಒಳ್ಳೆಯದ್ದನ್ನು ಮಾಡಲು ಸಾಧ್ಯವಿಲ್ಲ. ಅವರವರ ಊರನ್ನೇ ಪ್ರೀತಿಸದೆ, ಸರ್ಕಾರದಲ್ಲಿ ಕುಳಿತು ಕೊಂಡಿರುವವರು ಬೆಂಗಳೂರನ್ನು ಪ್ರೀತಿಸಲು ಸಾಧ್ಯವಿಲ್ಲ. ಅವರಿಗೆ ಬೆಂಗಳೂರಿನ ಬಗ್ಗೆ ಕಾಳಜಿಯೂ ಇಲ್ಲ. ನಾವು ರಾಜಕಾರಣಿಗಳ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದೇವೆ. ಅವರ ನಡೆಗಳ ಬಗ್ಗೆ ನಮಗೆ ವಿಶ್ವಾಸ ಇಲ್ಲ. ಎಲ್ಲ ಪಕ್ಷಗಳ ನಾಯಕರು ಒಂದೇ ರೀತಿಯವರಾಗಿದ್ದಾರೆ’ ಎಂದರು.

‘ಮೂರ್ನಾಲ್ಕು ತಿಂಗಳು ಓದಬೇಕಾದ ಮಸೂದೆಯ ಬಗ್ಗೆ, ಬೆಂಗಳೂರನ್ನು ವಿಭಜನೆ ಮಾಡಿ ಎಂದು ಹೇಳುತ್ತಿರುವವರ ಅಭಿಪ್ರಾಯವನ್ನು ಮೂರೇ ದಿನದಲ್ಲಿ ಪಡೆದ ವಿಧಾನಮಂಡಲದ ಸಮಿತಿಯವರು, ಅದನ್ನೇ ನಗರದ ಜನರ ಅಭಿಪ್ರಾಯ ಎಂದು ಬಿಂಬಿಸಿದ್ದಾರೆ. ಮಸೂದೆ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯೇ ಆಗಿಲ್ಲ’ ಎಂದು ಹೇಳಿದರು.

‘ಕಳಂಕ ಕಟ್ಟಿಕೊಳ್ಳಬೇಡಿ’



‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಬೇಕು, ಕಳಂಕ ಕಟ್ಟಿಕೊಳ್ಳಬಾರದು. ಸಿದ್ದರಾಮಯ್ಯ ಅವರು ಬೆಂಗಳೂರನ್ನು ದಯವಿಟ್ಟು ಕಾಪಾಡಬೇಕು’ ಎಂದು ಪ್ರಕಾಶ್ ಬೆಳವಾಡಿ ಆಗ್ರಹಿಸಿದರು.

‘ಉಪ ಮುಖ್ಯಮಂತ್ರಿಯವರು ನಗರದಲ್ಲಿ ಕಸದ ಮಾಫಿಯಾ ಇದೆ ಎಂದು ಹೇಳುತ್ತಿದ್ದಾರೆ. ನಾವು ಯಾರಿಗೆ ದೂರು ನೀಡಬೇಕಿತ್ತು, ನಾವೇ ಅವರನ್ನು ಕೇಳಬೇಕಿತ್ತು. ಆದರೆ, ಅವರೇ ಮಾಫಿಯಾ ಇದೆ ಎಂದು ದೂರು ನೀಡುತ್ತಿದ್ದಾರೆ. ಆ ವ್ಯಕ್ತಿ ಬಗ್ಗೆ ನಮಗೆ ಹೆದರಿಕೆ ಆಗುತ್ತೆ, ಎಚ್ಚರಿಕೆಯಿಂದ ಇರಬೇಕು’ ಎಂದರು. ‘ನಿಮಗೆ ಬಹುಮತ ಸಿಕ್ಕಿರುವುದು ಜನರಿಗೆ ಬೇಕಾಗಿರುವುದನ್ನು ಮಾಡುವುದಕ್ಕೆ. ನಿಮಗಿಷ್ಟವಾಗಿರುವುದನ್ನು ಮಾಡುವುದಕ್ಕಲ್ಲ’ ಎಂದು ಹೇಳಿದರು.

ಚುನಾವಣೆ ಮುಂದೂಡುವ ತಂತ್ರ



ಜವಾಬ್ದಾರಿಯುತ ಸರ್ಕಾರವು ನಿಯಮಿತವಾಗಿ ನಡೆಯಬೇಕಿದ್ದ ಬಿಬಿಎಂಪಿ ಚುನಾವಣೆಯನ್ನು ಮಾಡಿ ನಂತರ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ರಚನೆಯ ಸಾಧಕ-ಬಾಧಕಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ವ್ಯವಸ್ಥಿತವಾಗಿ ಕಾರ್ಯಗತಗೊಳಿಸಬೇಕಿತ್ತು. ಅದನ್ನು ಬಿಟ್ಟು ನಾಲ್ಕು ವರ್ಷಗಳಿಂದ ನಡೆಯದ ಬಿಬಿಎಂಪಿ ಚುನಾವಣೆಯನ್ನು ಮುಂದೂಡುವ ತಂತ್ರದ ಭಾಗವಾಗಿಯೇ ಏಕಾಏಕಿ ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ’ ರಚಿಸಲು ಸರ್ಕಾರ ಮುಂದಾಗಿದೆ. ಬೆಂಗಳೂರು ಅಭಿವೃದ್ಧಿ ಸಚಿವರಿಗೆ ಹಾಗೂ ಶಾಸಕರಿಗೆ ಪಾಲಿಕೆಯಲ್ಲಿ ಈಗಿರುವ ತಮ್ಮ ಹತೋಟಿ ಕೈತಪ್ಪುವಂತೆ ಮಾಡುವ ಬಿಬಿಎಂಪಿ ಚುನಾವಣೆ ನಡೆಯುವುದು ಬೇಡವಾಗಿದೆ. ಅದಕ್ಕಾಗಿಯೇ ವಿವಿಧ ನೆಪಗಳನ್ನು ಸೃಷ್ಟಿಸಲಾಗುತ್ತಿದೆ

ಸತೀಶ್ ಕುಮಾರ್, ಅಧ್ಯಕ್ಷ, ಆಮ್ ಆದ್ಮಿ ಪಾರ್ಟಿ, ಬೆಂಗಳೂರು ನಗರ

ಮೇಯರ್ ಅಗತ್ಯವೇನು?



ಪಾಲಿಕೆಯ ಆಡಳಿತ ವ್ಯವಸ್ಥೆಯಲ್ಲಿ ಸಂವಿಧಾನದ 74ನೇ ತಿದ್ದುಪಡಿಯ ಅನುಸಾರ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳು ನಿರ್ವಹಿಸುತ್ತಿದ್ದವು. ಈಗ ಆ ಎಲ್ಲ ಅಧಿಕಾರವನ್ನು ಬಿಡುವಿಲ್ಲದ, ಸದಾ ರಾಜಕೀಯ ಜಂಜಾಟದ ನಡುವೆ ಇರುವ ಮುಖ್ಯಮಂತ್ರಿ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವರು ವಹಿಸಿಕೊಳ್ಳುತ್ತಾರೆ. ಎಲ್ಲ ಆಡಳಿತಾತ್ಮಕ ಅಧಿಕಾರವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವೇ ಚಲಾಯಿಸುವುದಾದರೆ ಪಾಲಿಕೆಗೆ ಮೇಯರ್ ಮತ್ತು ಸದಸ್ಯರ ಅಗತ್ಯವೇನಿದೆ? ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಅಧಿಕಾರವೇ ಸೂಕ್ತ.

ಆರ್. ಕುಮಾರ್, ಕಮಲಾನಗರ

‘ಗ್ರೇಟರ್ ಬೆಂಗಳೂರು’: ನೀವೇನನ್ನುತ್ತೀರಿ?

ರಾಜ್ಯ ಸರ್ಕಾರ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024’ ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರಡಿ ನಗರಪಾಲಿಕೆಗಳನ್ನು ರಚಿಸಲು ಮುಂದಾಗಿದೆ. ಈ ಬಗ್ಗೆ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ‘ಪ್ರಜಾವಾಣಿ’ಗೆ ಕಳುಹಿಸಬಹುದು. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರದೊಂದಿಗೆ ವಾಟ್ಸ್ ಆ್ಯಪ್‌ಗೆ ಕಳುಹಿಸಿ.

96060 38256

ಬಿಬಿಎಂಪಿಗೆ ₹390 ಕೋಟಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 20.5 ಲಕ್ಷ ಜನರಲ್ಲಿ 3.49 ಲಕ್ಷ ನಾಗರಿಕರು ₹390 ಕೋಟಿ ಆಸ್ತಿ ತೆರಿಗೆಯನ್ನು ಪಾವತಿಸಿಲ್ಲ. ಅದರಲ್ಲಿ 1.73 ಲಕ್ಷ ಜನರು ದೀರ್ಘಕಾಲದ ಸುಸ್ತಿದಾರರು ಮತ್ತು 1.76 ಲಕ್ಷ ಜನರು ಪ್ರಸ್ತುತ ವರ್ಷದ ಸುಸ್ತಿದಾರರಾಗಿದ್ದಾರೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಆಸ್ತಿ ತೆರಿಗೆಯನ್ನು ಪಾವತಿಸದವರಿಗೆ ನೋಟಿಸ್, ಸಂದೇಶ, ಐವಿಆರ್‌ಎಸ್ ಕರೆ, ವೈಯಕ್ತಿಕ ಕರೆ, ಮುಟ್ಟುಗೋಲು ನೋಟಿಸ್ ಕಳುಹಿಸಿದರೂ ದೀರ್ಘ ಕಾಲದ ಸುಸ್ತಿದಾರರು ತೆರಿಗೆ ಪಾವತಿಸಿಲ್ಲ.



ಒಂದು ಬಾರಿ ಪರಿಹಾರ ಯೋಜನೆಯ (ಒಟಿಎಸ್) ಪ್ರಯೋಜನ ಪಡೆಯದೇ ಉದ್ದೇಶಪೂರ್ವಕವಾಗಿ ದೀರ್ಘಕಾಲದ ಸುಸ್ತಿದಾರರಾಗಿದ್ದಾರೆ. ಇಂಥವರನ್ನು ಬಿಟ್ಟುಬಿಡುವುದು ಪ್ರಾಮಾಣಿಕ ತೆರಿಗೆ ಪಾವತಿದಾರರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿಯು ಕಾನೂನಾತ್ಮಕವಾಗಿ ಆಸ್ತಿ ತೆರಿಗೆ ಸಂಗ್ರಹಿಸಲು ನಿರ್ಧರಿಸಿದೆ. ದೀರ್ಘಕಾಲದ ಸುಸ್ತಿದಾರರ ವಿರುದ್ಧ ಬಿಬಿಎಂಪಿಯ ಅಭಿಯಾನ ನಡೆಸಲಿದೆ ಎಂದು ಮಾಹಿತಿ ನೀಡಿದ್ದಾರೆ.

ಕೆ.ಆರ್.ಪುರ: ರಕ್ತದಾನ ಶಿಬಿರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ನೈಜ ರಾಷ್ಟ್ರ ಪ್ರೇಮಿಗಳಾಗಿದ್ದ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರ ಸ್ಮರಣೆ ಎಲ್ಲರೂ ಮಾಡಬೇಕಿದೆ ಎಂದು ಸಿಲಿಕಾನ್ ಸಿಟಿ ಕಾಲೇಜು ಅಧ್ಯಕ್ಷ ಚಂದ್ರಶೇಖರ್ ಹೇಳಿದರು.

ಭಗತ್ ಸಿಂಗ್, ರಾಜಗುರು, ಸುಖದೇವ್ ಅವರ ಬಲಿದಾನದ ಸ್ಮರಣಾರ್ಥ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಮೂವರು ಸ್ವಾತಂತ್ರ್ಯ ಹೋರಾಟಗಾರರು ಸೈದ್ಧಾಂತಿಕವಾಗಿ ಬಹಳಷ್ಟು ಪ್ರಬುದ್ಧರಾಗಿದ್ದರು. ದೇಶದ ಜನರ ನಾಡಿ ಮಿಡಿತವನ್ನು ಬಲ್ಲವರಾಗಿದ್ದರಿಂದ ಅಗ್ರಮಾನ್ಯ ನಾಯಕರೆನಿಸಿಕೊಂಡಿದ್ದರು. ಶೋಷಣೆ ಇಲ್ಲದ ಸಮಾಜ ಸ್ಥಾಪಿಸಬೇಕೆಂದು ಕನಸು ಕಂಡಿದ್ದರು ಎಂದು ವಿವರಿಸಿದರು.

ರೆಡ್‌ಕ್ರಾಸ್ ಸೊಸೈಟಿ, ರೋಟರ್‍ಯಾಕ್ಟ್ ಕ್ಲಬ್, ರೋಟರಿ ಮಾನ್ಯತಾ ಸಹಯೋಗದಲ್ಲಿ ರಕ್ತದಾನ ಶಿಬಿರ ನಡೆಯಿತು. ಮುಖಂಡ ಬಿ. ಅಮರನಾಥ್ ರೆಡ್ಡಿ, ಕಾಲೇಜು ನಿರ್ದೇಶಕ ಮುಕುಂದ, ಸಿಇಒ ಧನ್ಯತೇಜಸ್, ಭಾನು ಪ್ರದ್ಯುಮ್ನ ಭಾಗವಹಿಸಿದ್ದರು.



ನಲಿಯುತ ಕಲಿಯುವ ಕಂಪ್ಯೂಟರ್ ಪ್ರೊಗ್ರಾಮಿಂಗ್

ಆ್ಯಪ್‌ಗಳ ಹೆಸರು	ವೆಬ್‌ಲಿಂಕ್
CodeCombat	https://codecombat.com/
Grasshopper	https://grasshopper.com/apps/
Google Cloud Skills Boost Arcade	https://go.cloudskillsboost.google/arcade
Machine Learning for Kids	https://machinelearningforkids.co.uk/
TensorFlow Playground	https://playground.tensorflow.org/
Cloud-Attack	https://www.cloudattack.in/
Scratch Jr.	https://www.scratchjr.org/

ರವಿಚಂದ್ರ ಎಂ.

ಏಳನೇ ತರಗತಿಯ ಕೊನೆಯ ಪರೀಕ್ಷೆ ಮುಗಿಯಿತು. ಗಣಿತ ಪರೀಕ್ಷೆ ಬರೆದು ಮುಗಿಸಿದ ಖುಷಿಗೋ, ಬೇಸಿಗೆಯ ರಜೆಗಳಲ್ಲಿ ಅಡಗಿರುವ ಮಜಾವನ್ನು ನೆನೆದೋ ಪರೀಕ್ಷಾ ಕೊಠಡಿಯಿಂದ ಹೊರಬರುತ್ತಿದ್ದಂತೆ ಅಮರ್ ಮತ್ತು ಅನನ್ಯರ ಮುಖಗಳಲ್ಲಿ ಖುಷಿಯ ಸಂಭ್ರಮ ಕಾಣಿಸಿತು. ಪರೀಕ್ಷೆಯ ಕಾರಣಕ್ಕಾಗಿ ಕಳೆದ ಇಪ್ಪತ್ತು ದಿನಗಳಿಂದ ಮೊಬೈಲ್ ಫೋನ್ ಬಳಸಲು ನಿರ್ಬಂಧವಿದ್ದರಿಂದ ಸೀದಾ ತಮ್ಮ ಅಮ್ಮಂದಿರ ಕೈಚೀಲದಲ್ಲಿ ಅಡಗಿ ಕುಳಿತಿದ್ದ ಫೋನ್ ಅನ್ನು ಕಸಿದುಕೊಂಡು ನೇರವಾಗಿ ಶಾಲಾ ಆವರಣದಲ್ಲಿ ತಂಪಗೆ ನೆರಳು ಕೊಡುತ್ತಿದ್ದ ಹೊಂಗೆ ಮರಗಳ ಅಡಿ ಇರುವ ಕಲ್ಲು ಬೆಂಚುಗಳತ್ತ ಓಡಿದರು.



ಆ ಕ್ಷಣಕ್ಕೆ ಅಮರ್‌ಗೆ ತಮ್ಮ ಕಂಪ್ಯೂಟರ್ ಶಿಕ್ಷಕಿ ಮಾರ್ಗರೇಟ್ ಹೇಳಿದ್ದ 'ಈ ಸಲದ ರಜೆಯಲ್ಲಿ ಕಂಪ್ಯೂಟರ್ ಗೇಮ್ ಆಡಿ. ಅದೇ ನಿಮಗೆ ಹೋಂವರ್ಕ್' ಎಂಬ ಮಾತೊಂದು ನೆನಪಾಯಿತು. ತಮ್ಮ ಟೀಚರ್ ಪಟ್ಟಿ ಮಾಡಿ ಕೊಟ್ಟಿದ್ದ ಆ್ಯಪ್‌ಗಳಲ್ಲಿ 'CodeCombat' ಇದನ್ನು ಗೂಗಲ್ ಆ್ಯಪ್ ಸ್ಟೋರ್‌ನಿಂದ ಲಗುಬಗನೇ ಡೌನ್‌ಲೋಡ್ ಮಾಡಿದ. 'ಈ ಗೇಮ್‌ನಲ್ಲಿ ಏನಿರಬಹುದು?' ನೋಡೋಣ ಇರು ಎಂದು ಅನನ್ಯಳಿಗೂ ಹೇಳಿದ. ಇಬ್ಬರ ದೃಷ್ಟಿ ಫೋನ್‌ನ ಸ್ಕ್ರೀನ್ ಮೇಲೆ ಇತ್ತು.

ಅಮರ್ ದೊಡ್ಡ ದೊಡ್ಡ ಗುಹೆಗಳ ಪ್ರವೇಶ ದ್ವಾರದ ಮೂಲಕ ಒಳ ಹೋಗಲು ತನ್ನ ಟೀಚರ್ ಕಲಿಸಿಕೊಟ್ಟಿದ್ದ (Python) ಪೈಥಾನ್ ಪ್ರೊಗ್ರಾಮ್‌ನ ಕೋಡ್/ಸೂಚನೆಗಳನ್ನು ನಮೂದಿಸುತ್ತ ಒಂದೊಂದೇ ಗುಹೆಯ ಬಾಗಿಲು ತೆರಯುತ್ತ ಹೋದ. ಅವನ ಕುತೂಹಲ ಗೇಮ್ ಗೆಲ್ಲುವುದಾದರೂ, ಆಟ ಒಂದು ಹಂತ ತಲುಪುವ ಹೊತ್ತಿಗೆ ಪೈಥಾನ್ ಪ್ರೊಗ್ರಾಮಿಂಗ್‌ನಲ್ಲಿ ಆಸಕ್ತಿ ತಳೆದ. ಅಮರ್ ಆಡುತ್ತಿದ್ದಂತೆ ಅನನ್ಯಳಿಗೂ ಕುತೂಹಲ ತಡೆಯಲಾಗಲಿಲ್ಲ. ಅವಳು ತನ್ನ ಅಮ್ಮನ ಫೋನ್‌ನಲ್ಲಿ 'Grasshopper' ಎಂಬ ಆ್ಯಪ್ ಡೌನ್‌ಲೋಡ್ ಮಾಡಿದಳು. ಅನೇಕ ಪಜಲ್‌ಗಳು (Puzzles) ಆಕೆಯ ಫೋನ್ ಪರದೆ ಮೇಲೆ ಮೂಡಿದವು. ಒಂದು ಆಟವಂತೂ ಅವಳ ಮನಸೂರೆ ಮಾಡಿತು. ಅದು ಲೆಗೋ-ಬ್ರಿಕ್ಸ್ (Lego-Bricks) ಜೋಡಿಸುವ ಆಟ. ಆದರೆ, ಅದರಲ್ಲಿನ ವಿಶೇಷತೆ ಒಂದೊಂದು ಇಟ್ಟಿಗೆಯು ಜಾವಾಸ್ಕ್ರಿಪ್ಟ್ (JavaScript) ಪ್ರೊಗ್ರಾಮ್‌ನ ಭಾಗವಾಗಿತ್ತು. ಅದನ್ನು ಆಡುತಾ ಆಡುತಾ ಅನನ್ಯ ತನಗೆ ಅರಿವಿಲ್ಲದಂತೆ ಜಾವಾ ಸ್ಕ್ರಿಪ್ಟ್‌ನಲ್ಲಿ ಆಸಕ್ತಿ ಸಾಧಿಸತೊಡಗಿದಳು. ಇನ್ನು ಇವರನ್ನು ಜತೆಗೂಡಿದ ಸಾದಿಕ್, ತನ್ನ ಫೋನ್‌ನಲ್ಲಿ 'Google Cloud Skills Boost Arcade' ಎಂಬ ಆ್ಯಪ್ ಡೌನ್‌ಲೋಡ್ ಮಾಡಿ ಅದರಲ್ಲಿ ಏನಿದೆ ಎಂದು ಕುತೂಹಲಗೊಂಡ. ಪುಟ್ಟ ಪುಟ್ಟ ಆಟಗಳ ಮೂಲಕ ವರ್ಚುವಲ್ ಮಷೀನ್ ಎಂದರೆ ಏನು, ಡೇಟಾ ಸ್ಟೋರೇಜ್‌ನ ರೂಪುರೇಷೆಗಳ ಬಗ್ಗೆ ಕಲಿಯುತ್ತ ಕ್ಲೌಡ್ ಕಂಪ್ಯೂಟಿಂಗ್ ಲೋಕವನ್ನೇ ಸೃಷ್ಟಿಸತೊಡಗಿದ.

ಎಲ್ಲರೂ ಜತೆಗೂಡಿ ಏನು ಮಾಡುತ್ತಿರುವರು? ಎಂದು ದೂರದಿಂದಲೇ ಕುತೂಹಲಗೊಂಡ ಗೌತಮ್‌ನಿಗೆ ಹೊಸ ವಿಚಾರಗಳನ್ನು ಅನ್ವೇಷಿಸುವ ತವಕ. ಆತ ಕೂಡಲೇ ಇವರ ಕಾರ್ಯದಿಂದ ಉತ್ಸಾಹಗೊಂಡು 'Machine Learning for Kids' ಎಂಬ ಆ್ಯಪ್ ಡೌನ್‌ಲೋಡ್ ಮಾಡಿದ. ನಾಯಿ, ಕುದುರೆ, ಒಂಟೆ, ಬೆಕ್ಕು ಇವುಗಳ ಚಿತ್ರ ಒದಗಿಸಿ, ತನ್ನ ಆ್ಯಪ್ ಅವುಗಳನ್ನು ಯಾವ ರೀತಿ ಗುರುತಿಸುತ್ತದೆ ಎಂಬುದನ್ನು ನೋಡಿ ತನ್ನ ಸಹಪಾಠಿಗಳಿಗೂ ತೋರಿಸಿದ.

ಜೀವವಿಜ್ಞಾನದಲ್ಲಿ ಕ್ಲಾಸಿಗೆ ಟಾಪರ್ ಎನಿಸಿಕೊಂಡಿದ್ದ ಆಸ್ಮಾ, ತನ್ನ ಫೋನ್‌ನಲ್ಲಿ 'TensorFlow Playground' ಎಂಬ ಆ್ಯಪ್ ಇರುವುದನ್ನು ತೋರಿಸಿದಳು. ಈ ಆ್ಯಪ್ ಕಂಪ್ಯೂಟರ್‌ನ ನ್ಯೂರಲ್ ನೆಟ್ವರ್ಕ್ಸ್ (Neural Networks) ಹೇಗೆ ಕಾರ್ಯನಿರ್ವಹಿಸುತ್ತೆ ಎಂಬುದರ ಚಿತ್ರಣವನ್ನು ಸೊಗಸಾಗಿ ಒದಗಿಸಿತ್ತು. ಇದೇ ಸಮಯಕ್ಕೆ ಬಂದ ಶಾಲೆಯ ಹಳೆಯ ವಿದ್ಯಾರ್ಥಿ ಬಸವ, ತಾನು 'ಕ್ಲಾಡ್-ಅಟ್ಯಾಕ್' ಆ್ಯಪ್ ಅನ್ನು ಸ್ನೇಹಿತರ ಜತೆಗೂಡಿ ರೂಪಿಸಿರುವ ಬಗ್ಗೆ ತಿಳಿಸಿದ. ಆಟದ ಮೂಲಕವೇ ಕ್ಲೌಡ್ ಬಗ್ಗೆ ಕಲಿಯಬಹುದು ಎಂದು ತಿಳಿಸಿದ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಮಕ್ಕಳು Scratch Jr. ಎಂಬ ಆ್ಯಪ್ ಮೂಲಕ ಪ್ರೊಗ್ರಾಮಿಂಗ್ ಕಲಿಯಬಹುದು ಎಂಬ ಮಾಹಿತಿಯನ್ನೂ ಕೊಟ್ಟ. ಎಲ್ಲ ಸಹಪಾಠಿಗಳು ಒಬ್ಬರಿಗೊಬ್ಬರು ಮುಖ ನೋಡಿಕೊಂಡರು.

ಮೊಬೈಲ್ ಇರುವುದು ಬರೀ ರೀಲ್ಸ್, ಫೇಸ್‌ಬುಕ್, ಇನ್‌ಸ್ಟಾ ನೋಡಲು ಅಲ್ಲ. ಮನರಂಜನೆಯ ಜತೆಗೆ ಕಲಿಕೆಯನ್ನು ವ್ಯವಸ್ಥಿತವಾಗಿ ಮಾಡಲು ಸಾಧ್ಯ. ಅದಕ್ಕೆ ಸರಿಯಾದ ಅರಿವು ಇರಬೇಕು ಎಂಬ ನಿರ್ಧಾರಕ್ಕೆ ಬಂದರು. ಪರಸ್ಪರ ಮಾತನಾಡಿಕೊಂಡು, ರಜೆಯಲ್ಲಿ ಯಾವ ಪ್ರೊಗ್ರಾಮಿಂಗ್ ಕಲಿಯಬಹುದು ಎಂಬುದರ ಲೆಕ್ಕಚಾರ ಹಾಕತೊಡಗಿದರು.

ವಿದ್ಯಾರ್ಥಿ ವೇತನ ಕೈಪಿಡಿ

ಸೌತ್ ಏಷಿಯಾ ಪೋಸ್ಟ್‌ಗ್ರಾಜುಯೇಟ್ ಎಕ್ಸಲೆನ್ಸ್

ಯೂನಿವರ್ಸಿಟಿ ಆಫ್ ನಾಟಿಂಗ್‌ಹ್ಯಾಮ್ ನೀಡುವ ಅವಕಾಶ ಇದಾಗಿದೆ.

ಅರ್ಹತೆ: ಉನ್ನತಮಟ್ಟದ ಅಧ್ಯಯನ ಮಾಡಲು ಇಚ್ಛಿಸುವ ಸೌತ್ ಏಷಿಯಾದ ವಿದ್ಯಾರ್ಥಿಗಳಿಗೆ ಪೂರ್ಣಾವಧಿ ಸ್ನಾತಕೋತ್ತರ ಕೋರ್ಸ್‌ನ ಬೋಧನಾ ಶುಲ್ಕದ ಒಂದು ಅಂಶದಷ್ಟನ್ನು ಒದಗಿಸಲಿದೆ. ಭಾರತವೂ ಸೇರಿದಂತೆ ನಿರ್ದಿಷ್ಟ ಸೌತ್ ಏಷ್ಯಾ ದೇಶಗಳ ನಿವಾಸಿಗಳಿಗೆ ಲಭ್ಯವಿರುತ್ತದೆ. ಅಭ್ಯರ್ಥಿಗಳು ಸಾಗರೋತ್ತರ ವಿದ್ಯಾರ್ಥಿಗಳಾಗಿರಬೇಕು. ಅವರು 2025-26ರ ಶೈಕ್ಷಣಿಕ ಅವಧಿಯಲ್ಲಿ ಪೂರ್ಣಾವಧಿಯ ಸ್ನಾತಕೋತ್ತರ ಕೋರ್ಸ್‌ಗೆ ಸೇರುವ ಉದ್ದೇಶ ಇಟ್ಟುಕೊಂಡಿರಬೇಕು.

ಆರ್ಥಿಕ ಸಹಾಯ: ಬೋಧನಾ ಶುಲ್ಕಗಳಿಗೆ £8,000 (ಅಂದಾಜು ₹8,51,016) ವರೆಗೆ.

ಅರ್ಜಿ ಸಲ್ಲಿಸಲು ಕೊನೆ ದಿನ: 14-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/SAPE1

ಆಲ್‌ಸ್ಟಮ್ ಇಂಡಿಯಾ ಸ್ಕಾಲರ್‌ಷಿಪ್

ಉನ್ನತ ಶಿಕ್ಷಣವನ್ನು ಮುಂದುವರಿಸಲು ಆಲ್‌ಸ್ಟಮ್ ಇಂಡಿಯಾ ನೀಡುವ ಅವಕಾಶ ಇದಾಗಿದೆ.

ಅರ್ಹತೆ: 2024–25ನೇ ಸಾಲಿನ ಐಟಿಐ/ಡಿಪ್ಲೊಮಾ, ಪದವಿ ಅಥವಾ ಸ್ಟೆಮ್ ಕೋರ್ಸ್‌ಗಳಲ್ಲಿ ವೃತ್ತಿಪರ ಪದವಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು. ಅಭ್ಯರ್ಥಿಗಳು ತಮ್ಮ ಹಿಂದಿನ ಶೈಕ್ಷಣಿಕ ವರ್ಷ/ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದಲೂ ₹6,00,000ಕ್ಕಿಂತ ಕಡಿಮೆ ಅಥವಾ ಅದಕ್ಕೆ ಸಮನಾಗಿರಬೇಕು.

ಆರ್ಥಿಕ ಸಹಾಯ: ₹75,000ದವರೆಗೆ (ಒಂದು ಬಾರಿ)

ಅರ್ಜಿ ಸಲ್ಲಿಸಲು ಕೊನೆ ದಿನ: 04-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/AISDG8

ಟೋಫಲ್ ಗ್ಲೋಬಲ್ ಸ್ಕಾಲರ್‌ಷಿಪ್

ವಿದೇಶದಲ್ಲಿ ಅಧ್ಯಯನ ನಡೆಸಲು ಇಚ್ಛಿಸುವ ಕಾಲೇಜು ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಸಹಾಯ ಮಾಡುವ ಉದ್ದೇಶವನ್ನು ಟೋಫಲ್ ಹೊಂದಿದೆ.

ಅರ್ಹತೆ: ಭಾರತದಾದ್ಯಂತ ವಾಸಿಸುವ, 3ನೇ ಮತ್ತು 4ನೇ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು 2 ವರ್ಷಗಳವರೆಗಿನ ಕೆಲಸದ ಅನುಭವವಿರುವ ವೃತ್ತಿಪರರಿಗೆ ಲಭ್ಯವಿರುತ್ತದೆ.

ಆರ್ಥಿಕ ಸಹಾಯ: ₹1.3 ಲಕ್ಷದ ಒಟ್ಟು ಪ್ರಶಸ್ತಿ ಮೊತ್ತ ಮತ್ತು ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೆ ದಿನ: 30-04-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/TGSC1

ಎಸ್‌ಬಿಐಎಫ್‌ನ ಆಶಾ ಸ್ಕಾಲರ್‌ಷಿಪ್

ಎಸ್‌ಬಿಐ ಫೌಂಡೇಷನ್‌ನಡಿ ಬರುವ ಒಂದು ಉಪಕ್ರಮವಾಗಿದ್ದು, ಕಡಿಮೆ ಆದಾಯವಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುವ ಗುರಿ ಹೊಂದಿದೆ.

ಅರ್ಹತೆ: ವಿದೇಶದಲ್ಲಿ ವಿಶ್ವವಿದ್ಯಾಲಯ ಅಥವಾ ಕಾಲೇಜಿನಲ್ಲಿ ಸ್ನಾತಕೋತ್ತರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದ ಕೋರ್ಸ್‌ಗೆ ದಾಖಲಾಗಿರಬೇಕು. ಎಸ್‌ಸಿ ಮತ್ತು ಎಸ್‌ಟಿ ವರ್ಗದ ವಿದ್ಯಾರ್ಥಿಗಳಿಗೆ ಆದ್ಯತೆ. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75ರಷ್ಟು ಅಂಕಗಳನ್ನು ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹6,00,000 ಇರಬೇಕು.

ಆರ್ಥಿಕ ನೆರವು: ₹20,00,000ದವರೆಗೆ ಅಥವಾ ಕೋರ್ಸ್-ಸಂಬಂಧಿತ ಖರ್ಚುಗಳ ಶೇ 50ರಷ್ಟು (ಯಾವುದು ಕಡಿಮೆಯೋ ಅದು).

ಅರ್ಜಿ ಸಲ್ಲಿಸಲು ಕೊನೆ ದಿನ: 31-03-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/praja/SBIFS12

ಶಿಕ್ಷಕರ–ಪಾಲಕರ ಆತಂಕ ನಿವಾರಣೆ ಹೇಗೆ?

● ನಾನು ಪ್ರಾಢಶಾಲಾ ಶಿಕ್ಷಕಿ. ನಮಗೆಲ್ಲರಿಗೆ ಇದು ಪರೀಕ್ಷಾ ಕಾಲ. ಈ ಸಂದರ್ಭದಲ್ಲಿ ಶಿಕ್ಷಕರು ಹಾಗೂ ಪಾಲಕರಿಗೆ ಇರುವ ಆತಂಕಗಳ ನಿವಾರಣೆಗೆ ಮಾರ್ಗೋಪಾಯಗಳೇನು?



ಸಮಾಧಾನ

ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಪ್ರಶ್ನೆ ಸಮಯೋಚಿತವಾಗಿದೆ. ವಿದ್ಯಾರ್ಥಿಗಳಂತೆ ಪಾಲಕರಿಗೂ, ಶಿಕ್ಷಕರಿಗೂ ಸಾಕಷ್ಟು ಆತಂಕಗಳಿರುವುದು ಸಹಜ. ಆದರೆ, ಈ ಆತಂಕವನ್ನು ತೀವ್ರವಾಗಿ ವ್ಯಕ್ತಪಡಿಸುವುದರಿಂದ ಮಕ್ಕಳ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುತ್ತವೆ. ಹಾಗಾಗಿ, ಪಾಲಕರು ತಮ್ಮ ಮನಸ್ಸಿನೊಳಗಿನ ಆತಂಕವನ್ನು, ಮಕ್ಕಳ ಮೇಲಿನ ನಿರೀಕ್ಷೆಯನ್ನು ಇತಿಮಿತಿಯಲ್ಲಿಟ್ಟುಕೊಳ್ಳುವುದು ಒಳಿತು.

ಪರೀಕ್ಷೆಗೆ ಹೋಗುವ ದಿನ ಮಗುವಿಗೆ ಪ್ರೋತ್ಸಾಹದಾಯಕ ಮಾತುಗಳನ್ನಾಡಬೇಕು. ಪರೀಕ್ಷೆಯ ಬಗ್ಗೆ ಆತಂಕ ಮಾಡಿಕೊಳ್ಳಬೇಕಿಲ್ಲ. ಅಕಸ್ಮಾತ್ ಏನಾದರೂ ಹೆಚ್ಚು ಕಡಿಮೆಯಾದರೆ, ಪರೀಕ್ಷೆ ಮತ್ತೆ ಬರುತ್ತದೆ. ಆಗ ಬರೆದು ಪಾಸಾಗಬಹುದು. ಆದರೆ, ಮಗುವಿನ ಮನಸ್ಸಿಗೆ ಗಾಸಿಯಾದರೆ ಮುಗಿಯಿತು. ಅದು ಮಾಯುವುದಿಲ್ಲ. ಪರೀಕ್ಷೆಗಿಂತಲೂ ಮಗುವಿನ ಮನಸ್ಸು ಮುಖ್ಯ.

ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ತೆಗೆದುಕೊಂಡರೆ, ಅಕಸ್ಮಾತ್ ನಪಾಸಾದರೆ ಆತಂಕಪಡಬೇಕಿಲ್ಲ. ವಿದ್ಯಾರ್ಥಿ ಕೀಳರಿಮೆಗೆ ಒಳಗಾಗಬೇಕಿಲ್ಲ. ಪಾಸಾಗುತ್ತೇನೆ ಎನ್ನುವ ಭರವಸೆಯಿಂದ ಮತ್ತೆ ಪರೀಕ್ಷೆಯನ್ನು ಬರೆಯಬೇಕು. ಪಾಸಾಗಬೇಕು. ಬದುಕನ್ನು ರೂಪಿಸಿಕೊಳ್ಳಬೇಕು. ಇಲ್ಲಿ ಒಬ್ಬರ ಬದುಕಿನ ಹಾಗೆ ಇನ್ನೊಬ್ಬರ ಬದುಕಿಲ್ಲ. ಇಲ್ಲಿ ಪ್ರತಿಯೊಬ್ಬರದ್ದೂ ವಿಶೇಷವಾದ ಬದುಕು. ಇದುವೇ ಬದುಕಿನ ಸೋಜಿಗ. ಎದೆಗುಂದದೇ ಮುನ್ನಡೆಯುತ್ತ ಇರಬೇಕು. ಅದುವೇ ಯಶಸ್ಸನ್ನು ಗಳಿಸುವುದಕ್ಕಿರುವ ಮಂತ್ರ. ಉತ್ಸಾಹವನ್ನು ಕಳೆದುಕೊಳ್ಳದೇ ಮುನ್ನಡೆಯುವುದೇ ತಂತ್ರ.

ಇನ್ನು, ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ನಿರಾಳವಾಗಿ ಇರಬೇಕು. ಪ್ರಶ್ನೆಪತ್ರಿಕೆಯನ್ನು ಸಮಾಧಾನವಾಗಿ ಪರಿಶೀಲಿಸಬೇಕು. ಯಾವೆಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳು ಗೊತ್ತಿವೆ ಎನ್ನುವುದನ್ನು ಗುರುತು ಹಾಕಿಕೊಳ್ಳಬೇಕು. ಅವುಗಳನ್ನು ಒಂದೊಂದಾಗಿ ಬರೆಯಬೇಕು. ಅರ್ಧಂಬರ್ಧ ಉತ್ತರ ಗೊತ್ತಿರುವ ಪ್ರಶ್ನೆಗಳನ್ನು ನಂತರ ಉತ್ತರಿಸಲಿಕ್ಕೆ ಪ್ರಯತ್ನಿಸಬೇಕು. ಪರೀಕ್ಷೆಯ ಕೋಣೆಯಲ್ಲಿಯೂ ಕ್ರೀಡಾಂಗಣದಲ್ಲಿ ಆಟವಾಡುವಾಗ ಇರುವ ಮನಸ್ಥಿತಿಯಲ್ಲಿಯೇ ಇರಬೇಕು. ಪರೀಕ್ಷೆಯನ್ನು ಬರೆಯುವುದೂ ಒಂದು ಆಟ. ಅದಕ್ಕಿಂತ ಹೆಚ್ಚೇನಲ್ಲ. ಯಾವುದೇ ಆಟವನ್ನಾದರೂ ಗೆಲ್ಲಬೇಕು ಎನ್ನುವ ಉದ್ದೇಶದಿಂದಲೇ ನಾವು ಆಡುತ್ತೇವಲ್ಲ! ಇದೂ ಅಷ್ಟೇ.

ಪರೀಕ್ಷಾ ಕೊಠಡಿಯಲ್ಲಿ ಉಳಿದವರು ಎಷ್ಟು ನಿರಾಯಾಸವಾಗಿ ಉತ್ತರಿಸುತ್ತಿದ್ದಾರೆ ಎನ್ನುವುದನ್ನಾಗಲೀ, ಕೆಲವರು ಉತ್ತರ ನೆನಪಾಗದೇ ಆಚೀಚೆ ನೋಡುತ್ತಿದ್ದಾರೆ ಎನ್ನುವುದನ್ನಾಗಲೀ ಗಮನಿಸಬಾರದು. ನಾವಾಯಿತು ನಮ್ಮ ಕೆಲಸವಾಯಿತು ಎನ್ನುವ ಹಾಗೆ ಇರಬೇಕು.

ಪರೀಕ್ಷೆ ಬರೆದು ಮುಗಿಸಿಕೊಂಡು ಹೊರಗೆ ಬಂದ ನಂತರ ಉಳಿದವರೊಂದಿಗೆ ಕುತೂಹಲಕ್ಕಾಗಿಯೂ ಮಾತನಾಡಬಾರದು. ಪರೀಕ್ಷೆಯಲ್ಲಿ ನಾನೆಷ್ಟು ತಪ್ಪು ಉತ್ತರಗಳನ್ನು ಬರೆದೆ, ಅವನೆಷ್ಟು ಸರಿ ಉತ್ತರಗಳನ್ನು ಬರೆದ ಎನ್ನುವುದನ್ನೆಲ್ಲ ತಿಳಿದುಕೊಳ್ಳಬಾರದು. ಒಮ್ಮೆ ಪರೀಕ್ಷೆಯನ್ನು ಬರೆದು, ಉತ್ತರ ಪತ್ರಿಕೆಯನ್ನು ಕೊಟ್ಟು ಹೊರಬಂದರೆ, ಮುಗಿಯಿತು. ಅದರ ಬಗ್ಗೆ ಮರೆತುಬಿಡಬೇಕು. ಮುಂದಿನ ವಿಷಯದ ಪರೀಕ್ಷೆಯನ್ನು ಸಾಧ್ಯವಾದಷ್ಟೂ ಚೆನ್ನಾಗಿ ಮಾಡಲಿಕ್ಕೆ ಪ್ರಯತ್ನಿಸಬೇಕು. ಅದು ಜಾಣತನ. ಒಳ್ಳೆಯದಾಗಲಿ.

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

CET MATHEMATICS

MULTIPLE CHOICE QUESTIONS

21) If two sets A and B have 99 elements in common, then the number of elements common to the sets A × B and B × A is

(A) 2^{99} (B) 99^2
(C) 100 (D) 18

Ans: (B) 99^2

Expln:- Let A and B be two non-empty sets having n elements in common.
Then A×A, B× A will have n^2 elements in common.


22) The area of the region bounded by the line y= 3x and the curve $y = x^2$ in sq. units is……..

(A) 10 (B) 9/ 2
(C) 9 (D) 5

Ans. B

Expl:-

$$A = \int_0^3 (3x - x^2)dx = 3\left(\frac{x^2}{2}\right) - \frac{x^3}{3}\Big]_0^3 = \frac{9}{2}$$



23) If f (x) = e^x and g (x) = log e^x, then which of the following is true?

(A) $f\{g(x)\} \neq g\{f(x)\}$
(B) $f\{g(x)\} = g\{f(x)\}$
(C) $f\{g(x)\} + g\{f(x)\} = 0$
(D) $f\{g(x)\} - g\{f(x)\} = 1$

Ans: (B) $f\{g(x)\} = g\{f(x)\}$

Expln:- $f(x) = e^x$, $g(x) = \log e^x = x$ i.e., $g(x) = x$

$f\{g(x)\} = f(x) = e^x$

$g\{f(x)\} = g(e^x) = e^x$

$\therefore f\{g(x)\} = g\{f(x)\}$.

24) The number of bijective functions from the set A to itself, if A contains 108 elements is

(A) 108 (B) 108!
(C) $(108)^2$ (D) 2^{108}

Ans: (B) 108!

Expln:-The number of bijections from set A to itself is 108!

25) $\int_1^e \log x \, dx =$

(A) 1 (B) e – 1
(C) e + 1 (D) 0

Ans: (A) 1

Expln:-

$$\int_1^e \underset{u}{\log x}\,\underset{dv}{dx} = uv - \int v\,du = (\log x)\,x - \int x.\frac{1}{x}dx$$

$$= [x \log x - x]_1^e$$

$$= e \log e - e - 1.\log 1 + 1$$

$$= e - e - 0 + 1 = 1.$$


26) The area of the region bounded by the line y = x and the curve $y = x^3$ is

(A) 0.2 sq. units (B) 0.3 sq. units
(C) 0.4 sq. units (D) 0.5 sq. units

Ans. D

Expln:

$$A = 2\int_0^1 (x - x^3)dx = 2\left[\frac{x^2}{2} - \frac{x^4}{4}\right]_0^1 = 0.5\,\text{sq. units}$$



27) The shortest distance between the lines $\frac{x-3}{3} = \frac{y-8}{-1} = \frac{z-3}{1}$ and $\frac{x+3}{-3} = \frac{y+7}{2} = \frac{z-6}{4}$ is

(A) $\sqrt{30}$ (B) $2\sqrt{30}$
(C) $5\sqrt{30}$ (D) $3\sqrt{30}$

Ans : (D) $3\sqrt{30}$

Expln:-The line (1) passes through (3, 8, 3) and has direction ratios proportional to 3, -1, 1.

$\therefore$ Its vector equation is $\vec{r} = \vec{a_1} + \lambda \vec{b_1}$

where $\vec{a_1} = 3\hat{i} + 8\hat{j} + 3k$

$\vec{b_1} = 3\hat{i} - \hat{j} + k.$

||| rly for line (2), $\vec{r} = \vec{a_2} + \mu \vec{b_2}$ where

$\vec{a_2} = -3\hat{i} - 7\hat{j} + 6k$, $\vec{b_2}$

$= -3\hat{i} + 2\hat{j} + 4k$

$$S.D. = \left[\frac{(\vec{a_2} - \vec{a_1}).(\vec{b_1} \times \vec{b_2})}{|\vec{b_1} \times \vec{b_2}|}\right]$$

$\vec{a_2} - \vec{a_1} = -6\hat{i} - 15\hat{j} + 3\hat{k}$

$$\vec{b_1} \times \vec{b_2} = \begin{vmatrix} \hat{i} & \hat{j} & k \\ 3 & -1 & 1 \\ -3 & 2 & 4 \end{vmatrix}$$

$= \hat{i}(-4-2) - \hat{j}(12+3) + k(6-3)$

$= -6\hat{i} - 15\hat{j} + 3k$

$|\vec{b_1} \times \vec{b_2}| = \sqrt{36+225+9} = \sqrt{270}$

$$S.D. = \frac{36+225+9}{\sqrt{270}}$$

$$= \sqrt{270} = \sqrt{9 \times 30} = 3\sqrt{30}$$


NEET BIOLOGY

1) The periplaneta belongs to which of this phyla

(a) Echinodermata (b) Annelida
(c) Mollusca (d) Arthropoda

Ans: (d)

2) Identify the part of the seed from the given figure which is destined to form root when the seed germinates



a) A b) B
c) C d) D

Ans:-c

Expln:- Radicle is destined to form root. In the given diagram 'C' represent radicle

3) Match the animals given in column A with their location in Column B.

	Column A		*Column B*
i	Dodo	a	Africa
ii	Quagga	b	Russia
iii	Thylacine	c	Mauritius
iv	Stellar's sea cow	d	Australia

Choose the correct match-

a) i – a, ii – c, iii – b, iv – d
b) i – d, ii – c, iii – a, iv – b
c) i – c, ii – a, iii – b, iv – d
d) i – c, ii – a, iii – d, iv – b`

Ans:- d

4) Given below are two statements: One is labelled as **Assertion A** and the other is labelled as **Reason R:**

Assertion A: The first stage of gametophyte in the life cycle of moss is protonema stage.

Reason R: Protonema develops directly from spores produced in capsule.

In the light of the above statements, choose the most appropriate answer from the options given below:

a) A is not correct but R is correct.
b) Both A and R are correct and R is the correct explanation of A.
c) Both A and R are correct but R is NOT the correct explanation of A.
d) A is correct but R is not correct.

Ans:- b

Expl^n:- Mosses spores released from the capsule germinate to form the filamentous structure called protonema. It is the first stage of gametophyte.

5) Identify the pair of heterosporous pteridophytes among the following:

a) Equisetum and Salvinia
b) Lycopodium and Selaginella
c) Selaginella and Salvinia
d) Psilolum and Salvinia

Ans:- C

Expl^n:- Genera like Selaginella and Salvinia which produce two kinds of spores, macro (large) and micro (small) spores, are known as heterosporous

6) Which of the following is used as an atmospheric pollution indicator?

a) Lepidoptera b) Lichems
c) Lycopersicon d) Lycopodium

Ans:- b

7) Lecithin, a small molecular weight organic compound found in living tissues, is an example of:

a) Amino acids b) Phospholipids
c) Glycerides d) Carbohydrates

Ans (b)

Expln:- The correct answer is option (b). Some lipids have phosphorous and a phosphorylated organic compound in them. These are phospholipids. They are found in cell membrane. Lecithin is one example. Option (c) is incorrect as glycerides are another group of lipids in which both glycerol and fatty acids are present. Option (a) and (d) are incorrect as amino acids and carbohydrates are separate groups of biomolecules.

8) The theory of spontaneous generation stated that –

a) life arose from living forms only
b) life can arise from both living and non-living
c) life can arise from non-living things only.
d) life arises spontaneously, neither from living nor from the non-living.

Ans:- c

9) Animal husbandry and plant breeding programmes are the examples of –

a) reverse evolution b) artificial selection
c) mutation d) natural selection

Ans:- b

10) Paleantological evidences for evolution refer to the –

a) development of embryo
b) homologous organs c) fossils
d) analogous organs **Ans:- c**

11) The bones of forelimbs of whale, bat , cheetah and man are similar in structure, because –

a) one organism has given rise to another
b) they share a common ancestor
c) they perform the same function
d) they have biological similarities

Ans:- b

ಬೀದರ್‌ನಲ್ಲಿ ಗುಡುಗು– ಮಳೆ

ಪ್ರಜಾವಾಣಿ ವಾರ್ತೆ

ಬೀದರ್/ಮೈಸೂರು: ಮೈಸೂರು ಜಿಲ್ಲೆಯ ಕೆಲವೆಡೆ ಭಾನುವಾರ ಮಳೆಯಾಗಿದೆ. ಬೀದರ್ ಜಿಲ್ಲೆಯ ಬೀದರ್, ಚಿಟಗುಪ್ಪ ಹಾಗೂ ಹುಮನಾಬಾದ್ ತಾಲ್ಲೂಕು ವ್ಯಾಪ್ತಿಯಲ್ಲಿ ಗುಡುಗು ಸಹಿತ ಮಳೆ ಸುರಿದಿದೆ.

ಬೀದರ್ ನಗರ, ಬೀದರ್ ತಾಲ್ಲೂಕಿನ ಅಮಲಾಪುರ, ಚಿಟ್ಟಾ, ಘೋಡಂಪಳ್ಳಿ, ಗುನ್ನಳ್ಳಿ, ಗೋರನಳ್ಳಿ, ಶಹಾಪುರ, ಜನವಾಡ, ಮರಕಲ್, ಚಿಕ್ಕಪೇಟೆ ಸೇರಿದಂತೆ ಹಲವು ಕಡೆಗಳಲ್ಲಿ ಗುಡುಗಿನೊಂದಿಗೆ ಮಳೆ ಆಗಿದೆ. ಅರ್ಧಗಂಟೆಗೂ ಹೆಚ್ಚು ಕಾಲ ಜೋರು ಮಳೆ ಸುರಿದಿದ್ದರಿಂದ ನಗರದ ಮನ್ನಳ್ಳಿ ರಸ್ತೆಯ ಬೊಮ್ಮಗೊಂಡೇಶ್ವರ ವೃತ್ತ, ಹಾರೂರಗೇರಿ ಕಮಾನ್ ಬಳಿ ಅಪಾರ ಪ್ರಮಾಣದ ನೀರು ರಸ್ತೆಯ ಮೇಲೆ ಸಂಗ್ರಹಗೊಂಡು ವಾಹನ ಸಂಚಾರಕ್ಕೆ ತೊಡಕಾಯಿತು.

ಸತತ ಮೂರನೇ ದಿನವೂ ಜಿಲ್ಲೆಯಲ್ಲಿ ಮಳೆ ಸುರಿದಿದೆ. ತಾಪಮಾನದಲ್ಲಿ ಭಾರಿ ಇಳಿಕೆಯಾಗಿದ್ದು, ಬೇಸಿಗೆ ಮರೆಸುವಂತೆ ಮಾಡಿದೆ. ಜಿಲ್ಲೆಯಾದ್ಯಂತ ದಿನವಿಡೀ ಮೋಡ ಕವಿದ ವಾತಾವರಣ ಇತ್ತು.

ಹಾಸನ ಜಿಲ್ಲೆಯ ಹಾಸನ ಮತ್ತು ಅರಕಲಗೂಡು ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಯಿತು. ಅರಕಲಗೂಡು ಹಾಗೂ ಕೊಣನೂರಿನಲ್ಲಿ ಗಾಳಿ, ಗುಡುಗು–ಸಿಡಿಲಿನೊಂದಿಗೆ ಸುಮಾರು ಅರ್ಧಗಂಟೆ ಜೋರಾಗಿ ಸುರಿಯಿತು. ಬೇಲೂರು, ಅರಸೀಕೆರೆ, ಹಳೇಬೀಡಿನಲ್ಲಿ ಮೋಡ ಕವಿದ ವಾತಾವರಣವಿತ್ತು.

ಮಡಿಕೇರಿ ತಾಲ್ಲೂಕಿನ ಕೆಲವೆಡೆ ಶನಿವಾರ ರಾತ್ರಿ ಮತ್ತು ಭಾನುವಾರ ಬಿರುಸಿನ ಮಳೆಯಾಯಿತು. ಮರಗೋಡು, ಮೂರ್ನಾಡು, ಬೆಟ್ಟಗೇರಿ, ಚೇರಂಬಾಣೆ, ಬೋಯಿಕೆರೆ ಗ್ರಾಮಗಳಲ್ಲಿ ಉತ್ತಮ ಮಳೆಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಕೆಲವೆಡೆ ಜೋರು ಮಳೆಯಾಯಿತು. ಕೆ.ಆರ್.ನಗರದಲ್ಲಿ ಜೋರು ಗಾಳಿ, ಗುಡು ಸಹಿತ ತುಂತುರು, ಬೆಟ್ಟದಪುರ ಭಾಗದಲ್ಲಿ ಸಾಧಾರಣ ಮಳೆ ಸುರಿಯಿತು.

ಮರಿಯಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿಯಲ್ಲಿ ಭಾನುವಾರ ಮಧ್ಯಾಹ್ನ 3 ಗಂಟೆಯಿಂದ ಸುಮಾರು ಅರ್ಧ ಗಂಟೆ ಮಳೆ ಸುರಿಯಿತು.

ಗುಡುಗು, ಮಿಂಚು, ಭಾರಿ ಗಾಳಿಯೊಂದಿಗೆ ಮಳೆ ಸುರಿಯಿತು. ಬಿಸಿಲಿನಿಂದ ಕಂಗೆಟ್ಟಿದ್ದ ಜನರು ಸ್ವಲ್ಪ ನೆಮ್ಮದಿ ನೀಡಿತು. ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಭಾಗದಲ್ಲಿ ರಣಬಿಸಿಲು ಇದ್ದರೆ, ನಡುವಿನ ಮರಿಯಮ್ಮನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಮಾತ್ರ ಮಳೆ ಸುರಿಯಿತು.



ಭಾನುವಾರ ಸುರಿದ ಮಳೆಗೆ ಬೀದರ್‌ನ ಮನ್ನಳ್ಳಿ ರಸ್ತೆಯಲ್ಲಿ ನೀರು ಸಂಗ್ರಹಗೊಂಡಿತ್ತು

ಸಿಡಿಲು ಬಡಿದು ಮಹಿಳೆ ಸಾವು

ಚಿಕ್ಕಮಗಳೂರು: ತಾಲ್ಲೂಕಿನ ತಿಮ್ಮನಹಳ್ಳಿಯ 62 ವರ್ಷದ ಮಹಿಳೆಯೊಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.



ನಾಗಮ್ಮ

ದೇವರಾಜೇಗೌಡ ಅವರ ಪತ್ನಿ ನಾಗಮ್ಮ ಮೃತಪಟ್ಟವರು. ಆರದವಳ್ಳಿಯ ತನ್ನ ಅಳಿಯ ಗಂಗೇಗೌಡ ಅವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಮಧ್ಯಾಹ್ನ 2 ಗಂಟೆಗೆ ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತ ಭಾನುವಾರ ಮಧ್ಯಾಹ್ನ ಒಂದು ಗಂಟೆಗೂ ಹೆಚ್ಚು ಕಾಲ ಧಾರಾಕಾರವಾಗಿ ಮಳೆ ಸುರಿಯಿತು.

ಜಿಲ್ಲೆಯ ಮೂಡಿಗೆರೆ, ಆಲ್ದೂರಿನಲ್ಲಿ ಮಳೆಯಾಗಿದೆ.



ಕೆ.ಎಸ್‌ನರಸಿಂಹಸ್ವಾಮಿ ಟ್ರಸ್ಟ್‌ನಿಂದ ಕೆ.ಎಸ್‌ನ. ಸಾಹಿತ್ಯ ಮತ್ತು ಕಾವ್ಯಗಾಯನ ಪ್ರಶಸ್ತಿಯನ್ನು ಗಾಯಕಿ ಸಂಗೀತಾ ಕಟ್ಟಿ ಕುಲಕರ್ಣಿ (ಧಾರವಾಡ), ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ (ಮಂಡ್ಯ), ಸಾಹಿತಿ ನಾ.ದಾಮೋದರ ಶೆಟ್ಟಿ (ದಕ್ಷಿಣ ಕನ್ನಡ) ಹಾಗೂ ರಮೇಶ್‌ಚಂದ್ರ (ಕಾಸರಗೋಡು) ಅವರಿಗೆ ಮಂಡ್ಯದಲ್ಲಿ ಭಾನುವಾರ ಪ್ರದಾನ ಮಾಡಲಾಯಿತು. ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ಜಿ.ಪಂ. ಸಿಇಒ ಕೆ.ಆರ್‌ನಂದಿನಿ, ಜಿಲ್ಲಾಧಿಕಾರಿ ಕುಮಾರ, ಶಾಸಕ ಪಿ.ರವಿಕುಮಾರ್ ಹಾಗೂ ಸಚಿವ ಎನ್‌ಚಲುವರಾಯಸ್ವಾಮಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಇಲ್ಲಿ ಬಿಜೆಪಿ ಗೆದ್ದರೆ ಹೃದಯ ಒಡೆಯುತ್ತೆ: ಯೋಗೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ತವರು ರಾಜ್ಯದಲ್ಲಿ, ಮಹಾರಾಷ್ಟ್ರದಲ್ಲಿ ಬಿಜೆಪಿ ಗೆದ್ದರೆ ನನಗೆ ದುಃಖವಾಗುತ್ತದೆ, ಆಶ್ಚರ್ಯವಾಗುವುದಿಲ್ಲ. ಆದರೆ, ಕರ್ನಾಟಕದಲ್ಲಿ ಬಿಜೆಪಿ ಗೆದ್ದರೆ, ಅಚ್ಚರಿಯಷ್ಟೇ ಅಲ್ಲ, ದುಃಖ, ಆಘಾತ, ಹೃದಯ ಒಡೆದೇ ಹೋಗುತ್ತದೆ' ಎಂದು ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಭಾನುವಾರ ಹೇಳಿದರು.

ರಾಮಮನೋಹರ ಲೋಹಿಯಾ ಜನ್ಮ ದಿನಾಚರಣೆ ನಿಮಿತ್ತ ಭಾರತ ಯಾತ್ರಾ ಕೇಂದ್ರ, ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಮತ್ತು ಲೋಕನಾಯಕ ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

'ಕರ್ನಾಟಕ ಶರಣರು, ವಚನಕಾರರ ನಾಡು. ಇಲ್ಲಿ 12ನೇ ಶತಮಾನದಿಂದಲೂ ಸಮಾಜವಾದ ನೆಲಸಿದೆ. ಈ ಪ್ರಶಸ್ತಿಯು ಸಮಾಜವಾದದ ಪರಂಪರೆಯನ್ನು ನೆನಪಿಸುತ್ತಿದೆ' ಎಂದು ಹೇಳಿದರು.

'25 ವರ್ಷದಿಂದ ಕರ್ನಾಟಕದ ಬೌದ್ಧಿಕ ಮತ್ತು ರಾಜಕೀಯ ಚಳವಳಿಗಳನ್ನು ನೋಡಿದ್ದೇನೆ. ಇಲ್ಲಿ ದಲಿತ ಚಳವಳಿ, ರೈತ ಚಳವಳಿ, ಸಮಾಜವಾದಿ ಚಳವಳಿಗಳು ವಿಶೇಷವಾಗಿವೆ. ಇಡೀ ದೇಶದಲ್ಲೇ ದಲಿತ ಮತ್ತು ರೈತ ಚಳವಳಿಗಳು ಒಟ್ಟಿಗೆ ಸಾಗಿರುವುದನ್ನು ಇಲ್ಲಿ ಮಾತ್ರ ಕಾಣಲು ಸಾಧ್ಯ. ಇದೇ ವಿಶೇಷ' ಎಂದು ಪ್ರತಿಪಾದಿಸಿದರು.

'ನಾವು ಅಗಲಿದ ನಂತರವೂ ಸಮಾಜ ನಮ್ಮನ್ನು ನೆನಪಿಸಿಕೊಳ್ಳುವಂತಿರಬೇಕು ಅದೇ ನಿಜವಾದ ಪ್ರಶಸ್ತಿ. ಮಾಜಿ ಪ್ರಧಾನಿ ಚಂದ್ರಶೇಖರ್, ಇಲ್ಲಿನ ಮಾಜಿ ಸಚಿವ ಎಂ.ಪಿ. ಪ್ರಕಾಶ್, ಇಂದು ನಾವು ಸ್ಮರಿಸುತ್ತಿರುವ ರಾಮಮನೋಹರ ಲೋಹಿಯಾರನ್ನು ಸದಾ ನೆನಪಿಸಿಕೊಳ್ಳುತ್ತೇವೆ' ಎಂದರು.

'ರಾಮಮನೋಹರ ಲೋಹಿಯಾ ಅವರು ಕಾಂಗ್ರೆಸ್ ಹಾಗೂ ನೆಹರೂ ವಿರೋಧಿಯಾಗಿದ್ದರು ಎಂದು ಕೆಲವರು ಅವರನ್ನು ಈಗ ಗೌರವಿಸುತ್ತಿದ್ದಾರೆ. ಆದರೆ, ಲೋಹಿಯಾ ಪ್ರಭುತ್ವದ ವಿರುದ್ಧ ಇದ್ದರು. ಅಂದು ದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ನೆಹರೂ ಪ್ರಧಾನಿ ಆಗಿದ್ದರು. ಆ ಕಾರಣಕ್ಕಾಗಿ ವಿರೋಧಿಸಿದ್ದರು' ಎಂದು ವಿಶ್ಲೇಷಿಸಿದರು.

ಪತ್ರಕರ್ತೆ ವಿಜಯಾ ಸೇರಿದಂತೆ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು. ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಅಭಿನಂದನಾ ನುಡಿಗಳನ್ನಾಡಿದರು.



ಸಮಾರಂಭದಲ್ಲಿ ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಅವರಿಗೆ 'ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ಎಡದಿಂದ) ದಿವಂಗತ ಎಂ.ಪಿ. ಪ್ರಕಾಶ್ ಅವರ ಪುತ್ರಿ ಸುಮಾ ವಿಜಯ್, ವಿಜಯಾ, ಭಾರತ ಯಾತ್ರಾ ಕೇಂದ್ರದ ಅಧ್ಯಕ್ಷ ಬಿ.ಎಲ್‌. ಶಂಕರ್, ಉತ್ತರ ಪ್ರದೇಶದ ಕೋಸಿ ಲೋಕಸಭಾ ಕ್ಷೇತ್ರದ ಸಂಸದ ರಾಜೀವ್ ರಾಯ್, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ, ಬಿ.ಆರ್ ಪಾಟೀಲ ಮತ್ತು ಎಂ.ಪಿ.ಪ್ರಕಾಶ ಸಮಾಜಮುಖಿ ಟ್ರಸ್ಟ್‌ನ ವೀಣಾ ಮಹಾಂತೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಬಂಡೀಪುರ ರಾತ್ರಿ ಸಂಚಾರ: ಒತ್ತಡಕ್ಕೆ ಮಣಿದ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಹೈಕಮಾಂಡ್ ಒತ್ತಡಕ್ಕೆ ಮಣಿದು ಬಂಡೀಪುರ ಅರಣ್ಯದಲ್ಲಿ ರಾತ್ರಿ ವಾಹನ ಸಂಚಾರಕ್ಕೆ ಇದ್ದ ನಿಷೇಧವನ್ನು ಕೈಬಿಡಲು ರಾಜ್ಯ ಸರ್ಕಾರ ಮುಂದಾಗಿದೆ. ಇದು ಕರ್ನಾಟಕದ ಅರಣ್ಯ, ಭವಿಷ್ಯದ ಜನಾಂಗಕ್ಕೆ ಮಾಡುತ್ತಿರುವ ದ್ರೋಹ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಸಂಸದ ತೇಜಸ್ವಿ ಸೂರ್ಯ ಟೀಕಿಸಿದ್ದಾರೆ.

'ಈ ವಿಚಾರವಾಗಿ ಬಿಜೆಪಿ ಬಾಯಿ ಮುಚ್ಚಿಕೊಂಡು ಕೂರುವುದಿಲ್ಲ, ಎಲ್ಲ ರೀತಿಯ ಹೋರಾಟಕ್ಕೂ ಸಿದ್ಧವಿದೆ' ಎಂದು ಅವರು 'ಎಕ್ಸ್' ಮೂಲಕ ಹೇಳಿದ್ದಾರೆ.

'ಕಾಂಗ್ರೆಸ್‌ನ ಹೈಕಮಾಂಡ್ ನಿಷ್ಠೆಗೆ ಕರ್ನಾಟಕ ರಾಜ್ಯ ಬೆಲೆ ತೆರಬೇಕಾಗಿದೆ. ದೆಹಲಿಯಲ್ಲಿ ಹೈಕಮಾಂಡ್ ಸಿದ್ಧಪಡಿಸಿದ ಆದೇಶದ ಪ್ರತಿಯನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಕಾರ್ಯಗತಗೊಳಿಸಲು ಹೊರಟಿದ್ದಾರೆ. ಆ ಮೂಲಕ ರಾತ್ರಿ ವೇಳೆಯ ಸಂಚಾರದ ನಿಷೇಧವನ್ನು ತೆಗೆಯಲು ಮುಂದಾಗಿದ್ದಾರೆ' ಎಂದು ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿ ವಯನಾಡು ಕ್ಷೇತ್ರದ ಚುನಾವಣೆ ಪ್ರಚಾರ ಆರಂಭಿಸಿದ ದಿನದಿಂದಲೂ ಕರ್ನಾಟಕ ಅರಣ್ಯದ ಹಿತವನ್ನು ಬಲಿಗೊಡಲು ಒತ್ತಡ ಹೆಚ್ಚಾಗಿದೆ ಎಂದು ದೂರಿದ್ದಾರೆ.

ಕರ್ನಾಟಕ ಸರ್ಕಾರ ವಿಧಾನಸೌಧದಿಂದ ನಡೆಯುತ್ತಿದೆಯೇ ಅಥವಾ 10 ಜನಪಥ್‌ನಿಂದ ನಡೆಯುತ್ತಿದೆಯೇ? ಎಂದು ಅವರು ಪ್ರಶ್ನಿಸಿದ್ದಾರೆ.

ಗೋವಿಂದ ಪೈ ಸಂಶೋಧನ ಸಂಪುಟದ ಪರಿಷ್ಕೃತ ದ್ವಿತೀಯ ಮುದ್ರಣ ಭಾಗ-2 ಅನಾವರಣ

'ಪೈಗಳ ಸಾಹಿತ್ಯ ಅಧ್ಯಯನಶೀಲರಿಗೆ ಪ್ರೇರಣೆ'

ಪ್ರಜಾವಾಣಿ ವಾರ್ತೆ

ಉಡುಪಿ: 'ರಾಷ್ಟ್ರಕವಿ ಗೋವಿಂದ ಪೈ ಅವರ ಸಂಶೋಧನಾ ಬರಹಗಳು ಮತ್ತು ಸೃಜನಾತ್ಮಕ ಸಾಹಿತ್ಯ ಭಂಡಾರವು ಅಧ್ಯಯನಶೀಲರಿಗೆ ಪ್ರೇರಣೆಯಾಗಿದೆ' ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗೋವಿಂದ ಪೈ ಸಂಶೋಧನ ಸಂಪುಟ ಪರಿಷ್ಕೃತ ದ್ವಿತೀಯ ಮುದ್ರಣ ಭಾಗ–2ರ ಅನಾವರಣ ಕಾರ್ಯಕ್ರಮದಲ್ಲಿ 2024ನೇ ಸಾಲಿನ 'ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

'ಗೋವಿಂದ ಪೈ ಬರೆದ ದ್ರಾವಿಡ ಲಯದ ಹಾಡುಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೈಲುಗಲ್ಲು. ಸಂಶೋಧನೆಯ ಜೊತೆಗೆ ಕಾವ್ಯದ ಸರ್ವ ಸ್ವಾರಸ್ಯವನ್ನು ಕಟ್ಟಿಕೊಟ್ಟಿರುವ ಅವರು ತಪಸ್ವಿಯಂತೆ ಬದುಕಿದವರು. ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸಿರುವುದು ಧನ್ಯತಾ ಭಾವ ಮೂಡಿಸಿದೆ' ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಶೋಧಕ ಬಿ.ಎ. ವಿವೇಕ ರೈ ಮಾತನಾಡಿ, 'ಹಣದಿಂದ ಎಲ್ಲವನ್ನೂ ಸಾಧಿಸಲು ಸಾಧ್ಯವಿಲ್ಲ. ಹಣದ ವ್ಯಾಮೋಹ ತ್ಯಜಿಸಿದಾಗ ವಿದ್ವತ್ತು ಒಲಿಯುತ್ತದೆ. ವಿದ್ವತ್ತು ಹಣಕ್ಕಿಂತ ಮಿಗಿಲಾದುದು' ಎಂದರು.

ಕರಾವಳಿಯ ಜನರಲ್ಲಿ ಸಂಶೋಧನಾ ಪ್ರವೃತ್ತಿ ಬೆಳೆಯಬೇಕು. ನಿಷೇಧಾತ್ಮಕ ಚರ್ಚೆಗಳ ಮೂಲಕ ಸಮಯ ವ್ಯರ್ಥ ಮಾಡುವ ಬದಲು ಸಂಶೋಧನ ಕೃತಿಗಳನ್ನು ಓದುವ ಮೂಲಕ ಜ್ಞಾನ ಬೆಳೆಸಿಕೊಳ್ಳಬೇಕು ಎಂದರು.

ಗೋವಿಂದ ಪೈ ಸಂಶೋಧನಾ ಸಂಪುಟದ ಒಂದೊಂದು ಲೇಖನಗಳನ್ನು ಇಟ್ಟುಕೊಂಡು ಸಂಶೋಧನೆ ಮಾಡಬಹುದು. ಮೊಬೈಲ್‌ನಲ್ಲಿ ಅನಗತ್ಯ ವಿಡಿಯೊಗಳನ್ನು ಹಂಚಿಕೊಳ್ಳುವುದಕ್ಕಿಂತ ಯುವ ಪೀಳಿಗೆ ಇಂತಹ ಕೃತಿಗಳನ್ನು ಓದಿ ಸಂಶೋಧನೆಯತ್ತ ಚಿತ್ತ ಹರಿಸಬೇಕು ಎಂದು ಪ್ರತಿಪಾದಿಸಿದರು.

ಮಣಿಪಾಲದ ಮಾಹೆಯ ಸಹ ಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್ ಕೃತಿ ಅನಾವರಣಗೊಳಿಸಿದರು. ನಿವೃತ್ತ ಪ್ರಾಧ್ಯಾಪಕ ತಾಳ್ತಜೆ ವಸಂತ ಕುಮಾರ್ ಅಭಿನಂದನಾ ಭಾಷಣ ಮಾಡಿದರು. ಮಾಹೆ ಕುಲಪತಿ ಲೆಫ್ಟಿನೆಂಟ್ ಜನರಲ್ ಎಂ.ಡಿ. ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ, ಸಂಶೋಧಕ ಪಾದೆಕಲ್ಲು ವಿಷ್ಣುಭಟ್, ಸಾಹಿತಿ ಮುರಳೀಧರ ಉಪಾಧ್ಯ ಹಿರಿಯಡ್ಕ, ಎಂಜಿಎಂ ಕಾಲೇಜು ಪ್ರಾಂಶುಪಾಲ ಲಕ್ಷ್ಮಿನಾರಾಯಣ ಕಾರಂತ ಭಾಗವಹಿಸಿದ್ದರು.

ಸಂಶೋಧನ ಕೇಂದ್ರದ ಆಡಳಿತಾಧಿಕಾರಿ ಬಿ. ಜಗದೀಶ್ ಶೆಟ್ಟಿ ಸ್ವಾಗತಿಸಿದರು. ಆರ್‌ಆರ್‌ಸಿಯ ಸಹ ಸಂಶೋಧಕ ಅರುಣ್ ಕುಮಾರ್ ಎಸ್.ಆರ್. ಕಾರ್ಯಕ್ರಮ ನಿರೂಪಿಸಿದರು.



ಸಾಹಿತಿ ಹಂಪ ನಾಗರಾಜಯ್ಯ ಅವರಿಗೆ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ ಪ್ರದಾನ ಮಾಡಲಾಯಿತು

ಆರೋಪ ಅಲ್ಲಗಳೆದ ನ್ಯಾ. ವರ್ಮ

ನಗದು ಪತ್ತೆ ಪ್ರಕರಣ: 'ಸ್ಟೋರ್‌ರೂಮ್‌ನಲ್ಲಿ ಹಣ ಇದ್ದ ಬಗ್ಗೆ ನನಗೆ ತಿಳಿದಿಲ್ಲ'

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಯಶವಂತ್ ವರ್ಮ ಅವರು ತಮ್ಮ ನಿವಾಸದಲ್ಲಿ ಭಾರಿ ಪ್ರಮಾಣದಲ್ಲಿ ನಗದು ಪತ್ತೆಯಾಗಿದೆ ಎಂಬ ಆರೋಪಗಳನ್ನು ಖಡಾಖಂಡಿತವಾಗಿ ಅಲ್ಲಗಳೆದಿದ್ದಾರೆ. ಮನೆಯ ಸ್ಟೋರ್‌ರೂಮ್‌ನಲ್ಲಿ ತಾವಾಗಲಿ, ತಮ್ಮ ಕುಟುಂಬದ ಇತರ ಸದಸ್ಯರಾಗಲಿ ನೋಟುಗಳನ್ನು ಇರಿಸಿರಲಿಲ್ಲ ಎಂದು ಹೇಳಿದ್ದಾರೆ.

ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರಿಗೆ ತಮ್ಮ ಹೇಳಿಕೆ ಸಲ್ಲಿಸಿರುವ ನ್ಯಾಯಮೂರ್ತಿ ವರ್ಮ, ತಮಗೆ ಕಳಂಕ ಅಂಟಿಸುವ ಉದ್ದೇಶದಿಂದ ನಗದು ಪತ್ತೆ ಆರೋಪವನ್ನು ಹೊರಿಸಲಾಗಿದೆ ಎಂದು ದೂರಿದ್ದಾರೆ.

'ಪೊಲೀಸ್ ಆಯುಕ್ತರು ನಿಮ್ಮ ಜೊತೆ ಹಂಚಿಕೊಂಡಿದ್ದ ವಿಡಿಯೊ ಮತ್ತು ಚಿತ್ರಗಳನ್ನು ನಾನು ಹೈಕೋರ್ಟ್‌ನ ಅತಿಥಿ ಗೃಹದಲ್ಲಿ ನಿಮ್ಮನ್ನು ಭೇಟಿಯಾದಾಗ ಮೊದಲ ಬಾರಿಗೆ ತೋರಿಸಲಾಯಿತು. ವಿಡಿಯೊದಲ್ಲಿ ಇದ್ದುದನ್ನು ಕಂಡು ನನಗೆ ಆಘಾತವಾಯಿತು. ಏಕೆಂದರೆ ನಾನು ಕಂಡಂತೆ ಆ ಜಾಗದಲ್ಲಿ ಇಲ್ಲದಿದ್ದುದನ್ನು ಆ ವಿಡಿಯೊದಲ್ಲಿ ತೋರಿಸಲಾಗಿದೆ' ಎಂದು ವರ್ಮ ಅವರು ಉಪಾಧ್ಯಾಯ ಅವರಿಗೆ ನೀಡಿರುವ ಪ್ರತಿಕ್ರಿಯೆಯಲ್ಲಿ ಹೇಳಿದ್ದಾರೆ.

'ಇದು ನನ್ನ ಹೆಸರಿಗೆ ಕಳಂಕ ಅಂಟಿಸಲು ಮಾಡಿರುವ ಪಿತೂರಿಯಂತೆ ಕಾಣುತ್ತಿದೆ' ಎಂದು ಅವರು ಹೇಳಿದ್ದಾರೆ.

ಮಾಧ್ಯಮಗಳು ಆರೋಪ ಹೊರಿಸುವ ಮುನ್ನ ಹಾಗೂ ತಮ್ಮನ್ನು ಕಳಂಕಿತರನ್ನಾಗಿಸುವ ಮುನ್ನ ಒಂದಿಷ್ಟು ವಿಚಾರಣೆ ನಡೆಸಬೇಕಿತ್ತು. ಮನೆಯ ಹೊರಗೆ ಇರುವ ಸ್ಟೋರ್‌ರೂಮ್‌ನಲ್ಲಿ ನಗದು ಇದ್ದ ಬಗ್ಗೆ ತಮಗೆ ಅರಿವಿಲ್ಲ ಎಂದು ಅವರು ವಿವರಿಸಿದ್ದಾರೆ.

'ನಗದಿನ ಬಗ್ಗೆ ನನಗಾಗಲಿ, ನನ್ನ ಕುಟುಂಬದ ಸದಸ್ಯರಿಗಾಗಲಿ ಯಾವುದೇ ಮಾಹಿತಿ ಇಲ್ಲ... ಆ ರಾತ್ರಿ ಅಲ್ಲಿದ್ದ ನನ್ನ ಕುಟುಂಬದವರಿಗೆ ಅಥವಾ ನನ್ನ ಸಿಬ್ಬಂದಿಗೆ ನಗದನ್ನು ತೋರಿಸಿರಲಿಲ್ಲ' ಎಂದು ಅವರು ಹೇಳಿದ್ದಾರೆ.

ಸ್ಟೋರ್‌ರೂಮ್ ಅನ್ನು ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುತ್ತಾರೆ. ಅಲ್ಲಿ ಬಳಕೆ ಮಾಡದ ಕೆಲವು ಪೀಠೋಪಕರಣ, ಬಾಟಲಿಗಳು, ಮ್ಯಾಟ್ರೆಸ್‌ಗಳು, ಹಳೆಯ ಕಾರ್ಪೆಟ್‌ಗಳು, ಉದ್ಯಾನದ ಉಪಕರಣಗಳು ಇವೆ ಎಂದು ಹೇಳಿದ್ದಾರೆ.

'ಸ್ಟೋರ್‌ರೂಮ್‌ನ ಬಾಗಿಲಿಗೆ ಬೀಗ ಹಾಕಿರುವುದಿಲ್ಲ... ಅದು ಮುಖ್ಯ ನಿವಾಸದಿಂದ ಪ್ರತ್ಯೇಕವಾಗಿದೆ. ಅದು ನನ್ನ ಮನೆಯ ಕೊಠಡಿ ಅಲ್ಲ' ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ವಿಚಾರಣೆಗೆ ಸಮಿತಿ ರಚಿಸಿದ್ದು ಏಕೆ?

ನ್ಯಾಯಮೂರ್ತಿ ಯಶವಂತ್ ವರ್ಮ ಅವರ ಅಧಿಕೃತ ನಿವಾಸದಲ್ಲಿ ಸುಟ್ಟ ನೋಟಿನಂತಹ ವಸ್ತುಗಳ ಕಂತೆ ಇದ್ದ ವಿಡಿಯೊವನ್ನು ದೆಹಲಿ ಪೊಲೀಸ್ ಆಯುಕ್ತರು ನೀಡಿದ್ದು ಹಾಗೂ ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರು ವಿಚಾರಣಾ ವರದಿಯಲ್ಲಿ 'ಆಳವಾದ ತನಿಖೆ' ಆಗಬೇಕು ಎಂದು ಹೇಳಿರುವುದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಮೂವರು ಸದಸ್ಯರ ಸಮಿತಿ ರಚಿಸಲು ಕಾರಣ.

ನ್ಯಾಯಮೂರ್ತಿ ಉಪಾಧ್ಯಾಯ ಅವರು ವಿಚಾರಣೆ ನಡೆಸಿ ಸಿದ್ಧಪಡಿಸಿರುವ ವರದಿಯನ್ನು ಸುಪ್ರೀಂ ಕೋರ್ಟ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ನ್ಯಾಯಮೂರ್ತಿ ವರ್ಮ ಅವರ ಅಧಿಕೃತ ನಿವಾಸದಲ್ಲಿ ಅರೆಬರೆ ಸುಟ್ಟಿದ್ದ ಭಾರತದ ಕರೆನ್ಸಿ ನೋಟಿನ ನಾಲ್ಕು-ಐದು ಕಂತೆಗಳು ಸಿಕ್ಕಿವೆ ಎಂಬುದಾಗಿ ಹೇಳುವ ಅಧಿಕೃತ ಸಂವಹನದ ಬಗ್ಗೆ ಉಲ್ಲೇಖ ವರದಿಯಲ್ಲಿದೆ.

'ಇಡೀ ಪ್ರಕರಣದ ಬಗ್ಗೆ ಆಳವಾದ ತನಿಖೆ ಆಗಬೇಕಾದ ಅಗತ್ಯವಿದೆ ಎಂದು ನನಗೆ ಮೇಲ್ನೋಟಕ್ಕೆ ಅನ್ನಿಸುತ್ತಿದೆ' ಎಂದು ನ್ಯಾಯಮೂರ್ತಿ ಉಪಾಧ್ಯಾಯ ಅವರು ವರದಿಯಲ್ಲಿ ಹೇಳಿದ್ದಾರೆ.

ದೆಹಲಿ ಪೊಲೀಸ್ ಆಯುಕ್ತ ಸಂಜಯ್ ಅರೋರ ಅವರು ನ್ಯಾಯಮೂರ್ತಿ ಉಪಾಧ್ಯಾಯ ಅವರೊಂದಿಗೆ ಹಂಚಿಕೊಂಡಿರುವ ವಿಡಿಯೊದಲ್ಲಿಯೂ, ನೋಟುಗಳಂತೆ ಕಾಣುವ ವಸ್ತು ಸುಟ್ಟಿರುವುದು, ಅಗ್ನಿಶಾಮಕ ಸಿಬ್ಬಂದಿ ಬೆಂಕಿ ಆರಿಸುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ.

'ನೋಟು' ವಿಡಿಯೊ ಬಹಿರಂಗ

ಒಂದನೇ ಪುಟದಿಂದ...

'ಬೆಂಕಿ ಆರಿಸುವಾಗ ನೋಟುಗಳು ಸಿಕ್ಕಿರಲಿಲ್ಲ' ಎಂದು ದೆಹಲಿ ಅಗ್ನಿಶಾಮಕ ದಳದ ಮುಖ್ಯಸ್ಥ ಅತುಲ್ ಗರ್ಗ್ ನೀಡಿದ್ದ ಹೇಳಿಕೆ ಬಗ್ಗೆಯೇ ಅನುಮಾನ ಮೂಡಲು ಈ ವಿಡಿಯೊ ಕಾರಣವಾಗಿದೆ.

ಭಾರಿ ಪ್ರಮಾಣದ ನಗದು ಪತ್ತೆಯಾಗಿದೆ ಎಂಬ ವರದಿಗಳ ಬಗ್ಗೆ ವಿಚಾರಣೆ ನಡೆಸಿ, ದೆಹಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಸಲ್ಲಿಸಿರುವ ವರದಿಯನ್ನು ಕೂಡ ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸುಪ್ರೀಂ ಕೋರ್ಟ್ ವೆಬ್‌ಸೈಟ್ ಮೂಲಕ ಬಹಿರಂಗ ಆಗಿರುವ ವಿಡಿಯೊವನ್ನು ದೆಹಲಿ ಪೊಲೀಸ್ ಆಯುಕ್ತ ಸಂಜಯ್ ಅರೋರ ಅವರು ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರಿಗೆ ನೀಡಿದ್ದರು. ಈ ವಿಡಿಯೊ, ಉಪಾಧ್ಯಾಯ ಅವರು ಸಲ್ಲಿಸಿರುವ 25 ಪುಟಗಳ ವರದಿಯ ಭಾಗವೂ ಹೌದು.



ಬೆಡಗು 'ಮಿಸ್ ಯೂನಿವರ್ಸ್ 2024' ಡೆನ್ಮಾರ್ಕ್‌ನ ವಿಕ್ಟೋರಿಯಾ ಕೆರ್ ತಾಲ್ವಿಗ್ ಮತ್ತು 'ಮಿಸ್ ಯೂನಿವರ್ಸ್ ಇಂಡಿಯಾ' ರಿಯಾ ಸಿಂಗ್ (ಎಡ) ತಾಜ್ ಮಹಲ್‌ಗೆ ಭಾನುವಾರ ಭೇಟಿ ನೀಡಿದರು ಪಿಟಿಐ ಚಿತ್ರ

ನಟ ಸುಶಾಂತ್ ಸಿಂಗ್ ರಜಪೂತ್ ಸಾವು ಪ್ರಕರಣ


ಮುಕ್ತಾಯ ವರದಿ ಸಲ್ಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಎರಡು ಪ್ರತ್ಯೇಕ ಮುಕ್ತಾಯ ವರದಿಗಳನ್ನು ಸಲ್ಲಿಸಿದೆ.

ಆತ್ಮಹತ್ಯೆಗೆ ಪ್ರಚೋದನೆ ನೀಡಲಾಗಿದೆ ಎಂದು ಆರೋಪಿಸಿ ನಟನ ತಂದೆ ಕೆ.ಕೆ.ಸಿಂಗ್ ನೀಡಿದ ದೂರು ಮತ್ತು ಸುಶಾಂತ್ ಗೆಳತಿ, ನಟಿ ರಿಯಾ ಚಕ್ರವರ್ತಿ ಅವರು ಸುಶಾಂತ್ ಸಹೋದರಿಯರ ವಿರುದ್ಧ ದಾಖಲಿಸಿದ್ದ ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಿರುವ ಸಿಬಿಐ ಶನಿವಾರ ಈ ವರದಿ ಸಲ್ಲಿಸಿದೆ.

ಕೆ.ಕೆ. ಸಿಂಗ್ ಅವರ ದೂರಿನ ಕುರಿತ ಮುಕ್ತಾಯ ವರದಿಯನ್ನು ಪಟ್ನಾದ ವಿಶೇಷ ನ್ಯಾಯಾಲಯಕ್ಕೂ, ಎರಡನೇ ಪ್ರಕರಣದ ವರದಿಯನ್ನು ಮುಂಬೈನ ವಿಶೇಷ ನ್ಯಾಯಾಲಯಕ್ಕೂ ಸಲ್ಲಿಸಲಾಗಿದೆ.

ವರದಿಯನ್ನು ಸ್ವೀಕರಿಸಬೇಕೆ ಅಥವಾ ಹೆಚ್ಚಿನ ತನಿಖೆ ನಡೆಸುವಂತೆ ಸಿಬಿಐಗೆ ಆದೇಶಿಸಬೇಕೆ ಎಂಬುದನ್ನು



ಸುಶಾಂತ್ ಸಿಂಗ್ ರಜಪೂತ್

ನ್ಯಾಯಾಲಯಗಳು ನಿರ್ಧರಿಸಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಿಯಾ ವಕೀಲರಾದ ಸತೀಶ್ ಮಾನೇಶಿಂದೆ ಅವರು ಮುಕ್ತಾಯ ವರದಿಯನ್ನು ಶ್ಲಾಘಿಸಿದ್ದು, 'ಪ್ರಕರಣದ ಪ್ರತಿಯೊಂದು ಅಂಶವನ್ನು ಎಲ್ಲ ಆಯಾಮಗಳಿಂದಲೂ ಸಂಪೂರ್ಣವಾಗಿ ತನಿಖೆ ಮಾಡಿದ್ದಕ್ಕೆ' ಸಿಬಿಐಗೆ ಧನ್ಯವಾದ ಸಲ್ಲಿಸಿದ್ದಾರೆ.

ಸುಶಾಂತ್ ಸಿಂಗ್, 2020ರ ಜೂನ್ 14ರಂದು ಬಾಂದ್ರಾದ ಉಪನಗರದಲ್ಲಿನ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಶವವಾಗಿ ಪತ್ತೆಯಾಗಿದ್ದರು. ಮುಂಬೈ ಪೊಲೀಸರು ಆಕಸ್ಮಿಕ ಸಾವು ಎಂದು ಪ್ರಕರಣ ದಾಖಲಿಸಿಕೊಂಡಿದ್ದರು. ನಟ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ ಎಂದು ಕೂಪರ್ ಆಸ್ಪತ್ರೆಯಲ್ಲಿ ನಡೆಸಿದ್ದ ಮರಣೋತ್ತರ ಪರೀಕ್ಷೆಯ ವರದಿ ತಿಳಿಸಿತ್ತು.

ಸುಶಾಂತ್ ಸಾವು ಪ್ರಕರಣದಲ್ಲಿ ಸಿಬಿಐ ಮುಕ್ತಾಯ ವರದಿ ಸಲ್ಲಿಸಿರುವುದು ಬಿಜೆಪಿಯ ಕೊಳಕು ರಾಜಕೀಯವನ್ನು ಬಹಿರಂಗಪಡಿಸಿದೆ

ಸಚಿನ್ ಸಾವಂತ್
ಮಹಾರಾಷ್ಟ್ರ ಕಾಂಗ್ರೆಸ್ ವಕ್ತಾರ

ಸುಶಾಂತ್ ಆತ್ಮಹತ್ಯೆಗೆ ರಿಯಾ ಪ್ರಚೋದನೆ ನೀಡಿದ್ದಾರೆ ಮತ್ತು ನಟನ ಖಾತೆಯಿಂದ ₹15 ಕೋಟಿ ಮೊತ್ತವನ್ನು ಬೇರೆ ಖಾತೆಗೆ ವರ್ಗಾಯಿಸಲಾಗಿದೆ ಎಂದು ಆರೋಪಿಸಿ ಕೆ.ಕೆ.ಸಿಂಗ್ ಪಟ್ನಾ ಪೊಲೀಸರಿಗೆ ದೂರು ನೀಡಿದ್ದರು.

ದೆಹಲಿಯ ವೈದ್ಯರೊಬ್ಬರು ನೀಡಿದ ನಕಲಿ ಪ್ರಿಸ್ಕ್ರಿಪ್ಷನ್ ಆಧಾರದ ಮೇಲೆ ಸುಶಾಂತ್ ಅವರ ಸಹೋದರಿಯರು ಅವರಿಗೆ ಔಷಧಿಗಳನ್ನು ನೀಡಿದ್ದಾರೆ ಎಂದು ಆರೋಪಿಸಿ ರಿಯಾ ಅವರು ಬಾಂದ್ರಾದಲ್ಲಿ ದೂರು ಸಲ್ಲಿಸಿದ್ದರು. ಔಷಧಿ ಸೇವಿಸಿದ ಐದು ದಿನಗಳ ಬಳಿಕ ಸುಶಾಂತ್ ಮೃತಪಟ್ಟಿದ್ದಾರೆ ಎಂದು ರಿಯಾ ಆರೋಪಿಸಿದ್ದರು.

'ನಾಗ್ಪುರ ಗಲಭೆಗೆ ಬಾಂಗ್ಲಾ ನಂಟು'

ಮುಂಬೈ (ಪಿಟಿಐ): ನಾಗ್ಪುರ ಗಲಭೆಯಲ್ಲಿ ಬಾಂಗ್ಲಾದೇಶದೊಂದಿಗೆ ಸಂಪರ್ಕ ಹೊಂದಿರುವ ಕೆಲವು ವ್ಯಕ್ತಿಗಳು ಭಾಗಿಯಾಗಿದ್ದರು ಎಂದು ಶಿವಸೇನಾ (ಶಿಂದೆ ಬಣ) ನಾಯಕ ಸಂಜಯ್ ನಿರುಪಮ್ ಭಾನುವಾರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂಸಾಚಾರವು ಪೂರ್ವ ಯೋಜಿತ ಮತ್ತು ದೊಡ್ಡ ಪಿತೂರಿಯ ಭಾಗ ಎಂದು ಹೇಳಿದರು.

ಗಲಭೆ ಪ್ರಕರಣದಲ್ಲಿ ಬಂಧಿಸಿರುವ ಕೆಲವರು 'ಮುಜಾಹಿದೀನ್ ಚಟುವಟಿಕೆ'ಗಳಿಗೆ ನಿಧಿ ಸಂಗ್ರಹಕ್ಕಾಗಿ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿದ್ದರು ಎಂದರು.

ಇದೇ ಸಂದರ್ಭದಲ್ಲಿ, ಶಿವಸೇನಾ (ಉದ್ಧವ್ ಬಣ) ಹಿಂದೂ ವಿರೋಧಿಯಾಗಿ ಬದಲಾಗಿದೆ. 'ಮಾತೋಶ್ರೀ'ಯಲ್ಲಿ (ಉದ್ಧವ್ ಠಾಕ್ರೆ ನಿವಾಸ) ಶೀಘ್ರವೇ ಪಕ್ಷದ ಸಂಸ್ಥಾಪಕ ಬಾಳಾ ಸಾಹೇಬ್ ಠಾಕ್ರೆ ಮತ್ತು ಶಿವಾಜಿ ಮಹಾರಾಜ ಅವರ ಫೋಟೊ ಬದಲಾಗಿ ಔರಂಗಜೇಬ್ ಫೋಟೊ ಇರಲಿದೆ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಠುವಾ: ಎನ್‌ಕೌಂಟರ್

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯಲ್ಲಿ ಭಯೋತ್ಪಾದಕರು ಹಾಗೂ ಭದ್ರತಾ ಪಡೆಗಳ ನಡುವೆ ಭಾನುವಾರ ಸಂಜೆ ಎನ್‌ಕೌಂಟರ್ ನಡೆದಿದೆ.

ಹಿರಾನಗರ್ ವಲಯದಲ್ಲಿ ಅಂತರರಾಷ್ಟ್ರೀಯ ಗಡಿಯ ಬಳಿ ಸನ್ಯಾಲ್ ಗ್ರಾಮದಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯ ಆರಂಭಿಸಿದಾಗ ಎನ್‌ಕೌಂಟರ್ ಆರಂಭವಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರದೇಶದಲ್ಲಿ ಶಂಕಿತ ಭಯೋತ್ಪಾದಕರು ಇರುವ ಬಗ್ಗೆ ಭದ್ರತಾ ಪಡೆಗಳಿಗೆ ಮಾಹಿತಿ ದೊರಕಿತ್ತು.

ಭದ್ರತಾ ಪಡೆಗಳು ಹಾಗೂ ಭಯೋತ್ಪಾದಕರ ನಡುವಿನ ಗುಂಡಿನ ಚಕಮಕಿಯ ಸಂದರ್ಭದಲ್ಲಿ ಏಳು ವರ್ಷ ವಯಸ್ಸಿನ ಬಾಲಕಿಯೊಬ್ಬಳಿಗೆ ಗಾಯಗಳಾಗಿವೆ. ಆಕೆ ಅಪಾಯದಿಂದ ಪಾರಾಗಿದ್ದಾಳೆ ಎಂದು ವೈದ್ಯರು ತಿಳಿಸಿದ್ದಾರೆ ಎಂಬುದಾಗಿ ಎನ್‌ಡಿಟಿವಿ ವರದಿ ಮಾಡಿದೆ.

ಅಸ್ಸಾಂ: ಪರೀಕ್ಷೆ ರದ್ದು

ಗುವಾಹಟಿ (ಪಿಟಿಐ): ಅಸ್ಸಾಂನ ವಿವಿಧೆಡೆ 11ನೇ ತರಗತಿ ಬೋರ್ಡ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾದ ಬಗ್ಗೆ ವರದಿಯಾದ ಬೆನ್ನಲ್ಲೇ, ಮಾರ್ಚ್ 24ರಿಂದ 29ರವರೆಗೆ ನಡೆಯಬೇಕಿದ್ದ ಪರೀಕ್ಷೆಗಳನ್ನು ರದ್ದು ಮಾಡಲಾಗಿದೆ ಎಂದು ಶಿಕ್ಷಣ ಸಚಿವ ರನೋಜ್ ಪೆಗು ತಿಳಿಸಿದರು.

ಪರೀಕ್ಷೆ ನಿಗದಿಯಾದ ಒಂದು ದಿನ ಮುಂಚೆಯೇ ಮೂರು ಸರ್ಕಾರಿ ಶಾಲೆಗಳು ಸೇರಿದಂತೆ 18 ಶಾಲೆಗಳು ಗಣಿತ ಪ್ರಶ್ನೆಪತ್ರಿಕೆಯ 'ಸೀಲ್' ಅನ್ನು ತೆಗೆದಿದ್ದವು. ಇದರಿಂದಾಗಿ ಮಾರ್ಚ್ 21ರಂದು ನಿಗದಿಯಾಗಿದ್ದ ಗಣಿತ ಪರೀಕ್ಷೆಯನ್ನು ರದ್ದುಪಡಿಸಿ, ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

ಡ್ರಗ್ ಸೇವಿಸುತ್ತಿದ್ದ ಮುಸ್ಕಾನ್

ಮೀರತ್ (ಉತ್ತರ ಪ್ರದೇಶ) (ಪಿಟಿಐ): ಸೌರಭ್ ರಜಪೂತ್ ಕೊಲೆ ಪ್ರಕರಣದ ಆರೋಪಿಗಳಾದ ಮುಸ್ಕಾನ್ ರಸ್ತೋಗಿ ಮತ್ತು ಆಕೆಯ ಪ್ರಿಯಕರ ಸಾಹಿಲ್ ಶುಕ್ಲಾ ಇಬ್ಬರಿಗೂ ಜೈಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮಾದಕದ್ರವ್ಯ ಸೇವನೆಯನ್ನು ದಿಢೀರ್ ನಿಲ್ಲಿಸಿದಾಗ ಕಂಡುಬರುವ ಲಕ್ಷಣಗಳು ಅವರಲ್ಲಿ ಕಾಣಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಬುಧವಾರದಿಂದ ಆರೋಪಿಗಳನ್ನು ಚೌದರಿ ಚರಣ್‌ಸಿಂಗ್ ಜಿಲ್ಲಾ ಕಾರಾಗೃಹದಲ್ಲಿ ಇರಿಸಲಾಗಿದೆ.

ಮುಸ್ಕಾನ್ ಮತ್ತು ಸಾಹಿಲ್ ಇಬ್ಬರೂ ಜೈಲಿನಲ್ಲಿ ಸರಿಯಾಗಿ ನಿದ್ರಿಸುತ್ತಿಲ್ಲ, ಊಟ ಮಾಡುತ್ತಿಲ್ಲ, ನೀರು ಕುಡಿಯುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ಖ್ಯಾತ ಪಿಟೀಲು ವಾದಕನಿಗೆ 'ಸಂಗೀತ ಕಲಾನಿಧಿ' ಪುರಸ್ಕಾರ

ಆರ್‌.ಕೆ. ಶ್ರೀರಾಮಕುಮಾರ್‌ಗೆ ಗೌರವ

ಪ್ರಜಾವಾಣಿ ವಾರ್ತೆ

ಚೆನ್ನೈ: ಕರ್ನಾಟಕದ ಹಾಸನ ಜಿಲ್ಲೆಯ ರುದ್ರಪಟ್ಟಣ ಗ್ರಾಮದ ಖ್ಯಾತ ಪಿಟೀಲು ವಾದಕ ಆರ್‌.ಕೆ. ಶ್ರೀರಾಮಕುಮಾರ್ ಅವರನ್ನು ಪ್ರತಿಷ್ಠಿತ 'ಸಂಗೀತ ಕಲಾನಿಧಿ ಪ್ರಶಸ್ತಿ'ಗೆ ಚೆನ್ನೈನ ಸಂಗೀತ ಅಕಾಡೆಮಿಯು ಆಯ್ಕೆ ಮಾಡಿದೆ.

ಹಿರಿಯ ಗಾಯಕಿ ಶ್ಯಾಮಲ ವೆಂಕಟೇಶ್ವರನ್ ಮತ್ತು ತಬಲ ವಾದಕ ತಾಂಜಾವೂರು ಆರ್.ಗೋವಿಂದ ರಾಜನ್ ಅವರನ್ನು 'ಸಂಗೀತ ಕಲಾ ಆಚಾರ್ಯ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮದಂಬಿ ಸುಬ್ರಮಣಿಯ ನಂಬೂದಿರಿ ಮತ್ತು ಜೆ.ಟಿ. ಜಯರಾಜ್ ಕೃಷ್ಣನ್ ಹಾಗೂ ಜಯಶ್ರೀ ಜಯರಾಜ್ ಕೃಷ್ಣನ್ ಅವರು ಟಿಟಿಕೆ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮಹಿಳಾ ಲಲಿತಕಲಾ ಕಾಲೇಜು



ಆರ್‌.ಕೆ. ಶ್ರೀರಾಮಕುಮಾರ್

ವಿಶ್ವವಿದ್ಯಾಲಯದ ಪ್ರೊ.ಸಿ.ಎ.ಶ್ರೀಧರ ಅವರಿಗೆ ಮ್ಯೂಸಿಕಾಲಜಿಸ್ಟ್ ಪ್ರಶಸ್ತಿ ಮತ್ತು ನೃತ್ಯ ಸಂಯೋಜಕಿ ಊರ್ಮಿಳಾ ಸತ್ಯನಾರಾಯಣ ಅವರಿಗೆ ನೃತ್ಯ ಕಲಾನಿಧಿ ಪ್ರಶಸ್ತಿಯನ್ನು ಪ್ರಕಟಿಸಿದೆ.

2025ರ ಡಿಸೆಂಬರ್ 15ರಿಂದ 2026ರ ಜನವರಿ 1ರ ನಡುವೆ ಹಮ್ಮಿಕೊಳ್ಳಲಾಗುವ ಅಕಾಡೆಮಿಯ 99ನೇ ವಾರ್ಷಿಕ ಸಮಾವೇಶದಲ್ಲಿ ಪ್ರಶಸ್ತಿ ವಿತರಿಸಲಾಗುತ್ತದೆ ಎಂದು ಅಕಾಡೆಮಿ ತಿಳಿಸಿದೆ.

2024ರಲ್ಲಿ ಸಾಮಾಜಿಕ ಹೋರಾಟಗಾರ ಮತ್ತು ಸಂಗೀತಗಾರ ಟಿ.ಎಂ ಕೃಷ್ಣ ಅವರಿಗೆ ಸಂಗೀತ ಕಲಾನಿಧಿ ಪ್ರಶಸ್ತಿ ನೀಡಲಾಗಿತ್ತು. ಈ ಬಗ್ಗೆ ವ್ಯಾಪಕ ಅಪಸ್ವರ ಕೇಳಿಬಂದಿತ್ತು.

ಪಿಟೀಲು ವಾದನದಲ್ಲಿ ಮಾಂತ್ರಿಕ

ರುದ್ರಪಟ್ಟಣ ಎಂಬ ಸಣ್ಣ ಹಳ್ಳಿಯು ಸಾಂಪ್ರದಾಯಿಕ ಕರ್ನಾಟಕ ಶಾಸ್ತ್ರೀಯ ಸಂಗೀತ ಜಗತ್ತಿನ ಹಲವು ಮೇರು ಪ್ರತಿಭೆಗಳಿಗೆ ಜನ್ಮ ನೀಡಿದೆ. ಅವರಲ್ಲಿ ಶ್ರೀರಾಮಕುಮಾರ್ ಸಹ ಒಬ್ಬರು.

ಶ್ರೀರಾಮಕುಮಾರ್ ಅವರು ತಮ್ಮ ಅಜ್ಜ, ಪ್ರಸಿದ್ಧ ಪಿಟೀಲು ವಾದಕ ಆರ್‌.ಕೆ.ವೆಂಕಟರಾಮ ಶಾಸ್ತ್ರಿ ಅವರಿಂದ ತರಬೇತಿ ಪಡೆದಿದ್ದಾರೆ.

ಶ್ರೀರಾಮಕುಮಾರ್ ಅವರು ಕರ್ನಾಟಕ ಸಂಗೀತ ಕ್ಷೇತ್ರದ ದಂತಕಥೆಗಳಾದ ಸೆಮ್ಮನ್‌ಗುಡಿ ಆರ್‌.ಶ್ರೀನಿವಾಸ ಅಯ್ಯರ್, ಟಿ.ಬೃಂದಾ, ಎಂ.ಎಸ್.ಸುಬ್ಬುಲಕ್ಷ್ಮಿ ಮತ್ತು ಡಿ.ಕೆ.ಪಟ್ಟಮ್ಮಾಳ್ ಸೇರಿದಂತೆ ಈಗಿನ ಸಂಗೀತಗಾರರೊಂದಿಗೂ ಸಂಗೀತ ಸುಧೆ ಹರಿಸಿದ್ದಾರೆ.

ಅವರ ಪಿಟೀಲು ವಾದನ ಪ್ರದರ್ಶನಗಳು, ಅವರ ಸಂಯೋಜನೆಗಳು ಮತ್ತು ಹಾಡುಗಳ ಸಂಯೋಜನೆಗಳು ಈಗಲೂ ಪ್ರಸಿದ್ಧಿ ಪಡೆದಿವೆ ಮತ್ತು ಸಂಗೀತ ಪ್ರಿಯರನ್ನು ಸೆಳೆಯುವ ಮಾಂತ್ರಿಕ ಶಕ್ತಿಯನ್ನು ಹೊಂದಿವೆ.

ಸಿಬಿಐ ವಿಶೇಷ ಕೋರ್ಟ್ ಆದೇಶ ಪಾಲನೆಯಾಗಲಿ • ಲೇಖಕಿಯರ ಸಮ್ಮೇಳನದಲ್ಲಿ ಎಂಟು ನಿರ್ಣಯ ಅಂಗೀಕಾರ

ಸೌಜನ್ಯ ಕೊಲೆ: ಮರು ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಜನ್ಯ ಕೊಲೆ ಪ್ರಕರಣದ ಮರು ತನಿಖೆ ನಡೆಸಬೇಕು ಎಂಬ ಒತ್ತಾಯ ಸೇರಿದಂತೆ ಎಂಟು ನಿರ್ಣಯಗಳನ್ನು ಇಲ್ಲಿ ನಡೆದ ಎಂಟನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು.

ಕರ್ನಾಟಕ ಲೇಖಕಿಯರ ಸಂಘ ಹಮ್ಮಿಕೊಂಡಿದ್ದ ಸಮ್ಮೇಳನದ ಕಡೆಯ ದಿನವಾದ ಭಾನುವಾರ ಸಂಘದ ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಸಂಘದ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ ಅವರು ನಿರ್ಣಯಗಳನ್ನು ವಾಚಿಸಿದರು.


'ಹೆಣ್ಣು ಮಕ್ಕಳ ಅಸಹಜ ಸಾವು ಪ್ರಕರಣಗಳನ್ನು ಮರು ತನಿಖೆ ಮಾಡಬೇಕು. ಸೌಜನ್ಯ ಪ್ರಕರಣದಲ್ಲಿ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯದ ಆದೇಶವನ್ನು ಪಾಲಿಸಬೇಕು. ಅಮಾಯಕ ಹುಡುಗಿಯರ ಸಾವಿಗೆ ಕಾರಣರಾದವರಿಗೆ ಶಿಕ್ಷೆಯಾಗಬೇಕು' ಎಂದು ಆಗ್ರಹಿಸಿದರು.

'ಹನಿಟ್ರ್ಯಾಪ್ ಪ್ರಕರಣಗಳಲ್ಲಿ ಹೆಣ್ಣನ್ನು ಆಟಿಕೆಯಂತೆ ಬಳಸಿಕೊಳ್ಳುವ ಕ್ರಮ ಖಂಡನೀಯ. ಸಾರ್ವಜನಿಕ ಜೀವನದಲ್ಲಿ ಹೆಣ್ಣನ್ನು ಇಲಿ ಹಿಡಿಯುವ ಬೋನಿನಂತೆ ಬಳಸಿಕೊಳ್ಳಲಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಸಾರ್ವಜನಿಕವಾಗಿ ಮಾಧ್ಯಮಗಳಲ್ಲಿ ಹಾಗೂ ಸದನದಲ್ಲಿ ಮಹಿಳೆಯರ ಕುರಿತು ಬಳಸುವ ಭಾಷೆ ಮತ್ತು ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಇದು ಅಸಾಂವಿಧಾನಿಕ ಮತ್ತು ಅನಾಗರಿಕ. ಈ ಬಗ್ಗೆ ಮಾಧ್ಯಮಗಳು ಹಾಗೂ ಜನ ಪ್ರತಿನಿಧಿಗಳ ಧೋರಣೆ ಬದಲಾಗಬೇಕು' ಎಂದು ಒತ್ತಾಯಿಸಿದರು.

'ಹೆಣ್ಣು ಕುಲದ ನಾಶಕ್ಕೆ ಕಾರಣವಾಗಿರುವ ಭ್ರೂಣಹತ್ಯೆ ನಿಯಂತ್ರಿಸಲು ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಡೆ ಕಾಯ್ದೆಯ (ಪಿಸಿಪಿಎನ್‌ಡಿಟಿ) ಕಾನೂನು ಬಲಗೊಳಿಸಬೇಕು. ಈ ಪ್ರಕರಣಗಳ ಇತ್ಯರ್ಥಕ್ಕಾಗಿ ತ್ವರಿತ ಕೋರ್ಟ್ ಸ್ಥಾಪನೆಯಾಗಬೇಕು' ಎಂದು ಒತ್ತಾಯಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

'ಮರ್ಯಾದೆಗೇಡು ಹತ್ಯೆ ಹೆಸರಿನಲ್ಲಿ ಯುವಕ-ಯುವತಿಯರು ದಮನಕ್ಕೆ ಒಳಗಾಗುತ್ತಿರುವುದು ವಿಷಾದನೀಯ. ವಿವಾಹದ ಮೂಲಕ ಜಾತಿ, ಮತಗಳ ಭೇದವಿಲ್ಲದ ನವ ಸಮಾಜದ ಕನಸು ಕಾಣುವವರ ಮೇಲಿನ ದೌರ್ಜನ್ಯ ಖಂಡನೀಯ. ಈ ಬಗ್ಗೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಹಿಂಸೆ, ದೌರ್ಜನ್ಯಗಳ ತಡೆಗೆ ವಿ.ಎಸ್.ಉಗ್ರಪ್ಪ ನೇತೃತ್ವದ ಸಮಿತಿ ವರದಿಯನ್ನು ಅಂಗೀಕರಿಸಿ, ಶಿಫಾರಸುಗಳನ್ನು ಜಾರಿಮಾಡಬೇಕು' ಎಂದು ಆಗ್ರಹಿಸಲಾಯಿತು.



ಲೇಖಕಿಯರಾದ ಪ್ರೇಮಾ ಭಟ್, ಪಾರ್ವತಿ ಐತಾಳ್, ಲಲಿತಮ್ಮ ಚಂದ್ರಶೇಖರ್, ಸುಮಾ ದೇಶಮಾನೆ, ಇಂದಿರಾ ಶಿವಣ್ಣ ಅವರನ್ನು ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಗೌರವಿಸಲಾಯಿತು. ಸಂಘದ ಪದಾಧಿಕಾರಿಗಳಾದ ಸುಮಾ ಸತೀಶ್, ಭಾರತಿ ಹೆಗಡೆ, ಮಂಜುಳಾ ಶಿವಾನಂದ, ಎಚ್.ಎಲ್ ಪುಷ್ಪ, ಕವಿ ಎಲ್ ಹನುಮಂತಯ್ಯ, ಲೇಖಕಿಯರಾದ ಬಾನು ಮುಷ್ತಾಕ್, ಡಾ.ವಸುಂಧರಾ ಭೂಪತಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಮಹಿಳೆಯನ್ನು ಶಿಕ್ಷಿಸುವ ಅಲಿಖಿತ ಶಾಸನ ಸಮಾಜದಲ್ಲಿದೆ'

ಬೆಂಗಳೂರು: 'ಲೈಂಗಿಕ ಅಭಿವ್ಯಕ್ತಿ, ಧರ್ಮ ಮತ್ತು ರಾಜಕೀಯ ಕ್ಷೇತ್ರವನ್ನು ಮುಟ್ಟಿದರೆ ನಿಮ್ಮನ್ನು ನಾವು ಶಿಕ್ಷಿಸುತ್ತೇವೆ ಎಂಬ ಅಲಿಖಿತ ಶಾಸನ ಸಮಾಜದಲ್ಲಿದೆ. ಈ ಬಗ್ಗೆ ಮಹಿಳೆಯರು ದೃಢ ನಿಲುವು ಹೊಂದಬೇಕು' ಎಂದು ಲೇಖಕಿ ಬಾನು ಮುಷ್ತಾಕ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ಲೇಖಕಿಯರ ಸಂಘವು ನಗರದಲ್ಲಿ ಹಮ್ಮಿಕೊಂಡಿದ್ದ ಎಂಟನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಸಮಾಜದಲ್ಲಿ ಮಹಿಳೆಯಾಗಿ ಹಾಗೂ ಲೇಖಕಿಯಾಗಿ ಲೈಂಗಿಕ ಅಭಿವ್ಯಕ್ತಿ, ಧರ್ಮ, ರಾಜಕೀಯ ಕ್ಷೇತ್ರವನ್ನು ಮುಟ್ಟಬಾರದೆಂಬ ಅಲಿಖಿತ ಶಾಸನವಿದೆ. ನಾವು ಮುಟ್ಟಬೇಕೋ? ಬೇಡವೋ? ಮುಖಾಮುಖಿ ಆಗಬೇಕೋ? ಬೇಡವೋ? ಸಂವಾದ ಮಾಡಬೇಕೋ? ಬೇಡವೋ? ಎಂಬ ಬಗ್ಗೆ ದೃಢವಾದ ನಿಲುವು ತಾಳಬೇಕು' ಎಂದರು.

'ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯು ಮಾನಸಿಕ, ದೈಹಿಕ, ಭಾವನಾತ್ಮಕ, ಲೈಂಗಿಕ, ಆರ್ಥಿಕ ಮತ್ತು ಶಾಬ್ದಿಕ ಹಿಂಸೆ ಮಾಡಬಾರದು ಎಂದು ಹೇಳುತ್ತದೆ. ಹೀಗಿರುವಾಗ ಮಹಿಳೆಯನ್ನು ಸಾರ್ವಜನಿಕವಾಗಿ ವೇಶ್ಯೆ ಎಂದು ಅವಹೇಳನ ಮಾಡಲಾಗುತ್ತಿದೆ' ಎಂದು ಅವರು ಪ್ರಶ್ನಿಸಿದರು.

ಇದೇ ಸಮಾರಂಭದಲ್ಲಿ ಸಂಘದ ಮಾಜಿ ಅಧ್ಯಕ್ಷೆ ಡಾ. ವಸುಂಧರಾ ಭೂಪತಿ ಅವರು, 'ಸಂಘಕ್ಕೆ ಪ್ರತಿ ವರ್ಷ ₹ 50 ಲಕ್ಷ ಅನುದಾನ ನೀಡಬೇಕು. ಇದರಿಂದ ಸಂಘವು ಲೇಖಕಿಯರ ಪುಸ್ತಕ ಮಾರಾಟದಂತಹ ಚಟುವಟಿಕೆಗಳನ್ನು ನಡೆಸಲಿದೆ. ಸಂಘಕ್ಕೆ ನಿವೇಶನ ಅಗತ್ಯವೂ ಇದೆ' ಎಂದು ಆಗ್ರಹಿಸಿದರು.

ಸರ್ಕಾರಿ ನೌಕರರಿಗೆ 'ಸಂಬಳ ಪ್ಯಾಕೇಜ್' ಖಾತೆ ಕಡ್ಡಾಯ

ಬೆಂಗಳೂರು: ರಾಜ್ಯ ಸರ್ಕಾರದ ಎಲ್ಲ ನೌಕರರು, ಅಧಿಕಾರಿಗಳು ವಿವಿಧ ಬ್ಯಾಂಕ್ ಮತ್ತು ಅಂಚೆ ಕಚೇರಿಗಳಲ್ಲಿ 'ಸಂಬಳ ಪ್ಯಾಕೇಜ್' ಖಾತೆ ತೆರೆಯುವುದನ್ನು ಕಡ್ಡಾಯ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಸಂಬಳ ಪ್ಯಾಕೇಜ್‌ನ ಅಡಿಯಲ್ಲಿ ಖಾತೆ ಹೊಂದಿದ್ದರೆ ಅಂತಹ ನೌಕರರಿಗೆ ಬ್ಯಾಂಕ್‌ಗಳು ಕಡಿಮೆ ಬಡ್ಡಿ ದರದಲ್ಲಿ ವಸತಿ ಸಾಲ, ಉಚಿತ ರುಪೇ ಡೆಬಿಟ್–ಕ್ರೆಡಿಟ್ ಕಾರ್ಡ್, ಉಚಿತ ಡಿಮ್ಯಾಂಡ್ ಡ್ರಾಫ್ಟ್, ರಿಯಾಯಿತಿ ದರದಲ್ಲಿ ಲಾಕರ್ ಸೇವೆ ಒದಗಿಸುತ್ತಿವೆ. ಈ ಅನುಕೂಲಗಳನ್ನು ಸರ್ಕಾರಿ ನೌಕರರು ಪಡೆದುಕೊಳ್ಳಬೇಕು ಎಂದು ಸೂಚಿಸಿದ್ದರೂ ಅನೇಕರು ಖಾತೆ ಆರಂಭಿಸದಿರುವುದು ಗಮನಕ್ಕೆ ಬಂದಿದೆ ಎಂದು ಇಲಾಖೆ ತಿಳಿಸಿದೆ.

ಜತೆಗೆ ಅತ್ಯಂತ ಕಡಿಮೆ ಮೊತ್ತಕ್ಕೆ ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (ಟರ್ಮ್ ಇನ್ಸುರೆನ್ಸ್), ₹456ಕ್ಕೆ ₹2 ಲಕ್ಷ ಮೊತ್ತದ ಅಪಘಾತ ವಿಮೆ ಒದಗಿಸುತ್ತಿದೆ. ಇನ್ನಷ್ಟು ಅನುಕೂಲಗಳು ಈ ಖಾತೆಗಳಿಗೆ ಲಭ್ಯವಿದೆ. ಹೀಗಾಗಿ ಎಲ್ಲ ನೌಕರರು ಮೂರು ತಿಂಗಳ ಒಳಗೆ ಸಂಬಳ ಪ್ಯಾಕೇಜ್ ಖಾತೆ ತೆರೆಯಬೇಕು ಎಂದು ಸೂಚಿಸಿದೆ.

'ಎಲ್ಲ ನೌಕರರು ಈ ಸ್ವರೂಪದ ಬ್ಯಾಂಕ್ ಅಥವಾ ಅಂಚೆ ಕಚೇರಿಗಳಲ್ಲಿ ಖಾತೆ ಆಯ್ಕೆ ಮಾಡಿಕೊಳ್ಳುವಂತೆ ಕ್ರಮವಹಿಸುವುದು ಆಯಾ ಇಲಾಖೆಯ ಮುಖ್ಯಸ್ಥರ ಹೊಣೆಗಾರಿಕೆ ಆಗಿರುತ್ತದೆ. ಈ ಸಂಬಂಧ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಮತ್ತು ನೌಕರರನ್ನು ಪ್ರೋತ್ಸಾಹಿಸಬೇಕು' ಎಂದು ಸೂಚಿಸಿದೆ.

ಶಾಸನ ಸಭೆಗೆ ಕಳಪೆ ಸಾಮಗ್ರಿ ಕಳಿಸ್ತಿದ್ದೀವಿ: ಮಹದೇವಪ್ಪ

ಪ್ರಜಾವಾಣಿ ವಾರ್ತೆ

ಮೈಸೂರು: 'ಶಾಸನ ಸಭೆಗಳಿಗೆ ಕಳಪೆ ಸಾಮಗ್ರಿ ಕಳುಹಿಸುತ್ತಿರುವುದರಿಂದ, ಅಲ್ಲಿ ಅನುಭವ ಮಂಟಪದಲ್ಲಿ ನಡೆಯುತ್ತಿದ್ದಂತಹ ಚರ್ಚೆಗಳು ಆಗುತ್ತಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಇಲ್ಲಿನ ಕಲಾಮಂದಿರದಲ್ಲಿ ಭಾನುವಾರ ನಡೆದ ಶರಣ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, '12ನೇ ಶತಮಾನದ ಅನುಭವ ಮಂಟಪದಲ್ಲಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣನಂಥ ಪ್ರತಿಭೆಗಳಿದ್ದರು. ಈಗಿನ ಸಂಸತ್, ವಿಧಾನಸಭೆಗಳಲ್ಲಿ ಅಂತಹ ಅನುಭವಸ್ಥರು, ಪ್ರತಿಭಾವಂತರಿಲ್ಲ' ಎಂದರು.



ಡಾ.ಎಚ್.ಸಿ.ಮಹದೇವಪ್ಪ

'ಮೌಲ್ಯಗಳು ಕುಸಿಯುತ್ತಿವೆ. ಸಾಂಸ್ಕೃತಿಕ ಉದಾಸೀನತೆ, ಧಾರ್ಮಿಕ ದ್ವೇಷ ಹೆಚ್ಚಾಗಿದೆ. ಬಸವಣ್ಣನ ಕಾಯಕ ತತ್ವವನ್ನು ಕಾಣುತ್ತಿಲ್ಲ. ಬಿಜ್ಜಳನ ಸುತ್ತಲಿದ್ದ ಕೆಟ್ಟವರೇ ಈಗಲೂ ಇದ್ದಾರೆ. ವಚನಕಾರರಂತೆ ಚಳವಳಿ ಹುಟ್ಟುಹಾಕಬೇಕಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಮಧುಬಲೆ: ಸಚಿವ ಕೆ.ಎನ್. ರಾಜಣ್ಣ ಪುತ್ರ ರಾಜೇಂದ್ರ ಸವಾಲು

'ಸಿ.ಡಿ ಇದ್ದರೆ ಬಿಡುಗಡೆ ಮಾಡಲಿ'

ಪ್ರಜಾವಾಣಿ ವಾರ್ತೆ

ತುಮಕೂರು: ಸಹಕಾರ ಸಚಿವ ಕೆ.ಎನ್.ರಾಜಣ್ಣ ಹನಿಟ್ರ್ಯಾಪ್‌ಗೆ ಸಿಲುಕಿದ್ದಾರೆ ಎಂದು ಕೆಲವರು ಮಾತನಾಡುತ್ತಿದ್ದಾರೆ. ಅಂತಹ ಸಿ.ಡಿ ಇದ್ದರೆ ಬಿಡುಗಡೆ ಮಾಡಲಿ ಎಂದು ವಿಧಾನ ಪರಿಷತ್ ಸದಸ್ಯ ಆರ್.ರಾಜೇಂದ್ರ ಸವಾಲು ಹಾಕಿದ್ದಾರೆ.



ಆರ್.ರಾಜೇಂದ್ರ

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಹನಿಟ್ರ್ಯಾಪ್ ಹಿಂದೆ ಇರುವ ಮಹಾನಾಯಕ ಯಾರು ಎನ್ನುವುದಕ್ಕಿಂತ ಇದು ಇಲ್ಲಿಗೆ ಅಂತ್ಯವಾಗಬೇಕು. ಮುಂದಿನ ದಿನಗಳಲ್ಲಿ ಯಾರಿಗೂ ಹೀಗೆ ಆಗಬಾರದು ಎಂದು ಅಭಿಪ್ರಾಯಪಟ್ಟರು.

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ವಿಚಾರದಲ್ಲಿ ಕುಣಿಗಲ್ ಶಾಸಕರ ಕಡೆಯವರು ಬೆದರಿಕೆ ಹಾಕಿದ್ದಾರೆ. ಹನಿಟ್ರ್ಯಾಪ್ ಯತ್ನದ ಬಗ್ಗೆ ದೂರು ನೀಡುವಾಗ ಈ ಅಂಶ ಕೂಡ ಸೇರಿಸಲಾಗುವುದು ಎಂದರು.

ಮಧುಬಲೆ ವಿಚಾರ ನಮಗೂ ಮುಜುಗರ ತಂದಿದೆ. ಅನೇಕ ದೇಶಗಳು ಸಾಧನೆಗಳ ಕುರಿತು ಮಾತನಾಡತೊಡಗಿದ್ದ ಸಂದರ್ಭದಲ್ಲಿ ನಾವು ಇಂತಹ ನಾಚಿಕೆಗೇಡು ವಿಚಾರಕ್ಕೆ ಬಡಿದಾಡುತ್ತಿದ್ದೇವೆ
ಸಂತೋಷ್ ಲಾಡ್, ಸಚಿವ

ಇನ್ನಷ್ಟು ಹೇಳುವುದಿದೆ : ಕೆ.ಎನ್. ರಾಜಣ್ಣ

ತುಮಕೂರು: 'ಹನಿಟ್ರ್ಯಾಪ್ ಸಿಲುಕಿಸಲು ಯತ್ನಿಸಿದವರ ಬಗ್ಗೆ ಮತ್ತಷ್ಟು ಮಾಹಿತಿ ಕಲೆ ಹಾಕುತ್ತಿದ್ದೇನೆ. ಮುಂದಿನ ದಿನಗಳಲ್ಲಿ ವಿವರವಾಗಿ ಹೇಳುತ್ತೇನೆ' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಯಾವುದಕ್ಕೂ ಎದೆಗುಂದುವುದಿಲ್ಲ. ವಿಚಲಿತನಾಗುವುದಿಲ್ಲ. ಸ್ಥಿತಪ್ರಜ್ಞನಾಗಿದ್ದು ಎಲ್ಲವನ್ನೂ ಸಮಾನವಾಗಿ ಸ್ವೀಕರಿಸುತ್ತೇನೆ' ಎಂದರು. ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಬಿಜೆಪಿಯವರು ಒತ್ತಾಯಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯವರು ಹೇಳಿದಂತೆ ಕೇಳಲು ಆಗುವುದಿಲ್ಲ' ಎಂದರು.

ಅಣ್ಣಾಮಲೈ ಹೇಳಿದರೆ ಮಹತ್ವವಿಲ್ಲ: ಡಿಕೆಶಿ

ಚೆನ್ನೈ (ಪಿಟಿಐ): ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಧಕ್ಕೆ ಆಗುವುದಿಲ್ಲ ಎಂದು ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಹೇಳಿರುವುದಕ್ಕೆ ಮಹತ್ವ ಇಲ್ಲ ಎಂದು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಈ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಮಾತುಗಳಿಗೆ ಮಹತ್ವ ಇರುತ್ತದೆ ಎಂದು ಶಿವಕುಮಾರ್ ಭಾನುವಾರ ಹೇಳಿದ್ದಾರೆ.

ಅಣ್ಣಾಮಲೈ ಅವರು ತಮ್ಮ ಪಕ್ಷಕ್ಕೆ ನಿಷ್ಠರಾಗಿದ್ದಾರೆ, ತಮಿಳುನಾಡು ರಾಜ್ಯಕ್ಕೆ ನಿಷ್ಠರಾಗಿ ಇಲ್ಲ ಎಂದು ಕೂಡ ಶಿವಕುಮಾರ್ ಕುಟುಕಿದ್ದಾರೆ. 'ಇಲ್ಲಿ ಅಣ್ಣಾಮಲೈ ಮುಖ್ಯರಲ್ಲ, ಪ್ರಧಾನಿ ಮತ್ತು ಗೃಹ ಸಚಿವರು ದೇಶಕ್ಕೆ ಏನು ಹೇಳುತ್ತಿದ್ದಾರೆ ಎಂಬುದು ಮುಖ್ಯ. ಪಾಪದ ಅಣ್ಣಾಮಲೈ ಅವರಿಗೆ ಏನೂ ಗೊತ್ತಿಲ್ಲ' ಎಂದಿದ್ದಾರೆ.

'ದತ್ತಾಂಶ ಆಧರಿಸಿ ಒಳಮೀಸಲಾತಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೆ ಕೈಗೊಳ್ಳಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಹೊಲಯ ಜಾತಿಯವರನ್ನೂ ಮಾದಿಗರು ಎಂದು ನಮೂದಿಸಿರುವ ಉದಾಹರಣೆಗಳು ಇವೆ. ಹೀಗಾಗಿ ಮತ್ತೆ ವೈಜ್ಞಾನಿಕವಾಗಿ ದತ್ತಾಂಶ ಸಂಗ್ರಹಿಸಿ, ಒಳಮೀಸಲಾತಿ ನೀಡಬೇಕು' ಎಂದು ಕರ್ನಾಟಕ ರಾಜ್ಯ ಬಲಗೈ ಹೊಲಯ ಸಂಬಂಧಿತ ಜಾತಿಗಳ ಒಳಮೀಸಲಾತಿ ಹೋರಾಟ ಸಮಿತಿಯ ಅಧ್ಯಕ್ಷ ಮಹದೇವ ಧನ್ನಿ ಒತ್ತಾಯಿಸಿದರು.

ಸಮಿತಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೊಲಯ ಜಾತಿಗಳ ವಿವಿಧ ಸಮುದಾಯಗಳ ಮುಖಂಡರು, ಒಳಮೀಸಲಾತಿ ಸಂಬಂಧಿತ ವಿಚಾರಣಾ ಆಯೋಗದ ಅಧ್ಯಕ್ಷ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರಿಗೆ ಮನವಿ ಸಲ್ಲಿಸಿದರು.

'ರಾಜ್ಯದ ಎಲ್ಲಡೆ ಹೊಲಯ ಜಾತಿಯ ಉಪಸಮುದಾಯಗಳನ್ನು ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಎಂದೆಲ್ಲಾ ಕರೆಯಲಾಗುತ್ತದೆ. ಇವುಗಳ ನಡುವೆ ಸ್ಪಷ್ಟ ವರ್ಗೀಕರಣ ಇಲ್ಲ. ಬೆಂಗಳೂರು–ಮೈಸೂರು ಭಾಗದಲ್ಲಿ ಇವರನ್ನು ಬಲಗೈ ಸಮುದಾಯಕ್ಕೆ ಸೇರಿಸಿದ್ದರೆ, ಆಂಧ್ರ–ತೆಲಂಗಾಣ ಗಡಿ ಪ್ರದೇಶದಲ್ಲಿ ಎಡಗೈ ಸಮುದಾಯಕ್ಕೆ ಸೇರಿಸಿದ್ದಾರೆ. ಒಳಮೀಸಲಾತಿ ಸೌಲಭ್ಯ ನೀಡುವಲ್ಲಿ ಇದು ತೊಡಕಾಗಲಿದೆ' ಎಂದರು.

'ಮತ್ತೆ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು. ಪರಿಶಿಷ್ಟರಲ್ಲಿ ಸ್ಪೃಶ್ಯ, ಅಸ್ಪೃಶ್ಯ ಜಾತಿಗಳು ಮತ್ತು ಕೆನೆಪದರ ಎಂದು ವರ್ಗೀಕರಿಸಬೇಕು. ಆ ಸಮುದಾಯಗಳಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಒಳಮೀಸಲಾತಿಗೆ ಶಿಫಾರಸು ಮಾಡಬೇಕು' ಎಂದು ಮನವಿ ಮಾಡಿದರು.

ಹೊಲಯ ಜಾತಿ ಸಮುದಾಯದ ಪರಿಯಾ, ಮಾಲಾ, ತೆಲುಗು ಮಾಲಾ ಸಮುದಾಯದ ಮುಖಂಡರು ಮನವಿಯನ್ನು ಆಯೋಗದ ಅಧ್ಯಕ್ಷರಿಗೆ ಸಲ್ಲಿಸಿದರು.

ಒಳಮೀಸಲಾತಿ: ಇಂದು ಸಿ.ಎಂ ಸಭೆ

ಬೆಂಗಳೂರು: ಪರಿಶಿಷ್ಟಜಾತಿಗಳಿಗೆ ಒಳಮೀಸಲಾತಿ ನೀಡುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಸಭೆ ಕರೆದಿದ್ದಾರೆ.

ಒಳಮೀಸಲಾತಿ ಕುರಿತು ಹೋರಾಟ ಮತ್ತು ಒತ್ತಡ ಪ್ರಬಲವಾಗುತ್ತಿರುವ ಬೆನ್ನಲ್ಲೇ ಈ ಸಭೆ ಕರೆದಿದ್ದಾರೆ. ಆದ್ದರಿಂದ ಪರಿಶಿಷ್ಟ ಜಾತಿಯ ಸಚಿವರು ತಮ್ಮ ಪ್ರವಾಸಗಳನ್ನು ಮೊಟಕುಗೊಳಿಸಿ, ಸಭೆಗೆ ಹಾಜರಾಗಲು ತೀರ್ಮಾನಿಸಿದ್ದಾರೆ. ಈ ಸಭೆಯಲ್ಲಿ ನ್ಯಾಯಮೂರ್ತಿ ನಾಗಮೋಹನದಾಸ್ ಅವರೂ ಇರಲಿದ್ದಾರೆ.



ಸಿದ್ದರಾಮಯ್ಯ

'ಒಟ್ಟಾಗಿದ್ದರೆ ಅನುಕೂಲ'

'ಪರಿಶಿಷ್ಟ ಜಾತಿಗಳನ್ನು ಒಡೆಯುವ ಯತ್ನಗಳು ನಡೆಯುತ್ತಿವೆ. ಸಂಚಿಗೆ ಬಲಿಯಾಗದೆ, ಎಲ್ಲರೂ ಒಟ್ಟಾಗಬೇಕು. ಒಳಮೀಸಲಾತಿಯನ್ನು ಪಡೆದುಕೊಳ್ಳಬೇಕು' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಅವರು ಕಿವಿಮಾತು ಹೇಳಿದರು.

'70 ವರ್ಷಗಳಿಂದ ಮೀಸಲಾತಿ ಅನುಕೂಲ ಪಡೆದ ಸಮುದಾಯಗಳು ಸ್ವಲ್ಪ ಕಡಿಮೆ ತೆಗೆದುಕೊಳ್ಳಬೇಕು. ವಂಚಿತ ಸಮುದಾಯಗಳಿಗೆ ತುಸು ಹೆಚ್ಚಿಗೆ ಕೊಡಬೇಕು. ಶೇ17ರಷ್ಟು ಮೀಸಲಾತಿಯಲ್ಲೇ ಈ ಹಂಚಿಕೆ ಮಾಡಬೇಕು. ಇದನ್ನು ಎಲ್ಲ ಸಮುದಾಯಗಳು ಮನಗಾಣಬೇಕು' ಎಂದರು.



ಎಚ್.ಎನ್. ನಾಗಮೋಹನ ದಾಸ್


ರಾಜೀನಾಮೆ ನೀಡುವೆ: ಹೊರಟ್ಟಿ

ಒಂದನೇ ಪುಟದಿಂದ...

'ರಾಜೀನಾಮೆ ಪತ್ರ ಸಿದ್ಧಪಡಿಸಲಾಗಿತ್ತು. ಆ ಪತ್ರವನ್ನು ಯಾರೋ ಮೊಬೈಲ್‌ನಲ್ಲಿ ಸೆರೆ ಹಿಡಿದು ಈ ರೀತಿ ಮಾಡಿದ್ದಾರೆ. ಪತ್ರಕ್ಕೆ ನಾನು ಸಹಿ ಮಾಡಿಲ್ಲ. ಸದನದಲ್ಲಿ ಆಗಿರುವ ಬೆಳವಣಿಗೆಗಳಿಂದ ನೊಂದಿದ್ದೇನೆ. ಆದ್ದರಿಂದ ಸ್ನೇಹಿತರ ಹಾಗೂ ಹಿತೈಷಿಗಳ ಸಲಹೆ ಪಡೆದು ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಇದಕ್ಕೂ ಮುನ್ನ ಬೆಳಿಗ್ಗೆ ಅವರು ಇಲ್ಲಿನ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸಭಾಪತಿ ಸ್ಥಾನದಲ್ಲಿ ಮುಂದುವರಿಯುವ ಬಗ್ಗೆ ಏನು ತೀರ್ಮಾನ ಕೈಗೊಳ್ಳುತ್ತೇನೆಯೋ ಗೊತ್ತಿಲ್ಲ. ಈ ಸ್ಥಾನದಲ್ಲಿರಲು ಯೋಗ್ಯನಾಗಿದ್ದೇನೋ, ಇಲ್ಲವೋ, ನನ್ನದು ಅಥವಾ ಬೇರೆಯವರ ತಪ್ಪೋ ಗೊತ್ತಿಲ್ಲ. ನಾನು ಯಾರನ್ನೂ ದೂಷಿಸುವುದಿಲ್ಲ. ಒಟ್ಟಿನಲ್ಲಿ ಈ ಸ್ಥಾನದಲ್ಲಿ ಮುಂದುವರಿಯುವುದರಲ್ಲಿ ಅರ್ಥ ಇಲ್ಲ ಎಂಬ ಭಾವನೆ ಬರುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದ್ದರು.

ಮೂಕಪ್ರೇಕ್ಷಕನಂತೆ ಕೂರಬೇಕಾಗಿದೆ: 'ಶಾಸಕರನ್ನು ಅಮಾನತು ಮಾಡುವುದು ಒಳ್ಳೆಯ ಸಂಪ್ರದಾಯ ಅಲ್ಲ. ವಿಧಾನ ಪರಿಷತ್‌ನಲ್ಲಿ ಅಂತಹ ತೀರ್ಮಾನ ಮಾಡಿಲ್ಲ. ಸಿ.ಟಿ ರವಿ ಹಾಗೂ ಲಕ್ಷ್ಮೀ ಹೆಬ್ಬಾಳಕರ ಅವರ ಪ್ರಕರಣವನ್ನು ನನ್ನ ಅನುಭವ ಆಧರಿಸಿ ತೀರ್ಮಾನ ಮಾಡಿದ್ದೇನೆ. ವಿಧಾನ ಪರಿಷತ್ತಿನಲ್ಲಿ ಜೈಕಾರ, ಧಿಕ್ಕಾರ ಕೂಗಬಾರದು ಎಂಬ ನಿಯಮ ಇದೆ. ಇದು ಪಾಲನೆಯಾಗುತ್ತಿಲ್ಲ. ಹೀಗಾಗಿ ಮೂಕಪ್ರೇಕ್ಷಕನಂತೆ ಕೂರಬೇಕಾಗಿದೆ' ಎಂದು ಬೇಸರಿಸಿದರು.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ರಾಜೀನಾಮೆ ಪತ್ರ



ಸನ್ಮಾನ... ಪತ್ರಿಕಾ ಛಾಯಾಗ್ರಾಹಕರಿಗಾಗಿ ಕರ್ನಾಟಕ ಮಾಧ್ಯಮ ಅಕಾಡೆಮಿ ಆಯೋಜಿಸಿದ್ದ ಛಾಯಾಚಿತ್ರಗಳ ಸ್ಪರ್ಧೆಯ ವಿಜೇತರಾದ (ಎಡದಿಂದ ಬಲಕ್ಕೆ) ಬಿ.ಎಂ. ಕೇದಾರನಾಥ, ನಾಬೀರಾಜ್ ದಸ್ತೇನವರ (ಇಬ್ಬರಿಗೂ ತೀರ್ಪುಗಾರರ ಮೆಚ್ಚುಗೆ), ಸತೀಶ ಇರಾ (ಪ್ರಥಮ), ಪ್ರಕಾಶ ಕಂದಕೂರ (ದ್ವಿತೀಯ), ಭರತ್ ಕಂದಕೂರ (ತೃತೀಯ), ಸುಧೀಂದ್ರ ಕುಲಕರ್ಣಿ (ತೀರ್ಪುಗಾರರ ಮೆಚ್ಚುಗೆ) ಅವರಿಗೆ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಲ್ಲಿ ಭಾನುವಾರ ನಡೆದ 'ಫೋಕಸ್ ಆನ್ ನ್ಯೂಸ್' ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಲಾಯಿತು -ಪ್ರಜಾವಾಣಿ ಚಿತ್ರ

ಮಧುಬಲೆ: ಹೈಕಮಾಂಡ್ ಗರಂ

ಒಂದನೇ ಪುಟದಿಂದ...

'ಹೈಕಮಾಂಡ್ ಮಟ್ಟದಲ್ಲಿ ಈ ಬಗ್ಗೆ ನಡೆದ ಚರ್ಚೆ, ವ್ಯಕ್ತವಾದ ಅಭಿಪ್ರಾಯಗಳನ್ನು ಖರ್ಗೆಯವರು ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದಾರೆ. ಕರ್ನಾಟಕದಲ್ಲಿನ ಬೆಳವಣಿಗೆಗಳಿಂದ ಕಾಂಗ್ರೆಸ್ ಪಕ್ಷಕ್ಕೆ ರಾಷ್ಟ್ರ ಮಟ್ಟದಲ್ಲಿ ಹಾನಿಯಾಗುತ್ತಿದೆ ಎಂಬ ಅಸಮಾಧಾನ ವ್ಯಕ್ತವಾಗಿದೆ ಎಂಬ ಮಾಹಿತಿ ಹಂಚಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಿಷಯವು ವಿಧಾನಸಭೆಯಲ್ಲಿ ಪ್ರಸ್ತಾಪ ಆಗಿರುವುದು ಹಾಗೂ ಆ ನಂತರದಲ್ಲಿ ಪ್ರಕರಣವನ್ನು ನಿರ್ವಹಿಸುವಲ್ಲಿ ಸರ್ಕಾರದ ಹಂತದಲ್ಲಿ ಲೋಪಗಳಾಗಿವೆ ಎಂಬ ಅಸಮಾಧಾನವನ್ನು ಖರ್ಗೆ ವ್ಯಕ್ತಪಡಿಸಿದ್ದಾರೆ. ಆರಂಭಿಕ ಹಂತದಲ್ಲೇ ಮಧ್ಯಪ್ರವೇಶಿಸಿ, ಕ್ರಮ ಕೈಗೊಳ್ಳಬೇಕಿತ್ತು ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ದೂರು ಆಧರಿಸಿ ಕ್ರಮಕ್ಕೆ ಸೂಚನೆ: 'ರಾಜಣ್ಣ ಮತ್ತು ಅವರ ಮಗ ನೀಡುವ ದೂರು ಆಧರಿಸಿ ತಕ್ಷಣವೇ ತನಿಖೆಗೆ ಆದೇಶಿಸಬೇಕು. ಹನಿಟ್ರ್ಯಾಪ್‌ನಂತಹ ಗಂಭೀರ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಮೃದು ಧೋರಣೆ ತಳೆದಿದ್ದೇವೆ ಎಂಬ ಆರೋಪಕ್ಕೆ ಗುರಿಯಾಗುವುದು ಬೇಡ. ಸಮಗ್ರವಾಗಿ ತನಿಖೆ ನಡೆಸಿ. ಈ ಸಂಚಿನ ಹಿಂದೆ ಯಾರಿದ್ದಾರೆ? ಯಾವ ಉದ್ದೇಶಕ್ಕಾಗಿ ಮಾಡಿದ್ದಾರೆ ಎಂಬ ಸತ್ಯ ಹೊರಗೆ ಬರಲಿ. ಈ ವಿಷಯದಲ್ಲಿ ಯಾವ ಒತ್ತಡಕ್ಕೂ ಮಣಿಯುವುದು ಬೇಡ' ಎಂಬುದಾಗಿ ಖರ್ಗೆ ಅವರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಈ ಪ್ರಕರಣವನ್ನು ವಿರೋಧಪಕ್ಷಗಳು ಪ್ರಬಲ ಅಸ್ತ್ರವಾಗಿಸಿಕೊಂಡು ವಿಧಾನ ಸಭೆ ಕಲಾಪದ ವೇಳೆ ಸರ್ಕಾರ ಮತ್ತು ಪಕ್ಷವನ್ನು ಇಕಟ್ಟಿಗೆ ಸಿಲುಕಿಸಿದ್ದು, ಇದರಿಂದ ಸಾರ್ವಜನಿಕವಾಗಿ ಸರ್ಕಾರ ಮತ್ತು ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗಿದೆ ಎಂಬ ಅಭಿಪ್ರಾಯವೂ ಮಾತುಕತೆ ವೇಳೆ ವ್ಯಕ್ತವಾಯಿತು ಎಂದು ಮೂಲಗಳು ಹೇಳಿವೆ.

'ಹನಿಟ್ರ್ಯಾಪ್ ಮುಜುಗರದ ವಿಚಾರ'

'ಹನಿಟ್ರ್ಯಾಪ್ ಯತ್ನ ಮುಜುಗರ ತರುವ ವಿಚಾರ. ಎಲ್ಲರೂ ಇದರಲ್ಲಿ ಭಾಗಿಯಾಗಿದ್ದಾರೆ ಎಂದರೆ ನಾನೂ ಸೇರಿಕೊಂಡಂತಾಯಿತಲ್ಲಾ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಭೇಟಿಯ ನಂತರ ಹೊರಬಂದ ಅವರನ್ನು ಸುದ್ದಿಗಾರರು, 'ಹನಿಟ್ರ್ಯಾಪ್‌ಗೆ ಕೆಡವುವ ಯತ್ನದ ಆರೋಪದಿಂದ ಸರ್ಕಾರಕ್ಕೆ ಮುಜುಗರವಾಗಿದೆಯೇ' ಎಂದು ಪ್ರಶ್ನಿಸಿದರು. ಅದಕ್ಕೆ ಪ್ರಿಯಾಂಕ್, 'ಮುಜರವಾಗುತ್ತದೆ ಎಂದು ನಾನೇ ಒಪ್ಪಿಕೊಂಡಿದ್ದೇನಲ್ಲಾ. ಎಲ್ಲರನ್ನೂ ಸೇರಿಸಿ ಹೇಳಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಮತ್ತು ಎಐಸಿಸಿ ಅಧ್ಯಕ್ಷರು ಸೇರಿದಾಗ ಸಹಜವಾಗಿ ರಾಜಕೀಯದ ಬಗ್ಗೆ ಮಾತನಾಡಿರುತ್ತಾರೆ. ಏನು ಮಾತನಾಡಿದರು ಎಂಬುದನ್ನು ಅವರೇ ಹೇಳಬೇಕು' ಎಂದರು.

ನೇಮಕಾತಿ: ತಿದ್ದುಪಡಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯ ಕರ್ನಾಟಕ ಭವನದ ಗ್ರೂಪ್ 'ಎ' ವೃಂದದ 'ಸಹಾಯಕ ನಿವಾಸಿ ಆಯುಕ್ತ' ಹುದ್ದೆಯ ಮುಂಬಡ್ತಿಗೆ ಕನಿಷ್ಠ ವಿದ್ಯಾರ್ಹತೆ ನಿಗದಿ ಮಾಡಬೇಕು ಮತ್ತು ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವೀಧರರಾಗಿರಬೇಕು ಎಂಬುದನ್ನು ಸೇರಿಸಿ ಕಾಯ್ದೆಗೆ ತಿದ್ದುಪಡಿ ಮಾಡುವಂತೆ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿರುವ ಅವರು, 'ಈ ಸಂಬಂಧ ನವದೆಹಲಿ ನಿವಾಸಿ ಆಯುಕ್ತರಿಗೆ ಕಡತ ಕಳುಹಿಸಿದ್ದರೂ, ಅವರು ಯಾವುದೇ ಕ್ರಮ ತೆಗೆದುಕೊಳ್ಳದೇ ನನೆಗುದಿಯಲ್ಲಿಟ್ಟಿದ್ದಾರೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಸಂಪರ್ಕ ಅಧಿಕಾರಿ (ಎಂಪಿ ಸೆಲ್) ಹುದ್ದೆಗೆ ಸಂಬಂಧಿಸಿದಂತೆ ಕರ್ನಾಟಕ ಸಚಿವಾಲಯ ಸೇವೆಗಳು (ನೇಮಕಾತಿ) 2019ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು ಎಂದು ಕೋರಲಾದ ಕಡತವನ್ನು ಇ–ಆಫೀಸ್ ಮೂಲಕ ನಿವಾಸಿ ಆಯುಕ್ತರಿಗೆ ಹಿಂದಿರುಗಿಸಿದ ಪ್ರಸ್ತಾವನೆ ಮತ್ತು ನಿವಾಸಿ ಆಯುಕ್ತರ ಕಚೇರಿಯಲ್ಲಿ ಹಲವು ವರ್ಷಗಳಿಂದ ಖಾಲಿ ಇರುವ ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ ಎರಡು ಸಮನ್ವಯ ಅಧಿಕಾರಿ ಹುದ್ದೆಗಳನ್ನು ಸೃಜಿಸಲು ಸಲ್ಲಿಸಿರುವ ಮನವಿಗೆ ನಿವಾಸಿ ಆಯುಕ್ತರು ಶಿಫಾರಸು ಮಾಡಲು ಒಪ್ಪಿದ್ದರೂ ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ಈ ಪ್ರಸ್ತಾವನೆಗಳ ಕಡತಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡಲು ನಿವಾಸಿ ಆಯುಕ್ತರಿಗೆ ನಿರ್ದೇಶನ ನೀಡಬೇಕು' ಎಂದು ಪತ್ರದಲ್ಲಿ ಜಯಚಂದ್ರ ಆಗ್ರಹಿಸಿದ್ದಾರೆ.

ಈ ಮಧ್ಯೆ 'ಎ' ವೃಂದದ ಸಮನ್ವಯ ಅಧಿಕಾರಿ ಮುಂಬಡ್ತಿಗೆ ಯಾವುದೇ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸದೇ, ವೃಂದ ಮತ್ತು ನೇಮಕಾತಿ ಪ್ರಕ್ರಿಯೆ ಬದಿಗೊತ್ತಿ ಆದೇಶ ಹೊರಡಿಸಲು ನಿವಾಸಿ ಆಯುಕ್ತರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಶಿಫಾರಸು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ತವ್ಯದಲ್ಲಿದ್ದ ಪೊಲೀಸರಿಗೆ ಕಾರು ಡಿಕ್ಕಿ: ಚಾಲಕ ಸೆರೆ

ಪ್ರಜಾವಾಣಿ ವಾರ್ತೆ


ಮಹದೇವಸ್ವಾಮಿ

ಬೆಂಗಳೂರು: ನಾಕಾಬಂದಿ ಕರ್ತವ್ಯದಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಧರೆಪ್ಪ ಟೊಣ್ಣೆ ಅವರಿಗೆ ಡಿಕ್ಕಿ ಹೊಡೆದು ಕಾರು ಸಮೇತ ಪರಾರಿಯಾಗಿದ್ದ ಚಾಲಕನನ್ನು ಮಾಗಡಿ ರಸ್ತೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಭುವನೇಶ್ವರಿ ನಗರದ ನಿವಾಸಿ ಮಹದೇವಸ್ವಾಮಿ ಬಂಧಿತ ಆರೋಪಿ. ಮಾರ್ಚ್ 4ರಂದು ಆರೋಪಿ ಕಾರಿನಲ್ಲಿ ಡಿಕ್ಕಿ ಹೊಡೆದ ಪರಿಣಾಮ ಕರ್ತವ್ಯದಲ್ಲಿದ್ದ ಧರೆಪ್ಪ ಅವರ ಬಲಗಾಲಿಗೆ ತೀವ್ರ ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಇದೇ ಘಟನೆಯಲ್ಲಿ ಕಾನ್‌ಸ್ಟೆಬಲ್ ಯು.ಕೆ.ಕಾರ್ತಿಕ್ ಬೆನ್ನುಮೂಳೆಗೆ ಗಾಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಗಡಿ ರಸ್ತೆ ಠಾಣೆಯ ಸಿಬ್ಬಂದಿ ಧರೆಪ್ಪ, ಕಾರ್ತಿಕ್ ಮತ್ತು ಸಂಪತ್ ಗುರ್ಲಾಪುರ್ ಅವರು ತಡರಾತ್ರಿ 12.30ರಲ್ಲಿ ವೆಸ್ಟ್ ಆಫ್ ಕಾರ್ಡ್ ಸರ್ವಿಸ್ ರಸ್ತೆಯ ಪದ್ಮಾವತಿ ಕಲ್ಯಾಣಮಂಟಪದ ಬಳಿ ನಾಕಾಬಂದಿ ಮಾಡಿಕೊಂಡು ಅನುಮಾನಸ್ಪದ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದರು.

ಈ ವೇಳೆ ಸರ್ವಿಸ್ ರಸ್ತೆಯಲ್ಲಿ ಬಂದ ಕಾರು ತಪಾಸಣೆ ನಡೆಸಲು, ವಾಹನ ನಿಲ್ಲಿಸುವಂತೆ ಧರೆಪ್ಪ ಸೂಚನೆ ನೀಡಿದ್ದರು. ತಕ್ಷಣ ಕಾರು ನಿಲ್ಲಿಸದ ಚಾಲಕ, ಸ್ವಲ್ಪ ದೂರ ಹೋಗಿ ನಿಲ್ಲಿಸಿದ. ಅಲ್ಲಿಗೆ ಬೈಕ್‌ನಲ್ಲಿ ಧರೆಪ್ಪ ಮತ್ತು ಕಾರ್ತಿಕ್ ಹೋಗಿ ಕೆಳಗೆ ಇಳಿಯುವಂತೆ ಚಾಲಕನಿಗೆ ಸೂಚನೆ ನೀಡಿದ್ದರು. ಕುಡಿದ ಮತ್ತಿನಲ್ಲಿದ್ದ ಮಹದೇವಸ್ವಾಮಿ, ಬೈಕ್‌ಗೆ ಡಿಕ್ಕಿ ಹೊಡೆದು ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆಗೆ ಇಳಿದ ಪೊಲೀಸರು, ಘಟನಾ ಸ್ಥಳದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿದರು. ಕೆಂಗೇರಿ ಬಿಎಂಟಿಸಿ ಬಸ್ ಡಿಪೊ ಸಮೀಪ ಸಂಚರಿಸಿರುವುದು ಗೊತ್ತಾಯಿತು. ಕೆಂಗೇರಿ ಬಸ್ ಡಿಪೊ ಪಕ್ಕದ ಗೋದಾಮಿನಲ್ಲಿ ನಿಲ್ಲಿಸಿದ್ದ ಹೊಸ ಕಾರನ್ನು ಪೊಲೀಸರು ವಶಪಡಿಸಿಕೊಂಡು, ಆರೋಪಿಯನ್ನು ಬಂಧಿಸಿದರು.

ಒಡಿಶಾ ಪೆಡ್ಲರ್ ಸೆರೆ: 10 ಕೆ.ಜಿ. ಗಾಂಜಾ ವಶ



ಬೆಂಗಳೂರು: ನಗರದಲ್ಲಿ ಗಾಂಜಾ ಮಾರಾಟ ದಂಧೆಯಲ್ಲಿ ತೊಡಗಿದ್ದ ಒಡಿಶಾದ ವ್ಯಕ್ತಿಯನ್ನು ಮಾರತ್ತಹಳ್ಳಿ ಪೊಲೀಸರು ಬಂಧಿಸಿ, ₹4.40 ಲಕ್ಷ ಮೌಲ್ಯದ ಮಾದಕವಸ್ತು ವಶಪಡಿಸಿಕೊಂಡಿದ್ದಾರೆ.

ಒಡಿಶಾದ ಪೆಡ್ಲರ್ ದುರ್ಗಾ ಪ್ರಸಾದ್ ಎಂಬಾತನನ್ನು ಬಂಧಿಸಿ 10.1 ಕೆ.ಜಿ. ಗಾಂಜಾ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ. ಮಾರತ್ತಹಳ್ಳಿಯ ಹೋಟೆಲ್ ಸಮೀಪ ಗಾಂಜಾ ಮಾರಾಟಕ್ಕೆ ಆರೋಪಿ ಯತ್ನಿಸುತ್ತಿದ್ದ ವೇಳೆ ಖಚಿತ ಮಾಹಿತಿ ಆಧರಿಸಿ ಬಂಧಿಸಲಾಗಿದೆ. ಕೂಲಿ ಕೆಲಸ ಮಾಡುವ ಆರೋಪಿ, ಒಡಿಶಾದಲ್ಲಿ ಕಡಿಮೆ ಬೆಲೆಗೆ ಗಾಂಜಾ ತಂದು ನಗರದಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ. ಈತನ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣಗಳು ದಾಖಲಾಗಿಲ್ಲ ಎಂದು ಪೊಲೀಸರು ತಿಳಿಸಿದರು.

ಕೊಲೆ ಆರೋಪಿಗಳ ಬಂಧನಕ್ಕೆ ಐದು ವಿಶೇಷ ತಂಡ ರಚನೆ

ಉದ್ಯಮಿ ಅಂಗರಕ್ಷಕನ ವಿಚಾರಣೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಲೋಕನಾಥ್ ಸಿಂಗ್ ಕೊಲೆ ಪ್ರಕರಣದ ಸಂಬಂಧ ಅವರ ಅಂಗರಕ್ಷಕ ಸೇರಿದಂತೆ ಹಲವರನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ. ಆರೋಪಿಗಳ ಬಂಧನಕ್ಕೆ ಐದು ವಿಶೇಷ ತಂಡ ರಚಿಸಲಾಗಿದೆ.

ಬಿಜಿಎಸ್ ಲೇಔಟ್‌ನಲ್ಲಿನ ನಿರ್ಮಾಣ ಹಂತದ ಕಟ್ಟಡದ ಬಳಿ ಮಾಗಡಿ ತಾಲ್ಲೂಕಿನ ಕುದೂರು ನಿವಾಸಿ ಲೋಕನಾಥ್ ಸಿಂಗ್ ಅವರನ್ನು ಕಾರಿನಲ್ಲೇ ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದಾರೆ.

‘ರಿಯಲ್ ಎಸ್ಟೇಟ್ ವ್ಯವಹಾರ ಸಂಬಂಧ ಲೋಕನಾಥ್ ಅವರು ಹೊರಗೆ ಹೋಗುವಾಗ ಜತೆಯಲ್ಲಿ ಅಂಗರಕ್ಷಕನನ್ನು ಕರೆದುಕೊಂಡು ಹೋಗುತ್ತಿದ್ದರು. ಆದರೆ, ಶನಿವಾರ ಜತೆಯಲ್ಲಿ ಕರೆದುಕೊಂಡು ಹೋಗಿರಲಿಲ್ಲ. ಸ್ನೇಹಿತರೊಂದಿಗೆ ಕಾರಿನಲ್ಲಿ ಹೊರಗೆ ಹೋಗಿ, ಮದ್ಯ ಸೇವನೆ ವೇಳೆ ಗಲಾಟೆ ನಡೆದು ಕೊಲೆ ಮಾಡಿರುವ ಸಾಧ್ಯತೆ ಇದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಲೋಕನಾಥ್ ಅವರ ಸ್ನೇಹಿತರು ಯಾರು?, ಯಾರ ಜತೆ ವ್ಯವಹಾರ ನಡೆಸುತ್ತಿದ್ದರು? ಎಂಬ ಪ್ರಶ್ನೆಗಳನ್ನು ಅಂಗರಕ್ಷಕನಿಗೆ ಕೇಳಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ವ್ಯವಹಾರ ಸಂಬಂಧ ಹೊರಗೆ ಹೋಗುವಾಗ ಹಲವು ಬಾರಿ ಅಂಗರಕ್ಷಕನನ್ನು ಬಿಟ್ಟು ಹೋಗಿದ್ದಾರೆ. ಹಣಕಾಸಿನ ವಿಚಾರಕ್ಕೆ ಕೊಲೆ ನಡೆದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹಾಗಾಗಿ ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಕೆಲ ವರ್ಷಗಳ ಹಿಂದೆ ಮೈಸೂರು ರಸ್ತೆ ಬ್ಯಾಟರಾಯನಪುರ ಠಾಣೆಯಲ್ಲಿ ಸುಳ್ಳು ದೂರು ದಾಖಲು ಪ್ರಕರಣ ಮತ್ತು ಪೊಲೀಸ್ ಅಧಿಕಾರಿಯಿಂದಲೇ ಹಣ ದುರ್ಬಳಕೆ ಪ್ರಕರಣದಲ್ಲಿ ಲೋಕನಾಥ್ ಸಿಂಗ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಜಾಮೀನು ಪಡೆದು ಹೊರಬಂದ ಬಳಿಕ ತನ್ನ ವ್ಯವಹಾರ ಮುಂದುವರಿಸಿದ್ದರು.

ಸಂಬಂಧಿ ಯುವತಿಯನ್ನು ಮದುವೆ ಆಗುವುದಾಗಿ ಹೇಳಿಕೊಂಡಿದ್ದ ಲೋಕನಾಥ್, ಇದೇ ವಿಚಾರಕ್ಕೆ ಶನಿವಾರ ಸೋಲದೇವನಹಳ್ಳಿಗೆ ಬಂದಾಗ ಕೊಲೆ ನಡೆದಿದೆ. ಘಟನಾ ಸ್ಥಳದ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದು, ಆರೋಪಿಗಳ ಸುಳಿವು ಪತ್ತೆಯಾಗಿದೆ. ಶೀಘ್ರದಲ್ಲಿಯೇ ಬಂಧಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪ್ರತ್ಯೇಕ ಪ್ರಕರಣ: ಇಬ್ಬರ ಬಂಧನ, 5 ದ್ವಿಚಕ್ರ ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನುಮಂತನಗರ ಹಾಗೂ ಪುಟ್ಟೇನಹಳ್ಳಿ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ, ಐದು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಹನುಮಂತನಗರ ಠಾಣಾ ವ್ಯಾಪ್ತಿಯ ಶ್ರೀನಗರದ ಅಪಾರ್ಟ್‌ಮೆಂಟ್ ನಿವಾಸಿ ಸೂರಜ್ ಅವರ ದ್ವಿಚಕ್ರ ವಾಹನ ಕಳವು ಆಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಶ್ರೀನಗರದ ಶಾಮಣ್ಣ ಉದ್ಯಾನ ಬಳಿ ಆರೋಪಿ ತೌಫೀಕ್ ಪಾಷಾನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

‘ಆರೋಪಿ ನೀಡಿದ ಮಾಹಿತಿ ಆಧರಿಸಿ ಕೆಂಪೇಗೌಡ ಆಟದ ಮೈದಾನದ ಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ ₹1 ಲಕ್ಷ ಮೌಲ್ಯದ ಮೂರು ವಾಹನಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಆರೋಪಿಯ ಬಂಧನದಿಂದ ಮೂರು ಪ್ರಕರಣ ಪತ್ತೆಯಾಗಿವೆ’ ಎಂದು ಪೊಲೀಸರು ತಿಳಿಸಿದರು.


ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಿ.ಜಿ.ರಸ್ತೆ ನಿವಾಸಿ ಮೊಹಿದ್ದೀನ್ ಜಿಲಾನಿ ಅವರು ಮನೆ ಮುಂದೆ ನಿಲ್ಲಿಸಿದ್ದ ವಾಹನ ಕಳವಾಗಿತ್ತು.

ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದ ಪೊಲೀಸರು, ಬಿಎಂಟಿಸಿ ಬಸ್ ಡಿಪೊ ಬಳಿ ಆರೋಪಿ ಮಾರಿಮುತ್ತು ಎಂಬಾತನನ್ನು ಬಂಧಿಸಿ, ವಿಚಾರಣೆ ನಡೆಸಿದಾಗ ಕಳವು ಮಾಡಿರುವುದಾಗಿ ಒಪ್ಪಿಕೊಂಡ ಎಂದು ಪೊಲೀಸರು ತಿಳಿಸಿದರು.

ಆರೋಪಿಯಿಂದ ₹60 ಸಾವಿರ ಮೌಲ್ಯದ ಎರಡು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದರು.

ಮಾಲೀಕನ ಕೊಲೆ: ತಂದೆ–ಮಗ ಶರಣು


ರಮೇಶ್


ಸೈಯದ್


ಸೈಯದ್ ಆಯೂಬ್

ಪ್ರಜಾವಾಣಿ ವಾರ್ತೆ

ನೆಲಮಂಗಲ: ಹಣಕಾಸಿನ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಆರ್.ಆರ್.ಇಂಡಸ್ಟ್ರೀಸ್ ಮಾಲೀಕರನ್ನು ಕಾರ್ಮಿಕರಿಬ್ಬರು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ನಡೆದಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಕಡಬಗೆರೆ ಕ್ರಾಸ್ ಬಳಿಯ ಆರ್.ಆರ್.ಇಂಡಸ್ಟ್ರೀಸ್ ಮಾಲೀಕ ರಮೇಶ್ (52) ಕೊಲೆಯಾದ ವ್ಯಕ್ತಿ.

ಸೈಯದ್ ತಾಜುದ್ದೀನ್ ಹಾಗೂ ಅವರ ಮಗ ಸೈಯದ್ ಆಯೂಬ್ ಅವರು ಗೋದಾಮಿನ ಮೆಶ್ ಅಳವಡಿಕೆ ಕೆಲಸ ಮಾಡಿಕೊಡುವುದಾಗಿ ಮುಂಗಡವಾಗಿ ರಮೇಶ್ ಅವರಿಂದ ಹಣ ಪಡೆದುಕೊಂಡಿದ್ದರು. ಕೆಲಸಕ್ಕೆ ಬಾರದೇ ಹಣವನ್ನೂ ವಾಪಸ್ ನೀಡದೆ ಸತಾಯಿಸುತ್ತಿದ್ದರು. ಮಧ್ಯಾಹ್ನ ಇದೇ ವಿಚಾರಕ್ಕೆ ಗಲಾಟೆ ನಡೆದಾಗ, ಇಬ್ಬರೂ ಸೇರಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾರೆ. ಬಳಿಕ ಠಾಣೆಗೆ ತೆರಳಿ ಶರಣಾಗಿದ್ದಾರೆ.

ಮಾದನಾಯಕನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಬೆಂಗಳೂರು–ಹುಬ್ಬಳ್ಳಿ ನಡುವೆ ಮತ್ತೊಂದು ವಿಮಾನ ಹಾರಾಟ

ಹುಬ್ಬಳ್ಳಿ: ‘ಬೆಂಗಳೂರು–ಹುಬ್ಬಳ್ಳಿ ನಡುವೆ ಮಾರ್ಚ್ 30ರಿಂದ ಇಂಡಿಗೊ ಸಂಸ್ಥೆಯ ವಿಮಾನ ಹಾರಾಟ ಆರಂಭವಾಗಲಿದೆ. ಇದರೊಂದಿಗೆ ರಾಜಧಾನಿ ಬೆಂಗಳೂರು ಮತ್ತು ವಾಣಿಜ್ಯ ನಗರಿ ಹುಬ್ಬಳ್ಳಿಗೆ ದಿನಕ್ಕೆ ಮೂರು ವಿಮಾನಗಳು ಸಂಪರ್ಕ ಕಲ್ಪಿಸಲಿವೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

‘ಬೆಳಿಗ್ಗೆ 9.55ಕ್ಕೆ ಬೆಂಗಳೂರಿನಿಂದ ಹೊರಡುವ ವಿಮಾನ 11.20ಕ್ಕೆ ಹುಬ್ಬಳ್ಳಿ ತಲುಪಲಿದೆ. ಬೆಳಿಗ್ಗೆ 11.55ಕ್ಕೆ ಹುಬ್ಬಳ್ಳಿಯಿಂದ ಹೊರಟು ಮಧ್ಯಾಹ್ನ 1.20ಕ್ಕೆ ಮರಳಿ ಬೆಂಗಳೂರು ತಲುಪಲಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಇಂಡಿಗೊ ಸಂಸ್ಥೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ್ದರ ಫಲವಾಗಿ ಈ ನಿರ್ಣಯ ಹೊರಬಿದ್ದಿದೆ. ಇದರಿಂದ ಹುಬ್ಬಳ್ಳಿ–ಧಾರವಾಡ ಸೇರಿದಂತೆ ಸುತ್ತಲಿನ ಜಿಲ್ಲೆಗಳಿಂದ ಬೆಂಗಳೂರಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಸಾಕಷ್ಟು ಅನುಕೂಲವಾಗಲಿದೆ. ಹುಬ್ಬಳ್ಳಿ ಮತ್ತು ಅಹಮದಾಬಾದ್ ನಡುವೆಯೂ ವಿಮಾನ ಸೇವೆ ಆರಂಭಿಸಲು ವಿನಂತಿಸಲಾಗಿದೆ’ ಎಂದು ಅವರು ತಿಳಿಸಿದ್ದಾರೆ.



ಮೇಲಂಗಿ ಕಳಚದೆ ಅಯ್ಯಪ್ಪ ದೇವಳ ಪ್ರವೇಶಿಸಿದ ಗುಂಪು

ಪಟ್ಟಣಂತಿಟ್ಟ (ಪಿಟಿಐ): ಅಯ್ಯಪ್ಪ ದೇವಳವನ್ನು ಎಸ್‌ಎನ್‌ಡಿಪಿ ಸಂಯುಕ್ತ ಸಮರ ಸಮಿತಿಯ ಸದಸ್ಯರು ಭಾನುವಾರ ಮೇಲಂಗಿ ಕಳಚದೆಯೇ ಪ್ರವೇಶಿಸಿದರು.

ಮೇಲಂಗಿ ಕಳಚದೆಯೇ ದೇವಸ್ಥಾನದಲ್ಲಿ ಪ್ರಾರ್ಥಿಸಿದ ದೃಶ್ಯ ಇರುವ ವಿಡಿಯೊಗಳು ಬಹಿರಂಗವಾಗಿವೆ. ಈ ವೇಳೆ ದೇವಾಲಯದ ಆಡಳಿತ ಮಂಡಳಿಯಾಗಲಿ, ಪೊಲೀಸರಾಗಲಿ ಆಕ್ಷೇಪ ವ್ಯಕ್ತಪಡಿಸಲಿಲ್ಲ. ನಂತರದಲ್ಲಿ, ಅಂಗಿ ತೆಗೆಯಬೇಕು ಎಂಬ ಪದ್ಧತಿಯನ್ನು ಕೈಬಿಡಬೇಕು ಎಂದು ಈ ಪ್ರತಿಭಟನಕಾರರು ಆಗ್ರಹಿಸಿದರು.

‘ಪ್ರತಿಭಟನೆ ಶಾಂತಿಯುತವಾಗಿತ್ತು. ಅಂಗಿ ತೆಗೆಯದೆ ದೇವಸ್ಥಾನ ಪ್ರವೇಶಿಸಿದರೆ ತನ್ನ ಆಕ್ಷೇಪ ಇಲ್ಲ ಎಂದು ಆಡಳಿತ ಮಂಡಳಿ ಈಗಾಗಲೇ ಸ್ಪಷ್ಟಪಡಿಸಿದೆ. ಆದರೆ ಭಕ್ತರು ಅಂಗಿ ತೆಗೆಯುವ ಪದ್ಧತಿಯನ್ನು ಪಾಲಿಸುತ್ತಿದ್ದಾರೆ’ ಎಂದು ಪೊಲೀಸರೊಬ್ಬರು ತಿಳಿಸಿದರು.

‘ಪುಸ್ತಕದ ಅರಿವು ಗೂಗಲ್‌ನಿಂದ ದೊರೆಯದು’

ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅಭಿಮತ • ಸಾಹಿತ್ಯ ಯುಗಾದಿ ಸಮಾರಂಭದಲ್ಲಿ 10 ಕೃತಿಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೂಗಲ್‌ನಲ್ಲಿ ಎಲ್ಲದರ ಬಗ್ಗೆಯೂ ಮಾಹಿತಿ ಸಿಗುತ್ತದೆ. ಆದರೆ, ಪುಸ್ತಕದಲ್ಲಿ ಸಿಗುವ ರೀತಿಯ ಪರಿಪೂರ್ಣ ಮಾಹಿತಿ, ಅನುಭವ ಹಾಗೂ ಅರಿವು ಗೂಗಲ್‌ನಿಂದ ದೊರೆಯದು’ ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಹೇಳಿದರು.

ವೀರಲೋಕ ಪ್ರಕಾಶನವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಸಾಹಿತ್ಯ ಯುಗಾದಿ-2025’ ಸಮಾರಂಭದಲ್ಲಿ ವಿವಿಧ ಲೇಖಕರ 10 ಕೃತಿಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

‘ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಅಂಗೈಯಲ್ಲಿ ಪುಸ್ತಕ ಹಿಡಿದು ಓದುವುದರಿಂದ ಸಿಗುವ ಅನುಭವ ಬೇರಾವುದರಿಂದಲೂ ದೊರೆಯದು. ಪುಸ್ತಕ ಓದು ಪ್ರತಿಯೊಬ್ಬರ ಜೀವನದಲ್ಲೂ ವಿಶೇಷ ಹಾಗೂ ಬಹುಮುಖ್ಯ ಪಾತ್ರ ವಹಿಸುತ್ತದೆ. ಹಾಗಾಗಿ, ವಿದ್ಯಾರ್ಥಿಗಳು ತಂತ್ರಜ್ಞಾನದ ಮೂಲಕ ಓದುವ ಬದಲು ಕೈಯಲ್ಲಿ ಪುಸ್ತಕ ಹಿಡಿದು ಓದುವುದನ್ನು ರೂಢಿಸಿಕೊಳ್ಳಬೇಕು. ತಮ್ಮ ಜ್ಞಾನ ವಿಸ್ತರಣೆಗೆ ಹೆಚ್ಚು ಪುಸ್ತಕಗಳನ್ನು ಓದಬೇಕು’ ಎಂದು ಕಿವಿಮಾತು ಹೇಳಿದರು.

ಸಾಹಿತಿ ಬಸವರಾಜ ಸಬರದ, ‘ಪುಸ್ತಕೋದ್ಯಮದ ಬೆಳವಣಿಗೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯು ಪೂರಕವಾಗಿತ್ತು. ಆದರೆ, ಈ ಯೋಜನೆಯಡಿ 2021ರ ಪುಸ್ತಕಗಳ ಖರೀದಿ ಪ್ರಕ್ರಿಯೆಯೇ ನಡೆದಿಲ್ಲ. ಯೋಜನೆಯಡಿ 2020ರಲ್ಲಿ ಖರೀದಿಸಿರುವ ಪುಸ್ತಕಗಳಿಗೆ ಇನ್ನೂ ಹಣ ಪಾವತಿಯಾಗಿಲ್ಲ. ಪುಸ್ತಕಗಳ ಕುರಿತ ಸರ್ಕಾರದ ಈ ನಿಲುವು ಖಂಡನೀಯ. ಪ್ರಕಾಶಕರ ಉಳಿವಿಗೆ ಆಧಾರವಾಗಿದ್ದ ಏಕಗವಾಕ್ಷಿ ಯೋಜನೆಯನ್ನು ಸರ್ಕಾರ ಪುನಃ ಪ್ರಾರಂಭಿಸಬೇಕು’ ಎಂದು ಆಗ್ರಹಿಸಿದರು.

ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ, ‘ಪುಸ್ತಕ ಬಿಡುಗಡೆ ಕಾರ್ಯಕ್ರಮಗಳೆಂದರೆ ಹೆಚ್ಚಿನ ಜನರು ಸೇರುವುದಿಲ್ಲ ಎಂಬ ಭಾವನೆಯಿದೆ. ಸಾವಿರಾರು ಜನರನ್ನು ಸೇರಿಸುವ ಜತೆಗೆ ನವ ಓದುಗರನ್ನು ಒಳಗೊಂಡು ಪುಸ್ತಕಗಳ ಬಿಡುಗಡೆ ಮಾಡಬೇಕೆಂಬ ನಮ್ಮ ಕನಸು ಈ ಸಮಾರಂಭದ ಮೂಲಕ ಈಡೇರಿದೆ’ ಎಂದರು.

ಅಜಿತ್ ಕಾರಂತ್, ರಾಧಾಕೃಷ್ಣ ಕಲ್ಚಾರ್ ಅವರ ತಂಡವು ತಾಳಮದ್ದಲೆ ಮೂಲಕ ಪುಸ್ತಕ ಪರಿಚಯ ಮಾಡಿತು. ಸಾಹಿತಿ ಬೈರಮಂಗಲ ರಾಮೇಗೌಡ, ಕಾದಂಬರಿಗಾರ್ತಿ ಸಹನಾ ವಿಜಯಕುಮಾರ್ ಉಪಸ್ಥಿತರಿದ್ದರು.


ಸಮಾರಂಭದಲ್ಲಿ ಗಿರೀಶ್ ಕಾಸರವಳ್ಳಿ ಮತ್ತು ಬೈರಮಂಗಲ ರಾಮೇಗೌಡ ಸಮಾಲೋಚನೆ ನಡೆಸಿದರು. ಸಹನಾ ವಿಜಯಕುಮಾರ್, ಬಸವರಾಜ ಸಬರದ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಬಿಡುಗಡೆಯಾದ ಪುಸ್ತಕಗಳು

ಸಮಾರಂಭದಲ್ಲಿ ಎಸ್.ದಿವಾಕರ್ ಅವರ ‘ವಾಸ್ತವ ಪ್ರತಿವಾಸ್ತವ’, ಎಂ.ವೆಂಕಟಸ್ವಾಮಿ ಅವರ ‘ಟೈಟಾನಿಕ್’, ಜಯಶ್ರೀ ಕಾಸರವಳ್ಳಿ ಅವರ ‘ಹೀಗೊಂದು ಏರೋಸ್ಪೇಸ್ ಪುರಾಣ’, ನಟರಾಜ ಅರಳಸುರಳಿ ಅವರ ‘ಆಕಾಶಬುಟ್ಟಿ’, ಎಂ. ರಾಜಶೇಖರ ಅವರ ‘ಶತಮಾನಂಭವತಿ’, ಅರ್ಜುನ್ ದೇವಾಲದಕೆರೆ ಅವರ ‘ಮಿಕ್ಸ್ ಆ್ಯಂಡ್ ಮ್ಯಾಚ್’, ಚೇತನ್ ನಾಡಿಗೇರ್ ಅವರ ‘ಚಂದನವನದೊಳ್’, ನಡಹಳ್ಳಿ ವಸಂತ್ ಅವರ ‘ಮಹಿಳೆಯರಿಗೆ ಮಾತ್ರವಲ್ಲ!’, ಪ್ರಸಾದ್ ನಾಯ್ಕ ಅವರ ‘ಮುಸ್ಸಂಜೆ ಮಾತು’, ಆರ್.ಕೆ. ಪ್ರಸಾದ್ ಶೆಣೈ ಅವರ ‘ನೇರಳೆ ಐಸ್‌ಕ್ರೀಂ’ ಪುಸ್ತಕಗಳ ಬಿಡುಗಡೆಯಾಯಿತು.

ಮರ ಬಿದ್ದು ಮೃತಪಟ್ಟಿದ್ದ ರಕ್ಷಾ ತಂದೆಗೆ ಬೆನ್ನು ಮೂಳೆ ಮುರಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿ ನಗರದ ಜೀವನಹಳ್ಳಿಯ ಪೂರ್ವ ಪಾರ್ಕ್ ಸಮೀಪ ಬೈಕ್ ಮೇಲೆ ಮರ ಬಿದ್ದು ತೀವ್ರವಾಗಿ ಗಾಯಗೊಂಡಿರುವ ಸತ್ಯ ಅವರನ್ನು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪುಲಕೇಶಿ ನಗರದ ಸತ್ಯ ಅವರು ತಮ್ಮ ಮಗಳು ರಕ್ಷಾ (3) ಜತೆ ಬೈಕ್‌ನಲ್ಲಿ ಹೋಗುತ್ತಿದ್ದರು. ಜೀವನಹಳ್ಳಿ ಬಳಿ ರಸ್ತೆ ದಾಟುವಾಗ ಮರ ಬುಡಸಮೇತ ಬೈಕ್ ಮೇಲೆ ಉರುಳಿದ ಪರಿಣಾಮ ಮಗಳು ಮೃತಪಟ್ಟಳು. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಸತ್ಯ ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ರಕ್ಷಾಳ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು. ಮಗಳನ್ನು ಕಳೆದುಕೊಂಡ ತಾಯಿ ಮತ್ತು ಸಂಬಂಧಿಕರು ಗೋಳಾಡುತ್ತಿದ್ದರು.

ಆಸ್ಪತ್ರೆಗೆ ಬಿಬಿಎಂಪಿ ಪೂರ್ವ ವಲಯದ ಜಂಟಿ ಆಯುಕ್ತೆ ಸರೋಜಾದೇವಿ, ಬಿಬಿಎಂಪಿ ಅರಣ್ಯ ಘಟಕದ ಮುಖ್ಯಸ್ಥ ಸ್ವಾಮಿ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಪುಲಕೇಶಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮರ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ರಕ್ಷಾಳನ್ನು ಉಳಿಸಲು ವೈದ್ಯರು ಪ್ರಯತ್ನಪಟ್ಟರೂ ಆಗಲಿಲ್ಲ. ರಕ್ಷಾ ತಂದೆಗೂ ಬೆನ್ನುಮೂಳೆ ಮುರಿದಿದ್ದು, ತೀವ್ರ ನಿಗಾ ಘಟಕದಲ್ಲಿದ್ದಾರೆ. ಮಳೆ ಬಂದಾಗ ಈ ರೀತಿಯ ಘಟನೆಗಳು ನಡೆಯುತ್ತಿರುತ್ತವೆ. ಬಿಬಿಎಂಪಿ ಸಿಬ್ಬಂದಿ ಎಚ್ಚೆತ್ತುಕೊಂಡು, ಬೀಳುವ ಹಂತದಲ್ಲಿರುವ ಮತ್ತು ಒಣಗಿದ ಮರಗಳನ್ನು ಗುರುತಿಸಿ, ತೆರವು ಮಾಡಬೇಕು. ಇಂತಹ ಘಟನೆಗಳು ಮರು ಕಳಿಸದಂತೆ ಎಚ್ಚರ ವಹಿಸಬೇಕು’ ಎಂದು ರಕ್ಷಾಳ ಮಾವ ವಿಜಯ್ ಹೇಳಿದರು.

> **ಮೃತಪಟ್ಟ ಮಗುವಿನ ಕುಟುಂಬಕ್ಕೆ ಪರಿಹಾರ ಹಾಗೂ ತೀವ್ರವಾಗಿ ಗಾಯಗೊಂಡಿರುವ ಮಗುವಿನ ತಂದೆಯ ಚಿಕಿತ್ಸಾ ವೆಚ್ಚ ಭರಿಸಲಾಗುವುದು**
> **ಬಿ.ಎಲ್.ಜಿ ಸ್ವಾಮಿ,** ಬಿಬಿಎಂಪಿ ಅರಣ್ಯ ವಿಭಾಗದ ಡಿಸಿಎಫ್

ಯಶ್ ನೋಡಲು ಮುಗಿಬಿದ್ದ ಅಭಿಮಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೋಗರಾಜ್ ಭಟ್ ನಿರ್ದೇಶನದ ‘ಮನದ ಕಡಲು’ ಸಿನಿಮಾದ ಟ್ರೇಲರ್ ಬಿಡುಗಡೆ ಸಮಾರಂಭವು ನಗರದ ಲುಲು ಮಾಲ್‌ನಲ್ಲಿ ಭಾನುವಾರ ನಡೆಯಿತು. ಟ್ರೇಲರ್ ಅನ್ನು ನಟ ಯಶ್ ಬಿಡುಗಡೆ ಮಾಡಿದರು. ಈ ವೇಳೆ ಯಶ್ ಅಭಿಮಾನಿಗಳು ತಮ್ಮ ನೆಚ್ಚಿನ ನಟನನ್ನು ನೋಡಲು ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು.

ಭದ್ರತಾ ಸಿಬ್ಬಂದಿ ಇದ್ದರೂ ಅಭಿಮಾನಿಗಳು ಯಶ್ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ವೇದಿಕೆಯತ್ತ ದೌಡಾಯಿಸಿದರು. ವೇದಿಕೆಯತ್ತ ನುಗ್ಗಿದ ಕೆಲವರತ್ತ ಪೊಲೀಸರು ಲಾಟಿ ಬೀಸಿದರು. ಸಾವಿರಾರು ಜನರು ಬಂದಿದ್ದರಿಂದ ಕೆಲ ಹೊತ್ತು ಲುಲು ಮಾಲ್‌ನ ಸುತ್ತಲೂ ಸಂಚಾರ ದಟ್ಟಣೆಯಾಗಿತ್ತು. ಅಭಿಮಾನಿಗಳು ‘ರಾಕಿಬಾಯ್’ ಎಂದು ಕೂಗಿದರು. ಜೊತೆಗೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸಮಾರಂಭದಲ್ಲಿ ಮಾತನಾಡಿದ ಯಶ್, ‘ಕಳೆದ ನಾಲ್ಕು ವರ್ಷಗಳಿಂದ ಚಿತ್ರರಂಗದ ಯಾವುದೇ ಕಾರ್ಯಕ್ರಮಗಳಿಗೆ ಹೋಗಿಲ್ಲ. ನನ್ನ ಮೊದಲ ಸಿನಿಮಾ ‘ಮೊಗ್ಗಿನ ಮನಸು’ ನಿರ್ಮಿಸಿದ್ದ ನಿರ್ಮಾಪಕ ಇ.ಕೃಷ್ಣಪ್ಪ ಅವರ ಪ್ರೀತಿಗಾಗಿ ಇಲ್ಲಿಗೆ ಬಂದಿರುವೆ. ಯಾರೇ ಬಂದು ಪ್ರಚಾರ ಮಾಡಿದರೂ ಚಿತ್ರ ಚೆನ್ನಾಗಿದ್ದರೆ ಮಾತ್ರ ಜನ ಒಪ್ಪಿಕೊಳ್ಳುತ್ತಾರೆ. ಕನ್ನಡದ ಪ್ರೇಕ್ಷಕರು ಒಳ್ಳೆ ಸಿನಿಮಾಗಳನ್ನು ನೋಡುತ್ತಾರೆ. ಆದರೆ ಇಲ್ಲಿನ ನಿರ್ದೇಶಕರು ಮತ್ತು ನಟರು ಅಪ್‌ಗ್ರೇಡ್ ಆಗಬೇಕಿದೆ’ ಎಂದರು.

‘ಕನ್ನಡ ಚಿತ್ರರಂಗವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಕನಸಿದೆ. ಈ ಹಿಂದೆ ನನ್ನನ್ನು ಅನೇಕ ಜನ ಬೆಳೆಸಿದ್ದರಿಂದ ನಾನು ಇವತ್ತು ಈ ಸ್ಥಾನದಲ್ಲಿದ್ದೇನೆ. ನಾನು ಏನೂ ಅಲ್ಲದಿರುವಾಗ ನನಗೆ ಸಹಾಯ ಮಾಡಿದ ಯಾರನ್ನೂ ನಾನು ಈತನಕ ಮರೆತಿಲ್ಲ’ ಎಂದು ಯಶ್ ತಿಳಿಸಿದರು.

‘ಮನದ ಕಡಲು’ ಚಿತ್ರಕ್ಕೆ ಇ.ಕೃಷ್ಣಪ್ಪ ಬಂಡವಾಳ ಹೂಡಿದ್ದಾರೆ. ಚಿತ್ರದ ನಾಯಕ ಸುಮುಖ್, ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಸೇರಿದಂತೆ ಇಡೀ ಚಿತ್ರತಂಡ ಸಮಾರಂಭದಲ್ಲಿ ಹಾಜರಿತ್ತು.


‘ಮನದ ಕಡಲು’ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ನಟ ಯಶ್, ನಿರ್ಮಾಪಕ ಇ.ಕೃಷ್ಣಪ್ಪ ಇದ್ದರು

ತೇರಿನಡಿ ಸಿಲುಕಿ ಉಸಿರು ಚೆಲ್ಲಿದ ‘ಗೊಂಬೆ ಹುಡುಗಿ’

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಗೆ ಶನಿವಾರ ಅಮ್ಮನೊಂದಿಗೆ ಗೊಂಬೆ ಮಾರಲು ಬಂದಿದ್ದ ಬಾಲಕಿ ಉರುಳಿ ಬಿದ್ದ ತೇರಿನ ಅಡಿ ಸಿಲುಕಿ ಮೃತಪಟ್ಟಿದ್ದಾಳೆ.

ಕೆಂಗೇರಿ ಸರ್ಕಾರಿ ಶಾಲೆಯ ಆರನೇ ತರಗತಿ ವಿದ್ಯಾರ್ಥಿನಿ ಜ್ಯೋತಿ (12) ಮೃತ ಬಾಲಕಿ.ಇದರೊಂದಿಗೆ ತೇರಿನಡಿ ಸಿಲುಕಿ ಮೃತಪಟ್ಟವರ ಸಂಖ್ಯೆ ಎರಡಕ್ಕೆ ಏರಿಕೆ ಆಗಿದೆ.

ತಾಯಿ ಗಂಗಮ್ಮನೊಂದಿಗೆ ಜ್ಯೋತಿ ಗೊಂಬೆ ಮಾರಾಟಕ್ಕೆ ಬಂದಿದ್ದಳು. ಶನಿವಾರ ಗಾಳಿ ಸಮೇತ ಮಳೆ ಶುರುವಾದಾಗ ಗಂಗಮ್ಮ ಗೊಂಬೆಗಳನ್ನು ಮತ್ತೊಂದು ಮಳಿಗೆಗೆ ಸ್ಥಳಾಂತರಿಸಲು ತೆರಳಿದ್ದರು. ಮಳಿಗೆಯಲ್ಲಿದ್ದ ಜ್ಯೋತಿ ಮೇಲೆ ತೇರು ಉರುಳಿ ಬಿದ್ದಿದೆ. ಗಂಭೀರವಾಗಿ ಗಾಯಗೊಂಡಿದ್ದ ಜ್ಯೋತಿಯನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಶನಿವಾರ ರಾತ್ರಿ ಸುರಿದಿದ್ದ ಮಳೆ • ಮುರಿದು ಬಿದ್ದಿದ್ದ ರೆಂಬೆ, ಕೊಂಬೆಗಳು

ನಗರದ ಹಲವೆಡೆ ಮರಗಳ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಶನಿವಾರ ರಾತ್ರಿ ಭಾರಿ ಮಳೆ ಸುರಿದಿತ್ತು. ಭಾನುವಾರ ಮೋಡದ ವಾತಾವರಣ ಕಂಡು ಬಂದರೂ ಮಳೆ ಬಿದ್ದಿಲ್ಲ. ಗಾಳಿಮಳೆಗೆ ರಾತ್ರಿ ಬಿದ್ದ ಮರಗಳನ್ನು ಬಿಬಿಎಂಪಿ, ಅರಣ್ಯ ಇಲಾಖೆ ನೌಕರರು ತೆರವು ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಯಲಹಂಕ ತಾಲ್ಲೂಕು ವ್ಯಾಪ್ತಿಯ ಯಲಹಂಕ ನಗರ, ಬ್ಯಾಟರಾಯನಪುರ, ಜಾಲಾ ಹೋಬಳಿಯಲ್ಲಿ ಶನಿವಾರ ಸಂಜೆ ಆಲಿಕಲ್ಲು ಸಹಿತ ಮಳೆಯಾಗಿತ್ತು. ಯಲಹಂಕ ಪೊಲೀಸ್ ಠಾಣೆ ಸಮೀಪದ ರೈಲ್ವೆ ಕೆಳಸೇತುವೆಯಲ್ಲಿ ನೀರುನಿಂತ ಪರಿಣಾಮ, ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಕೋರಮಂಗಲ 60 ಅಡಿ ರಸ್ತೆಯಲ್ಲಿ ಸೌಭಾಗ್ಯ ಮಾರ್ಕೆಟ್ ಬಳಿ ಮರ ಬಿದ್ದಿದ್ದರಿಂದ ಭಾನುವಾರವೂ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ಜೆ.ಸಿ. ರಸ್ತೆಯಲ್ಲಿ ಮರ ಬಿದ್ದ ಕಾರಣ ಭಾನುವಾರ ಬೆಳಿಗ್ಗೆ ಪುರಭವನ ಮತ್ತು ಕೆ.ಆರ್. ಮಾರುಕಟ್ಟೆ ಕಡೆಗೆ ಮಿನರ್ವ ವೃತ್ತ, ಬಸಪ್ಪ ವೃತ್ತದ ಮೂಲಕ ವಾಹನಗಳು ಸಂಚರಿಸಬೇಕಾಯಿತು. ಭಾರತ್ ಜಂಕ್ಷನ್‌ನಿಂದ ಊರ್ವಶಿ ಥಿಯೇಟರ್ ಜಂಕ್ಷನ್ ಮೂಲಕ ವಾಹನಗಳು ಸಾಗಿದವು. ಬಳಿಕ ಮರಗಳನ್ನು ತೆರವುಗೊಳಿಸಲಾಯಿತು. ಕೆಲವು ಕಡೆಗಳಲ್ಲಿ ಮುರಿದು ಬಿದ್ದ ಮರಗಳನ್ನು ಶನಿವಾರ ರಾತ್ರಿಯೇ ತೆರವುಗೊಳಿಸಲಾಯಿತು. ಇನ್ನೂ ಹಲವು ಕಡೆಗಳಲ್ಲಿ ಮರ, ರೆಂಬೆ–ಕೊಂಬೆಗಳನ್ನು ತೆರವು ಮಾಡಲಾಗುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಮರಗಳ ತೆರವು ಎಲ್ಲೆಲ್ಲಿ ?

ವಲಯ	ಬಿದ್ದ ಮರಗಳು	ತೆರವು ಮಾಡಿರುವುದು	ಬಾಕಿ	ಮುರಿದ ರೆಂಬೆ	ತೆರವು	ಬಾಕಿ
ಯಲಹಂಕ	24	14	10	62	42	20
ಪೂರ್ವ	6	5	1	38	34	4
ದಕ್ಷಿಣ	13	10	3	28	20	8
ಪಶ್ಚಿಮ	1	1	0	5	5	0
ಆರ್‌ಆರ್ ನಗರ	2	0	2	2	0	2
ಮಹದೇವಪುರ	1	1	0	3	3	0
ಬೊಮ್ಮನಹಳ್ಳಿ	8	5	3	22	16	6
ಒಟ್ಟು	55	36	19	160	122	38

ಮುಖ್ಯಾಂಶಗಳು

- ಅರಣ್ಯ ಇಲಾಖೆಯಿಂದ ತೆರವು ಕಾರ್ಯಾಚರಣೆ
- ಬದಲಾಗಿದ್ದ ಸಂಚಾರ ಮಾರ್ಗ

ಪ್ರಧಾನಿ ನರೇಂದ್ರ ಮೋದಿಯೇ ಹನಿಟ್ರ್ಯಾಪ್‌ನ ಪಿತಾಮಹ ಹೇಳಿಕೆ: 'ಎಕ್ಸ್'ನಲ್ಲಿ ವಾಕ್ಸಮರ

ವಿಜಯೇಂದ್ರ–ಹರಿಪ್ರಸಾದ್ ಜಟಾಪಟಿ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿಯೇ ಹನಿಟ್ರ್ಯಾಪ್‌ನ ಪಿತಾಮಹ' ಎಂಬ ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೇಳಿಕೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. 'ರಾಜ್ಯ ರಾಜಕಾರಣದಲ್ಲಿ ಯಾವ ಪ್ರಾಮುಖ್ಯವೂ ಇಲ್ಲದ ನಾಯಕ' ಎಂದು ಹರಿಪ್ರಸಾದ್ ಅವರನ್ನು ಜರೆದಿದ್ದಾರೆ. ಇಬ್ಬರೂ ನಾಯಕರು 'ಎಕ್ಸ್'ನಲ್ಲಿ ಪರಸ್ಪರ ವಿರುದ್ಧ ಕಟು ವಾಕ್ಸಮರ ನಡೆಸಿದ್ದಾರೆ.


'ಎಳಸು ರಾಜಕಾರಣಿ'

ಕಲೆಕ್ಷನ್ ಅನ್ನೇ ಅರ್ಹತೆ, ಡಿನೋಟಿಫಿಕೇಷನ್ ಅನ್ನೇ ಉದ್ಯೋಗ, ಹೊಂದಾಣಿಕೆ ರಾಜಕೀಯವನ್ನೇ ಧ್ಯೇಯ ಮಾಡಿಕೊಂಡಿರುವ ವಿಜಯೇಂದ್ರ ನಿಮ್ಮ ಪಕ್ಷದವರ ಘನಘೋರ ಆರೋಪಗಳಿಗೆ ಮೊದಲು ಉತ್ತರಿಸಿ. ಅದನ್ನು ಬಿಟ್ಟು, ಅಲ್ಲಾಡುತ್ತಿರುವ ಪೇಮೆಂಟ್ ಸೀಟನ್ನು ಭದ್ರ ಮಾಡಿಕೊಳ್ಳುವ ಉದ್ದೇಶದಿಂದ ಮೋದಿ ವಿರುದ್ಧದ ನನ್ನ ಹೇಳಿಕೆಗೆ ಮೈಪರಚಿಕೊಳ್ಳುತ್ತಿದ್ದೀರಿ.

ನನ್ನ ರಾಜಕೀಯ ಜೀವನದ ಅನುಭವದಷ್ಟೂ ವಯಸ್ಸಾಗಿರದ ವಿಜಯೇಂದ್ರ ಎಳಸು ರಾಜಕಾರಣಿ ಎಂಬುದನ್ನು ಬಿಜೆಪಿ ನಾಯಕರೇ ಹಾದಿಬೀದಿಯಲ್ಲಿ ಹೇಳುತ್ತಿದ್ದಾರೆ. ನಿಮ್ಮ ಅಧಿಕಾರದ ದಾಹಕ್ಕಾಗಿ ಶಾಸಕರನ್ನು ಖರೀದಿ ಮಾಡಿದ ಕಾರಣಕ್ಕಾಗಿ 'ಬಾಂಬೆ ಬಾಯ್ಸ್'ಗಳು ತಮ್ಮ ವಿರುದ್ಧ ಯಾವುದೇ ಮಾನಹಾನಿ ಪ್ರಸಾರ ಮಾಡಬಾರದೆಂದು ಕೋರ್ಟ್ ಮೂಲಕ ನಿರ್ಬಂಧ ತಂದಿರುವುದು ಯಾವ ಪುರುಷಾರ್ಥಕ್ಕಾಗಿ? ಆ ಹನಿಟ್ರ್ಯಾಪ್‌ನ ಕಿಂಗ್‌ಪಿನ್ ನೀವೇ ಎಂದು ಯತ್ನಾಳ್ ಹೇಳಿರುವ ಮಾತಿಗೆ ಉತ್ತರ ಕೊಡುವ ಧೈರ್ಯ ಇದೆಯಾ?

ನಿಮ್ಮ ಸವಾಲನ್ನು ಸ್ವೀಕರಿಸುತ್ತೇನೆ. ಎಲ್ಲಾ ಪಕ್ಷದ ಹನಿಟ್ರ್ಯಾಪ್‌ಗಳ ಬಗ್ಗೆ ಮಾತಾಡುವ ಎದೆಗಾರಿಕೆ, ಧೈರ್ಯ, ಸಾಮಾಜಿಕ ಬದ್ಧತೆ ಎಲ್ಲವನ್ನು ಉಳಿಸಿಕೊಂಡೇ ಬಹಿರಂಗವಾಗಿ ಮಾತಾಡುತ್ತೇನೆ. ಆದರೆ ನಾನು ಕೇಳುವ ಒಂದೇ ಒಂದು ಪೋಕ್ಸೊ ಪ್ರಕರಣದ ಬಗ್ಗೆ ಬಹಿರಂಗವಾಗಿ ಸತ್ಯ ಹೇಳುವ, ಧೈರ್ಯ ಕಿಂಚಿತ್ತಾದರೂ ನಿಮ್ಮ ಎದೆಯಲ್ಲಿ ಇದ್ದರೇ ಬನ್ನಿ ಬಹಿರಂಗ ಸವಾಲಿಗೆ.

ಬಿ.ಕೆ.ಹರಿಪ್ರಸಾದ್, ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯ




'ಪ್ರಾಮುಖ್ಯತೆ ಇಲ್ಲದ ನಾಯಕ'

ಅತಿರೇಕದ, ಅವಿವೇಕದ, ಕೊಳಕು ಹೇಳಿಕೆಗಳನ್ನು ನೀಡುವ ಹರಿಪ್ರಸಾದ್ ಅವರೇ, ಕಾಂಗ್ರೆಸ್ ಆಳ್ವಿಕೆಯ ಕೊಳಕುಗಳನ್ನು ಸ್ವಚ್ಛ ಮಾಡಿದ್ದು ಪ್ರಧಾನಿ ನರೇಂದ್ರ ಮೋದಿ. ಅದನ್ನು ಸಹಿಸಲು ನಿಮಗೆ ಆಗುತ್ತಿಲ್ಲ. ನಿಮ್ಮ ಪಕ್ಷದ ತಟ್ಟೆಯಲ್ಲಿ ಹಗರಣಗಳ ಹೆಗ್ಗಣ ಸತ್ತು ಬಿದ್ದಿದೆ. ಹನಿಟ್ರ್ಯಾಪ್ ಸೇಡಿನ ರಾಜಕಾರಣದ ದಳ್ಳುರಿ ಕಾಂಗ್ರೆಸ್ ಮನೆಯನ್ನು ಸುಡುತ್ತಿದೆ. ಇಷ್ಟಾದರೂ ಪಾಠ ಕಲಿಯದ ನೀವು, ಪರಿಶುದ್ಧ ಸರೋವರಕ್ಕೆ ಕಲ್ಲು ಎಸೆಯುತ್ತಿದ್ದೀರಿ.

ಹನಿಟ್ರ್ಯಾಪ್ ಕುರಿತ ನಿಮ್ಮ ಹೇಳಿಕೆ ನಿಮ್ಮ ಮಲಿನ ಮನಸ್ಥಿತಿ, ಹರಕು ನಾಲಿಗೆಯ ವ್ಯಕ್ತಿತ್ವವನ್ನು ಪರಿಚಯಿಸಿದೆ. ರಾಜ್ಯ ರಾಜಕಾರಣದಲ್ಲಿ ಪ್ರಾಮುಖ್ಯತೆಯಿಲ್ಲದ ರಾಜಕಾರಣಿ ನೀವು ಎಂಬುದು ಜನರಿಗೆ ಗೊತ್ತಿದೆ. ನೀವೊಬ್ಬ ವಿಧಾನ ಪರಿಷತ್ ಸದಸ್ಯರು ಎಂಬ ಸ್ಥಾನ ಮತ್ತು ಗೌರವ ಮಾತ್ರ ನಿಮಗಿದೆಯೇ ಹೊರತು ಸಾಮಾಜಿಕವಾಗಿ, ರಾಜಕೀಯವಾಗಿ ಯಾವ ಕ್ಷೇತ್ರದಲ್ಲೂ ಗೌರವದ ಸ್ಥಾನ ಉಳಿಸಿಕೊಂಡಿಲ್ಲ.

ಹಿರಿಯ ರಾಜಕಾರಣಿಯಾಗಿ ನಿಮಗೆ ಸಾಮಾಜಿಕ ಬದ್ಧತೆ ಇದ್ದರೆ, ರಾಜಕೀಯ ಬದ್ಧತೆ ಇದ್ದರೆ, ನೀವೊಬ್ಬ ನೈಜ ಕಾಂಗ್ರೆಸಿಗರೇ ಆಗಿದ್ದರೆ ಮೊದಲು ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಭ್ರಷ್ಟ ಹಗರಣಗಳ ಹಾಗೂ ಹನಿಟ್ರ್ಯಾಪ್ ಪ್ರಕರಣದ ವಿರುದ್ಧ ಸೂಕ್ತ ತನಿಖೆಗೆ ಒತ್ತಾಯಿಸಿ ನಿಮ್ಮ ನೈತಿಕತೆ ಉಳಿಸಿಕೊಳ್ಳಿ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



ಸಂಕ್ಷಿಪ್ತ ಸುದ್ದಿ

ಅಮೆರಿಕ: ವಿಶ್ವ ಒಕ್ಕಲಿಗರ ಸಮ್ಮೇಳನ ಜುಲೈ 3ರಿಂದ

ಬೆಂಗಳೂರು: ಅಮೆರಿಕ ಒಕ್ಕಲಿಗರ ಪರಿಷತ್ತಿನ ವತಿಯಿಂದ ಜುಲೈ 3ರಿಂದ 5ರವರೆಗೆ ಅಮೆರಿಕದ ಸ್ಯಾನ್ ಜೋಸ್ ನಗರದಲ್ಲಿ ವಿಶ್ವ ಒಕ್ಕಲಿಗರ ಸಮ್ಮೇಳನ ಆಯೋಜಿಸಲಾಗಿದೆ.

'ಸಮ್ಮೇಳನದಲ್ಲಿ ಜಗತ್ತಿನಾದ್ಯಂತ ನೆಲೆಸಿರುವ ಒಕ್ಕಲಿಗ ಸಮುದಾಯವನ್ನು ಒಂದುಗೂಡಿಸಿ, ನಮ್ಮ ಸಂಸ್ಕೃತಿ ಪರಂಪರೆಯನ್ನು ಸಾರುವ, ಉದ್ಯಮ ಅವಕಾಶಗಳ ವಿಸ್ತರಿಸುವ ಉದ್ದೇಶವಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ 200ಕ್ಕೂ ಹೆಚ್ಚು ಗಣ್ಯರು, ಉದ್ಯಮಿಗಳು, ರಾಜಕಾರಣಿಗಳು, ಕಲಾವಿದರು ಭಾಗವಹಿಸಲಿದ್ದಾರೆ' ಎಂದು ಪರಿಷತ್ತಿನ ಅಧ್ಯಕ್ಷ ಧನಂಜಯ ಕೆಂಗಯ್ಯ ತಿಳಿಸಿದ್ದಾರೆ.

ಸಮ್ಮೇಳನದಲ್ಲಿ ಭಾಗವಹಿಸಲು ಆಸಕ್ತರು ಹೆಚ್ಚಿನ ಮಾಹಿತಿಗೆ https://myvpa.org/2025 ವೈಬ್‌ಸೈಟ್‌ಗೆ ಭೇಟಿ ನೀಡಬಹುದು.

ಅರ್ಜಿ ಆಹ್ವಾನ

ಬೆಂಗಳೂರು: ಪ್ರವಾಸೋದ್ಯಮ ಇಲಾಖೆಯಿಂದ 2024-25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ (ಮಲ್ಟಿ ಕ್ಯುಸಿನ್ ಕುಕ್) ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅಡಿಯಲ್ಲಿ ಈ ತರಬೇತಿ ಆಯೋಜಿಸಲಾಗಿದೆ. ಎಂಟನೇ ತರಗತಿ ಉತ್ತೀರ್ಣರಾದ ಕನಿಷ್ಠ 20 ವರ್ಷದಿಂದ ಗರಿಷ್ಠ 45 ವರ್ಷದೊಳಗಿನ ಆಸಕ್ತರು ಏಪ್ರಿಲ್ 5ರೊಳಗೆ ಅರ್ಜಿ ಸಲ್ಲಿಸಬಹುದು. ತರಬೇತಿಯು ಐದು ತಿಂಗಳು ನಡೆಯಲಿದೆ.

ವಿಳಾಸ: ಉಪ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ನಂ.3, ನಾಲ್ಕನೇ ಮಹಡಿ, ಎಂಬೆಸಿ ಐಕಾನ್ ಕಟ್ಟಡ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560 001

ಸಂಪರ್ಕ: 080-22352525

ಚಿಣ್ಣರ ಅಂಗಳ ಬೇಸಿಗೆ ಶಿಬಿರ ಇಂದಿನಿಂದ

ರಾಜರಾಜೇಶ್ವರಿನಗರ: ಲಗ್ಗೆರೆಯ ಅರ್ಪಿತಾ ಸೇವಾ ಟ್ರಸ್ಟ್ ವತಿಯಿಂದ ಚಿಣ್ಣರ ಅಂಗಳ ಬೃಹತ್ ಬೇಸಿಗೆ ಶಿಬಿರಕ್ಕೆ ಮಾರ್ಚ್24ರಂದು ಸಂಜೆ 6ಕ್ಕೆ ಚಾಲನೆ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಲಗ್ಗೆರೆ ನಾರಾಯಣಸ್ವಾಮಿ ತಿಳಿಸಿದ್ದಾರೆ,

ಲಗ್ಗೆರೆಯ ಮೌಂಟ್ ಸೇನೆರಿಯಾ ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕೂಡಲ ಸಂಗಮದ ಜಯ ಮೃತ್ಯುಂಜಯ ಸ್ವಾಮೀಜಿ, ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ರೇಣುಕಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕೆಪಿಸಿಸಿ ವಕ್ತಾರೆ ಎಚ್. ಕುಸುಮಾ ಅಧ್ಯಕ್ಷತೆ ವಹಿಸುವರು. ಕ್ರಿಕೆಟ್, ಕುದುರೆ ಸವಾರಿ, ಈಜು ಕಲಿಕೆ, ಬಂದೂಕು ತೆರಬೇತಿ, ಕೆಸರು ಗದ್ದೆಯಲ್ಲಿನ ಆಟಗಳು, ಸ್ಕೇಟಿಂಗ್, ಬಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಸಮರ ಕಲೆಗಳು, ಕುಶಲ ಕೌಶಲ್ಯಗಳು, ಯಕ್ಷಗಾನ, ಚಿತ್ರಕಲೆ, ರಂಗೋಲಿ, ಕುಂಟೆಬಿಲ್ಲೆ ಸೇರಿ ನೂರಕ್ಕು ಹೆಚ್ಚು ವಿವಿಧ ಆಟಗಳ ತರಬೇತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.



'ಪಕ್ಷದ ಕೆಲಸ ಸಾಮಾಜಿಕ ಜವಾಬ್ದಾರಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪಕ್ಷದ ಕೆಲಸವೆಂದರೆ ಚುನಾವಣೆ ಬಂದಾಗ ಮಾಡುವುದಲ್ಲ, ಇದೊಂದು ನಿರಂತರವಾಗಿ ಮಾಡುವ ಸಾಮಾಜಿಕ ಜವಾಬ್ದಾರಿ ಎಂದು ಮಾಜಿ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಕೆ.ಆರ್.ಪುರ ಸಮೀಪದ ಕಾಟಂನಲ್ಲೂರಿನಲ್ಲಿ ಹಮ್ಮಿಕೊಂಡಿದ್ದ ಮಹದೇವಪುರ ಕ್ಷೇತ್ರದ ಬಿಜೆಪಿ ಗ್ರಾಮಾಂತರ ಮಂಡಲದ ನೂತನ ಪದಾಧಿಕಾರಿಗಳ ಮತ್ತು ಮೋರ್ಚಾಗಳ ಘೋಷಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪಕ್ಷ ನೀಡಿರುವ ಜವಾಬ್ದಾರಿ ಉತ್ತಮವಾಗಿ ನಿರ್ವಹಿಸುವ ಉದ್ದೇಶದಿಂದ ಸ್ಥಾನಮಾನಗಳನ್ನು ನೀಡಲಾಗಿದೆ. ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಸಾರ್ವಜನಿಕರ ಕೆಲಸದ ಜೊತೆಗೆ ಸಾಮಾಜಿಕ ಕಾರ್ಯಕರ್ತರಾದರೆ ಪಕ್ಷ ಯಶಸ್ಸು ಸಾಧಸಲಿದೆ ಎಂದರು.

ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಹೂಡಿ ಪಿಳ್ಳಪ್ಪ, ಶಾಸಕಿ ಮಂಜುಳಾ ಲಿಂಬಾವಳಿ, ಗ್ರಾಮಾಂತರ ಮಂಡಲದ ಅಧ್ಯಕ್ಷ ಎಚ್. ಎಸ್. ಪಿಳ್ಳಪ್ಪ, ನಿಕಟಪೂರ್ವ ಅಧ್ಯಕ್ಷ ಬಿ.ಎನ್. ನಟರಾಜ್, ಮುಖಂಡರಾದ ಕೆ.ಎಂ.ಎಂ. ಮಂಜುನಾಥ್, ಅನಿಲ್, ಕೆ.ವಿ. ನಾಗರಾಜ್ ಭಾಗವಹಿಸಿದ್ದರು.



ಜಯನಗರದ ಸರ್‌ಎಂ. ವಿಶ್ವೇಶ್ವರಯ್ಯ ಮಳೆನೀರು ಸಂಗ್ರಹ ಥೀಮ್ ಪಾರ್ಕ್‌ನಲ್ಲಿ ನಡೆದ 'ನಮ್ಮ ಪ್ಲಂಬರ್ ನಮ್ಮ ಹೀರೊ' ಸಂವಾದ ಕಾರ್ಯಕ್ರಮದಲ್ಲಿ 150ಕ್ಕೂ ಅಧಿಕ ಪರಿಸರಾಸಕ್ತರು ಭಾಗವಹಿಸಿದ್ದರು

ಪರಿಸರ ರಕ್ಷಣೆಯು ನಮ್ಮ ಸಂಸ್ಕೃತಿಯ ಭಾಗ: ರಾಜಲಕ್ಷ್ಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸರ ಸಂರಕ್ಷಣೆ ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ' ಎಂದು ರಾಜಸ್ಥಾನದ ಜೈಸಲ್ಮೇರ್ ರಾಜವಂಶಸ್ಥೆ ರಾಸೇಶ್ವರಿ ರಾಜಲಕ್ಷ್ಮಿ ಹೇಳಿದರು.

ಜಯನಗರದ ಸರ್.ಎಂ. ವಿಶ್ವೇಶ್ವರಯ್ಯ ಮಳೆನೀರು ಸಂಗ್ರಹ ಥೀಮ್ ಪಾರ್ಕ್‌ನಲ್ಲಿ ಪರ್ಯಾವರಣ ಸಂರಕ್ಷಣ ಗತಿ ವಿಧಿ ಆಯೋಜಿಸಿದ್ದ 'ನಮ್ಮ ಪ್ಲಂಬರ್ ನಮ್ಮ ಹೀರೊ' ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಮಗೆ ಜೀವಿಸಲು ಬೇಕಾದ ವಸ್ತು ಗಳನ್ನು ಪ್ರಕೃತಿ ಉಚಿತವಾಗಿ ನೀಡುತ್ತದೆ. ಅದಕ್ಕಾಗಿ ಉಪಕಾರ ಸ್ಮರಣೆ ದೃಷ್ಟಿಯಿಂದ ನಾವು ಪ್ರಕೃತಿಯ ಭಾಗವಾದ ಜಲವನ್ನು ಗೌರವಯುತವಾಗಿ ನೋಡಬೇಕು. ಮಿತ ಬಳಕೆ ಮಾಡಬೇಕು' ಎಂದು ಸಲಹೆ ನೀಡಿದರು.

ಕೇಂದ್ರ ಜಲ ಆಯೋಗದ ಮುಖ್ಯ ಎಂಜಿನಿಯರ್ ಎಸ್. ಎನ್.ಪಾಂಡೆ ಮಾತನಾಡಿ, 'ವರ್ಷದಿಂದ ವರ್ಷಕ್ಕೆ ದೇಶದ ಎಲ್ಲ ಮಹಾನಗರಗಳಲ್ಲಿ ನೀರಿನ ಸಮಸ್ಯೆ ಬಿಗಡಾಯಿಸುತ್ತಿದೆ. ಪ್ರತಿ ಮನೆಯಲ್ಲೂ ಮಳೆ ನೀರು ಸಂಗ್ರಹ ಅಳವಡಿಸಿಕೊಂಡರೆ ನೀರಿನ ಸಮಸ್ಯೆಗೆ ಪರಿಹಾರ ಸಿಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಬಹುತೇಕ ಮಹಾನಗರಗಳಿಗೆ ಹೊರಗಡೆಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಬೇಸಿಗೆಯಲ್ಲಿ ನೀರಿನ ಬವಣೆ ತೀವ್ರವಾಗಿರುತ್ತದೆ. ದೇಶದ ಇತರೆ ಮಹಾನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಮಾತ್ರ ಹಿಂಗಾರು, ಮುಂಗಾರು ಅವಧಿಯಲ್ಲಿ ಮಳೆಯಾಗುತ್ತದೆ. ಹಾಗಾಗಿ, ಇಲ್ಲಿನ ನಿವಾಸಿಗಳು ಕೊಳವೆ ಬಾವಿ ಅಥವಾ ಕಾವೇರಿ ನೀರಿನ ಮೇಲೆ ಅವಲಂಬಿತವಾಗದೆ ಮಳೆ ನೀರು ಸಂಗ್ರಹ ಅಳವಡಿಸಿ ಕೊಳ್ಳುವುದು ಉತ್ತಮ' ಎಂದರು.

ಇಂಡಿಯನ್ ಪ್ಲಂಬಿಂಗ್ ಅಸೋಸಿಯೇಷನ್ ಅಧ್ಯಕ್ಷ ಬಾಲಕೃಷ್ಣ ಮೆಹತಾ ಮಾತನಾಡಿ, 'ಅನಗತ್ಯವಾಗಿ ನೀರು ಪೋಲು ಮಾಡಬಾರದು. ನೀರು ಉಳಿಸಲು ಸರ್ಕಾರ ಮಾತ್ರವಲ್ಲ ಸಾರ್ವಜನಿಕರೂ ಪ್ರಯತ್ನಿಸಬೇಕು' ಎಂದು ಹೇಳಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮುಖ್ಯ ಎಂಜಿನಿಯರ್ ಯು.ನಳಿನಾಕ್ಷಿ ಮಾತನಾಡಿ, 'ಬೆಂಗಳೂರಿನಲ್ಲಿ ಸಾಕಷ್ಟು ನೀರಿನ ಸಂಪನ್ಮೂಲಗಳಿದ್ದರೂ ಕೊಳವೆಬಾವಿಗಳನ್ನೇ ಹೆಚ್ಚು ಅವಲಂಬಿಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಮಸ್ಯೆ ಉಂಟಾಗಲಿದೆ' ಎಂದು ಎಚ್ಚರಿಸಿದರು.

ಪರ್ಯಾವರಣ ಸಂರಕ್ಷಣ ಗತಿವಿಧಿ ಜಲ ಆಯಾಮ ಪ್ರಮುಖ ಕೆ.ಆರ್ ಶ್ರೀಹರ್ಷ ಸಂವಾದ ನಡೆಸಿಕೊಟ್ಟರು. ಜಲಮಂಡಳಿಯ ಮುಖ್ಯ ಎಂಜಿನಿಯರ್ ಸನತ್ ಕುಮಾರ್ ಭಾಗವಹಿಸಿದ್ದರು.

ಜಿಮ್ಸ್ ಐಸಿಯುನಲ್ಲಿ ವಿದ್ಯುತ್ ಸ್ಥಗಿತದಿಂದ ಸಮಸ್ಯೆ

ವೆಂಟಿಲೇಟರ್ ಬಂದ್: ಪರದಾಟ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆಸ್ಪತ್ರೆಯ ಶಸ್ತ್ರ ಚಿಕಿತ್ಸೆ ನಂತರದ ವಾರ್ಡ್‌ನ (429) ಐಸಿಯುನಲ್ಲಿ ವಿದ್ಯುತ್ ಸ್ಥಗಿತದಿಂದ ಕೆಲ ನಿಮಿಷ ವೆಂಟಿಲೇಟರ್‌ಗಳು ಬಂದ್ ಆಗಿದ್ದರಿಂದ ಆಮ್ಲಜನಕ ಸಿಗದೆ ರೋಗಿಗಳು ಪರದಾಡಿದರು.

ಶನಿವಾರ ಮಧ್ಯಾಹ್ನ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಜಿಮ್ಸ್‌ಗೆ ಭೇಟಿ ನೀಡಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಸಂಬಂಧ ಕಾಮಗಾರಿ ಪರಿಶೀಲನೆ ನಡೆಸಿದ್ದರು. ಅದೇ ದಿನ ಸಂಜೆ 7ರಿಂದ 7.30ರ ನಡುವೆ ಆಸ್ಪತ್ರೆಯ ವಿದ್ಯುತ್ ಸಂಪರ್ಕ ಕಡಿತದಿಂದ ವೆಂಟಿಲೇಟರ್‌ಗಳು ಬಂದ್ ಆಗಿವೆ.

4ನೇ ಮಹಡಿಯಲ್ಲಿನ 429ನೇ ವಾರ್ಡ್‌ನ ಐಸಿಯುನ 1 ಮತ್ತು 2ನೇ ಬೆಡ್‌ಗಳ ವೆಂಟಿಲೇಟರ್‌ಗಳು ಕೆಲ ನಿಮಿಷದ ಬಳಿಕ ಬ್ಯಾಟರಿ ಸಾಮರ್ಥ್ಯ ಇಲ್ಲದೆ ಸ್ಥಗಿತವಾದವು. ಶ್ವಾಸಕೋಶ ಸಮಸ್ಯೆಯಿಂದ ದಾಖಲಾದ ಚಿತ್ತಾಪುರ ತಾಲ್ಲೂಕಿನ ಮಹಿಳಾ ರೋಗಿ ಹಾಗೂ ಕ್ಯಾನ್ಸರ್ ಕಾಯಿಲೆಯಿಂದ ದಾಖಲಾಗಿದ್ದ ಸೇಡಂ ತಾಲ್ಲೂಕಿನ ಪುರುಷ ರೋಗಿಗಳಿಗೆ ತೊಂದರೆಯಾಯಿತು ಎಂದು ರೋಗಿಯ ಸಂಬಂಧಿಕರೊಬ್ಬರು ತಿಳಿಸಿದರು.

ರೋಗಿಗಳು ಪರದಾಡುತ್ತಿದ್ದಂತೆ ನರ್ಸ್‌ಗಳು ಬ್ರೈನ್ ಸರ್ಕ್ಯೂಟ್ ಮೂಲಕ ಆಕ್ಸಿಜನ್ ಕೊಡುವಲ್ಲಿ ನಿರತರಾದರು. ವಿದ್ಯುತ್ ಬರುವವರೆಗೂ ಬ್ರೈನ್ ಸರ್ಕ್ಯೂಟ್ ಬಳಕೆ ಮುಂದುವರಿಸಿದರು. ವೆಂಟಿಲೇಟರ್ ಸ್ಥಗಿತದಿಂದ ರೋಗಿಗಳ ಸಂಬಂಧಿಕರು ನರ್ಸ್‌ಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವ ವಿಡಿಯೊಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ಆಸ್ಪತ್ರೆಯ ಈ ನಡೆಗೆ ಸಾರ್ವಜನಿಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ.



ಕಲಬುರಗಿಯ ಜಿಮ್ಸ್ ಆಸ್ಪತ್ರೆಯಲ್ಲಿ ವೆಂಟಿಲೇಟರ್‌ಗಳ ಸ್ಥಗಿತದಿಂದಾಗಿ ಬ್ರೈನ್ ಸರ್ಕ್ಯೂಟ್ ಮೂಲಕ ರೋಗಿಗೆ ಆಕ್ಸಿಜನ್ ಕೊಡಲಾಯಿತು



ಆಸ್ಪತ್ರೆಯಲ್ಲಿ ಬೆಡ್‌ಗಳು ಹೆಚ್ಚಾಗಿದ್ದರಿಂದ ವಿದ್ಯುತ್ ಒತ್ತಡವೂ ಹೆಚ್ಚಾಗಿ ಸ್ಥಗಿತವಾಗಿವೆ. ರೋಗಿಗಳಿಗೆ ಯಾವುದೇ ತೊಂದರೆ ಆಗಿಲ್ಲ. ಬದಲಿಸಲು ಸೂಚಿಸಿರುವೆ

ಡಾ.ಶರಣಪ್ರಕಾಶ ಪಾಟೀಲ
ವೈದ್ಯಕೀಯ ಶಿಕ್ಷಣ ಸಚಿವ

ಶಸ್ತ್ರಚಿಕಿತ್ಸೆ ನಂತರದ ವಾರ್ಡ್ ಮುಂಭಾಗದ ಮತ್ತೊಂದು ಐಸಿಯುನಲ್ಲಿಯೂ ಇಂತಹುದೇ ಘಟನೆ ನಡೆದಿತ್ತು. ವಿಷ ಕುಡಿದು ಐಸಿಯುಗೆ ದಾಖಲಾಗಿದ್ದ ಶಹಾಪುರ ತಾಲ್ಲೂಕಿನ ರೋಗಿ ವೆಂಟಿಲೇಟರ್ ಬಂದ್ ಆಗಿ ತೊಂದರೆ ಅನುಭವಿಸಿದರು. ಸಹೋದರ, ನರ್ಸ್‌ಗಳ ಗಮನಕ್ಕೆ ತಂದ ನಂತರ ಬ್ರೈನ್ ಸರ್ಕ್ಯೂಟ್ ಮುಖೇನ ಆಕ್ಸಿಜನ್ ನೀಡಲಾಯಿತು ಎಂದು ರೋಗಿಯ ಅಟೆಂಡರ್ ಹೇಳಿದರು.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**



ದುಃಸ್ಥಿತಿಯಲ್ಲಿರುವ ಇ–ಶೌಚಾಲಯ

'ಇ–ಶೌಚಾಲಯ ನಿರ್ವಹಣೆ ಕೊರತೆ'

ವಿಶ್ವೇಶ್ವರಪುರದ ಕೆನರಾ ಬ್ಯಾಂಕ್ ಡಯಾಗ್ನಲ್ ರಸ್ತೆಯ ವಾರ್ಡ್ ಸಂಖ್ಯೆ 143ರಲ್ಲಿ ಇ–ಶೌಚಾಲಯದ ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ನಿರ್ವಹಣೆ ಕೊರತೆಯಿಂದ ಈ ಶೌಚಾಲಯ ಬಳಕೆ ಮಾಡದಂತಹ ಸ್ಥಿತಿಗೆ ತಲುಪಿದೆ. ಸಾರ್ವಜನಿಕರು ಶೌಚಾಲಯದ ಪಕ್ಕದಲ್ಲಿಯೇ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಇ–ಶೌಚಾಲಯದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಮುರಳೀಧರ, ವಿಶ್ವೇಶ್ವರಪುರ



ತ್ಯಾಗರಾಜನಗರದಲ್ಲಿ ಮಾರ್ಗಸೂಚಿ ಫಲಕ ಬಿದ್ದಿರುವುದು

'ಧರೆಗೆ ಉರುಳಿದ ಮಾರ್ಗಸೂಚಿ ಫಲಕಗಳು'

ತ್ಯಾಗರಾಜನಗರ, ಟಾಟಾ ಸಿಲ್ಕ್ ಫಾರ್ಮ್‌ನ ಬಹುತೇಕ ಭಾಗದಲ್ಲಿರುವ ಮಾರ್ಗಸೂಚಿ ಫಲಕಗಳು ಧರೆಗೆ ಉರುಳಿ ಬಿದ್ದಿದ್ದು, ಇನ್ನೂ ಕೆಲವು ಕೆಳಗಡೆ ಬೀಳುವ ಹಂತಕ್ಕೆ ತಲುಪಿವೆ. ಮಾರ್ಗಸೂಚಿ ಫಲಕಗಳು ಇಲ್ಲದ ಕಾರಣ ಈ ಭಾಗಕ್ಕೆ ಬರುವ ಹೊಸಬರು ವಿಳಾಸ ಗೊತ್ತಾಗದೇ ಪರದಾಡುತ್ತಿದ್ದಾರೆ. ಧರೆಗೆ ಉರುಳಿದ ಮಾರ್ಗಸೂಚಿ ಫಲಕಗಳನ್ನು ಕೂಡಲೇ ಸರಿಪಡಿಸಬೇಕು.

ದೀಪಕ್ ಶಿರಾಲಿ, ತ್ಯಾಗರಾಜನಗರ

'ಕಾಲುಸೇತುವೆ ಕಾಮಗಾರಿ ಪೂರ್ಣಗೊಳಿಸಿ'

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಮತ್ತು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳ ಮಧ್ಯದಲ್ಲಿರುವ ನಾಗರಬಾವಿಯ ವೃಷಭಾವತಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಕಾಲು ಸೇತುವೆ ಕಾಮಗಾರಿ ಸ್ಥಗಿತಗೊಂಡಿದೆ. ಕೆಲ ತಿಂಗಳ ಹಿಂದೆಯೇ ಕಾಮಗಾರಿ ಪ್ರಾರಂಭಿಸಲಾಗಿತ್ತು. ಬಿಬಿಎಂಪಿ ಕೂಡಲೇ ಈ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಬೇಕು.

ಎಚ್. ತುಕಾರಾಂ, ಬಾಲಗಂಗಾಧರ ನಗರ



ನಾಗರಬಾವಿಯ ವೃಷಭಾವತಿಗೆ ನಿರ್ಮಿಸುತ್ತಿರುವ ಕಾಲುಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿರುವುದು



ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ಹರಿಯುತ್ತಿರುವ ಚರಂಡಿ ನೀರು

'ರಸ್ತೆಯಲ್ಲಿ ಹರಿಯುವ ಚರಂಡಿ ನೀರು'

ಚಿಕ್ಕಪೇಟೆಯ ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಇದರಿಂದ ವಾಹನ ಸಂಚಾರಕ್ಕೂ ಸಮಸ್ಯೆ ಆಗಿದೆ. ಮೂರು ವರ್ಷಗಳಿಂದ ತ್ಯಾಜ್ಯ ನೀರು ರಸ್ತೆಯಲ್ಲಿಯೇ ಹರಿಯುತ್ತಿದೆ. ಆದರೆ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಸವಾರರು ಮೂಗು ಮುಚ್ಚಿಕೊಂಡು ಹೋಗಬೇಕಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಗಮನ ಹರಿಸುತ್ತಿಲ್ಲ.

ಶಿವಪ್ರಸಾದ್, ಚಿಕ್ಕಪೇಟೆ

'ಅಗೆದಿರುವ ರಸ್ತೆಯನ್ನು ಸರಿಪಡಿಸಿ'

ಸಹಕಾರನಗರದಿಂದ ಕೊಡಿಗೆಹಳ್ಳಿಗೆ ಸಂಪರ್ಕ ಕಲ್ಪಿಸುವ ಸಿ ಬ್ಲಾಕ್ 21–ಬಿ ಕ್ರಾಸ್‌ನ ಎರಡನೇ ಮುಖ್ಯ ರಸ್ತೆಯನ್ನು ಅಗೆದು ಹಾಕಲಾಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯ ಒಂದೇ ಭಾಗದಲ್ಲಿ ಮೂರು ಕಡೆಗೆ ಅಗೆದಿರುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ದ್ವಿಚಕ್ರ ವಾಹನ ಸವಾರರು ಇಲ್ಲಿ ಬಿದ್ದು ಕೈ ಕಾಲುಗಳನ್ನು ಮುರಿದುಕೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.



ಸಹಕಾರನಗರಕ್ಕೆ ಸಂಪರ್ಕಿಸುವ ರಸ್ತೆ ಅಗೆದಿರುವುದು

ಸಹಕಾರನಗರದ ನಿವಾಸಿಗಳು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಜಪವ ಮಾಡಿದರೇನು, ತಪವ ಮಾಡಿದರೇನು,
ಕಪಟಗುಣ, ವಿಪರೀತ ಕಲುಷವಿದ್ದವರು.

–ಕನಕದಾಸ

‘ಮಧುಬಲೆ’ಗೆ ಬೀಳಿಸುವ ಯತ್ನ ತನಿಖೆ ನಡೆದು ಸತ್ಯಾಂಶ ಹೊರಬರಲಿ

ರಾಜಕೀಯ ಎದುರಾಳಿಗಳನ್ನು ಹಣಿಯಲು ‘ಮಧುಬಲೆ’ಯನ್ನು (ಹನಿಟ್ರ್ಯಾಪ್) ಅಸ್ತ್ರವಾಗಿ ಬಳಸಿಕೊಳ್ಳುವ ಹೀನಾತಿಹೀನ ಚಾಳಿ ಕರ್ನಾಟಕದಲ್ಲಿ ಹೆಚ್ಚುತ್ತಿರುವುದು ರಾಜಕಾರಣದಲ್ಲಿ ಮೌಲ್ಯಗಳು ಪಾತಾಳಕ್ಕೆ ಕುಸಿದಿರುವುದಕ್ಕೆ ಸಾಕ್ಷಿ. ಉನ್ನತ ಸಂಸದೀಯ ಪರಂಪರೆಯನ್ನು ಹೊಂದಿದ್ದ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿತ್ತು. ಅದಕ್ಕೆ ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಕುಂದಾಗುತ್ತಲೇ ಇದೆ. ರಾಜ್ಯದಲ್ಲಿ ಸಚಿವರೊಬ್ಬರ ವಿರುದ್ಧವೇ ಈ ಅಸ್ತ್ರ ಬಳಸಲಾಗಿದೆ ಎಂಬ ವಿಚಾರ ಈಚೆಗೆ ವಿಧಾನಸಭೆಯಲ್ಲೇ ಬಹಿರಂಗವಾಗಿ, ಕೋಲಾಹಲ ಸೃಷ್ಟಿಸಿದೆ. ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಸದನದಲ್ಲೇ ಈ ವಿಚಾರವನ್ನು ದೃಢಪಡಿಸಿದ್ದಾರೆ. ‘ನಾನೊಬ್ಬನೇ ಅಲ್ಲ. ರಾಜ್ಯ ಹಾಗೂ ಕೇಂದ್ರದ ಎಲ್ಲ ಪಕ್ಷಗಳ ನಾಯಕರೂ ಸೇರಿದಂತೆ 48 ಮಂದಿ ಮೇಲೆ ಈ ಅಸ್ತ್ರ ಬಳಸಿ, ಸಿ.ಡಿ. ಮಾಡಿಟ್ಟುಕೊಳ್ಳಲಾಗಿದೆ. ರಾಜ್ಯವು ಸಿ.ಡಿ., ಪೆನ್‌ಡ್ರೈವ್ ಕಾರ್ಖಾನೆಯಾಗಿದೆ ಎಂದು ಬಹಳ ಜನ ಹೇಳುತ್ತಿದ್ದಾರೆ’ ಎಂದು ಸಚಿವರೇ ಹೇಳಿರುವುದು ಕಂಪನಗಳನ್ನು ಎಬ್ಬಿಸಿದೆ. ಮಧುಬಲೆಯ ಸೂತ್ರಧಾರಿಗಳು ಯಾರೇ ಆಗಿರಲಿ ಅಂತಹವರ ಮುಖವಾಡ ಕಳಚಬೇಕು. ರಾಜಕೀಯ ಲಾಭಕ್ಕಾಗಿ ರಾಜ್ಯದಲ್ಲಿ ಹನಿಟ್ರ್ಯಾಪ್ ಪ್ರಕರಣಗಳು ಪದೇ ಪದೇ ಸದ್ದು ಮಾಡುತ್ತಿವೆ. ಮಧುಬಲೆ ಪ್ರಕರಣವು 2013–18ರ ಅವಧಿಯಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಸಚಿವರೊಬ್ಬರ ರಾಜೀನಾಮೆಗೆ ಕಾರಣವಾಯಿತು. ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಕೆಡವಲು ಕಾರಣರಾದ ಹಲವು ಶಾಸಕರು ಕೆಲವು ದಿನಗಳ ಮಟ್ಟಿಗೆ ಮುಂಬೈನಲ್ಲಿ ವಾಸ್ತವ್ಯ ಹೂಡಿದ್ದರು. ಆ ವೇಳೆ ಚಿತ್ರೀಕರಿಸಲಾಗಿದೆ ಎನ್ನಲಾದ ವಿಡಿಯೊ ಇರುವ ಪೆನ್‌ಡ್ರೈವ್‌ಗಳನ್ನು ಕೆಲವು ನಾಯಕರು ತಮ್ಮ ಬಳಿ ಇರಿಸಿಕೊಂಡಿದ್ದಾರೆ ಎಂಬ ವದಂತಿಯು ರಾಜಕೀಯ ವಲಯದಲ್ಲಿ ಹಬ್ಬಿತ್ತು. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದಲ್ಲಿ ಪ್ರಭಾವಿ ಸಚಿವರೊಬ್ಬರ ಪದಚ್ಯುತಿಗೂ ಕಾರಣವಾಗಿದ್ದು ಇದೇ ಅಸ್ತ್ರ. ತಮ್ಮ ಮಾನಕ್ಕೆ ಹಾನಿ ತರುವ ವಿಡಿಯೊಗಳನ್ನು ಪ್ರಸಾರ ಮಾಡಬಾರದು ಎಂದು ರಾಜ್ಯದ 20ಕ್ಕೂ ಹೆಚ್ಚು ಜನಪ್ರತಿನಿಧಿಗಳು ನ್ಯಾಯಾಲಯಗಳಿಂದ ಪ್ರತಿಬಂಧಕಾಜ್ಞೆ ತಂದಿರುವುದು ಈ ಹಾವಳಿ ವಿಕೋಪಕ್ಕೆ ಹೋಗಿರುವುದನ್ನು ಸೂಚಿಸುತ್ತದೆ.



ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸುವ ದೃಢ ನಿಲುವನ್ನು ಮುಖ್ಯಮಂತ್ರಿಯವರು ತೆಗೆದುಕೊಳ್ಳಬೇಕು

ಸಿರಿವಂತರನ್ನು ಮಧುಬಲೆಗೆ ಕೆಡವಿ ಸುಲಿಗೆ ಮಾಡುವ ಪ್ರಕರಣಗಳು ಬಹಳ ವರ್ಷಗಳಿಂದಲೂ ನಡೆಯುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ಅಧಿಕಾರಸ್ಥ ರಾಜಕಾರಣಿಗಳು ಮತ್ತು ಪ್ರಭಾವಿ ಅಧಿಕಾರಿಗಳನ್ನು ಇಂತಹ ಕುತಂತ್ರದ ಮೂಲಕ ತಮ್ಮ ಹಿಡಿತದಲ್ಲಿರಿಸಿಕೊಂಡು ಲಾಭ ಪಡೆಯುವ ಜಾಲಗಳೂ ಸಕ್ರಿಯವಾಗಿವೆ. ಎದುರಾಳಿಗಳನ್ನು ಮಣಿಸಿ ಅಧಿಕಾರ ಹಿಡಿಯುವುದಕ್ಕೂ ಈ ಅಸ್ತ್ರ ಬಳಕೆಯಾಗುತ್ತಿದೆ ಎಂಬ ಆರೋಪ ಈಗ ಬಲವಾಗಿದೆ. ಇಂತಹ ಪ್ರಕರಣಗಳಲ್ಲಿ ಸಿಲುಕಿದವರ ಚಾರಿತ್ರ್ಯಹನನವಷ್ಟೇ ಆಗುವುದಿಲ್ಲ. ಅವರು ಬಾಹ್ಯ ಶಕ್ತಿಗಳ ಒತ್ತಡಕ್ಕೆ ಮಣಿದು ನೀತಿ– ನಿರ್ಧಾರಗಳಲ್ಲಿ ರಾಜಿ ಮಾಡಿಕೊಳ್ಳುವ, ಆಡಳಿತದಲ್ಲಿನ ರಹಸ್ಯಗಳನ್ನು ಸೋರಿಕೆ ಮಾಡುವ, ಅಧಿಕಾರ ದುರ್ಬಳಕೆ ಮಾಡಿಕೊಂಡು ನಿರ್ದಿಷ್ಟ ವ್ಯಕ್ತಿಗಳಿಗೆ ಲಾಭ ಮಾಡಿಕೊಡುವಂತಹ ತೀರ್ಮಾನಗಳನ್ನು ಕೈಗೊಳ್ಳುವುದಕ್ಕೂ ಎಡೆಮಾಡುತ್ತದೆ. ಮಧುಬಲೆಗೆ ಸಿಲುಕಿಸಿ ಲಾಭ ಪಡೆಯುವ ಸಂಚು ಅಕ್ಷಮ್ಯ. ಸಾರ್ವಜನಿಕ ಜೀವನದಲ್ಲಿ ಇರುವವರ ಮೇಲೂ ಈ ವಿಷಯದಲ್ಲಿ ಹೆಚ್ಚು ಜವಾಬ್ದಾರಿಗಳಿರುತ್ತವೆ. ಯಾರೋ ಹೆಣೆದ ಇಂತಹ ಸಂಚಿಗೆ ಬಲಿ ಆಗದಂತೆ ಜಾಗರೂಕರಾಗಿ ಇರಬೇಕು. ಆಗ, ವಿಡಿಯೊ, ಫೋಟೊ ಪ್ರಸಾರ ಮಾಡದಂತೆ ಆದೇಶ ಕೋರಿ ನ್ಯಾಯಾಲಯದ ಮೆಟ್ಟಿಲೇರುವುದು, ಕುಟುಂಬ, ಪಕ್ಷ, ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸುವುದೂ ತಪ್ಪುತ್ತದೆ. ಒತ್ತಡಕ್ಕೆ ಮಣಿಯದೆ ಅಧಿಕಾರ ಚಲಾಯಿಸುವ ಸ್ವಾತಂತ್ರ್ಯವೂ ತಾನಾಗಿಯೇ ದೊರಕುತ್ತದೆ.

ವಿಧಾನಮಂಡಲದ ಈ ಬಾರಿಯ ಕಲಾಪದಲ್ಲಿ ಜನಹಿತಕ್ಕೆ ಸಂಬಂಧಿಸಿದ ವಿಚಾರಗಳಿಗಿಂತಲೂ ಹೆಚ್ಚಾಗಿ ಮಧುಬಲೆಯಂತಹ ವ್ಯಕ್ತಿ ನೆಲೆಯ ವಿಷಯಗಳು ಚರ್ಚೆ, ಧರಣಿ, ಗದ್ದಲಕ್ಕೆ ಕಾರಣವಾದವು. ರಾಜ್ಯದಲ್ಲಿ ಅಧಿಕಾರಸ್ಥರನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕಾಗಿಯೇ ತಂತ್ರ ಹೂಡಿ ಹನಿಟ್ರ್ಯಾಪ್ ಮಾಡುವಂತಹ ದೊಡ್ಡ ಜಾಲವೇ ಇದೆ ಎಂಬುದನ್ನು ವಿಧಾನಸಭೆಯ ಕೆಲವು ಸದಸ್ಯರು ಸದನದಲ್ಲೇ ಬಹಿರಂಗಪಡಿಸಿದ್ದಾರೆ. ಸಚಿವ ರಾಜಣ್ಣ ಮಾತ್ರವಲ್ಲ, ವಿಧಾನ ಪರಿಷತ್‌ನ ಸದಸ್ಯರೂ ಆಗಿರುವ ಅವರ ಮಗ ರಾಜೇಂದ್ರ ಅವರನ್ನೂ ಮಧುಬಲೆಗೆ ಕೆಡವುವ ಪ್ರಯತ್ನ ನಡೆದಿತ್ತು ಎಂಬುದನ್ನು ಅವರೇ ಈಗ ಹೊರಗೆಡವಿದ್ದಾರೆ. ಈ ಕುರಿತ ಬಲವಾದ ಸಾಕ್ಷ್ಯಗಳೂ ತಮ್ಮ ಬಳಿ ಇವೆ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಕೆಲವು ದಿನಗಳ ಹಿಂದೆಯೇ ವಿಷಯ ಬಂದಿತ್ತು. ಸಿದ್ದರಾಮಯ್ಯ ಅವರ ಪರವಾಗಿ ಬಲವಾಗಿ ಧ್ವನಿ ಎತ್ತಿರುವುದಕ್ಕಾಗಿಯೇ ರಾಜಕೀಯವಾಗಿ ರಾಜಣ್ಣ ಅವರನ್ನು ಮಣಿಸಲು ಈ ಅಸ್ತ್ರ ಹೂಡಲಾಗಿತ್ತು ಎಂದು ಅವರ ಸಂಪುಟದ ಕೆಲವು ಸದಸ್ಯರು ಹೇಳಿಕೆ ನೀಡಿದ್ದಾರೆ. ಇಂತಹ ಗಂಭೀರ ಪ್ರಕರಣದ ಕುರಿತು ರಾಜಣ್ಣ ಮತ್ತು ಅವರ ಮಗ ನೇರವಾಗಿ ಪೊಲೀಸರಿಗೆ ದೂರು ನೀಡಿ, ತನಿಖೆಗೆ ಮನವಿ ಮಾಡುವ ಅವಕಾಶ ಇತ್ತು. ಆದರೂ ಅವರು ವಿಷಯ ಬಹಿರಂಗಪಡಿಸುವುದಕ್ಕೆ ವಿಧಾನಮಂಡಲದ ಅಧಿವೇಶನವನ್ನು ಬಳಸಿಕೊಂಡಿದ್ದಾರೆ. ರಾಜಕೀಯವಾಗಿ ಎದುರಾಳಿಗಳಿಗೆ ಸಂದೇಶ ರವಾನಿಸುವುದು ಅವರ ಉದ್ದೇಶ ಆಗಿರಬಹುದು. ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸುವುದಾಗಿ ರಾಜಣ್ಣ ಅವರ ಕುಟುಂಬದ ಸದಸ್ಯರು ಹೇಳಿದ್ದಾರೆ. ಈ ವಿಚಾರದಲ್ಲಿ ಮತ್ತಷ್ಟು ವಿಳಂಬ ಮಾಡಬಾರದು. ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸುವ ದೃಢ ನಿಲುವನ್ನು ಮುಖ್ಯಮಂತ್ರಿಯವರು ತೆಗೆದುಕೊಳ್ಳಬೇಕು. ಮಧುಬಲೆಯ ಹಿಂದಿರುವ ಜಾಲವನ್ನು ಸಮಗ್ರವಾಗಿ ಪತ್ತೆಹಚ್ಚಿ, ಸಂಚುಕೋರರು, ಕಾರ್ಯಾಚರಣೆ ನಡೆಸುವವರ ವಿರುದ್ಧ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಜರುಗಿಸಬೇಕು. ಆ ಮೂಲಕ ದೇಶದಲ್ಲಿ ರಾಜ್ಯದ ಗೌರವವನ್ನು ಕಾಪಾಡುವ ಕೆಲಸ ಮಾಡಬೇಕು.


ದಿನದ ಟ್ವೀಟ್

ಮಳೆ ನೀರು ಸಂಗ್ರಹ: ಮಹತ್ವ ಅರಿಯೋಣ

ಮಳೆ ನೀರು ಸಂಗ್ರಹ ಗುಂಡಿಗಳ ಮೂಲಕ ನೀರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಹುತೇಕ ಬಗೆಹರಿಸಬಹುದು ಮತ್ತು ನೀರಿನ ಟ್ಯಾಂಕರ್‌ಗಳ ಮೇಲಿನ ಅವಲಂಬನೆಯನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸಬಹುದು. ಕಟ್ಟಡ ನಿರ್ಮಿಸುವವರು ಸರ್ಕಾರದ ಮಾನದಂಡಗಳನ್ನು ಅನುಸರಿಸಿದರೆ ಮತ್ತು ಸರ್ಕಾರವು ತನ್ನದೇ ನಿಯಮಗಳನ್ನು ಜಾರಿಗೆ ತಂದರೆ ಮಾತ್ರ ಇದು ಸಾಧ್ಯ. ಆಗ ನಗರದಲ್ಲಿನ ಜೀವನಮಟ್ಟ ಗಮನಾರ್ಹವಾಗಿ ಸುಧಾರಿಸುತ್ತದೆ!

ಸೌರವ್, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ



ಮೇಲ್ಮನೆಯು ಚಿಂತಕರ ಚಾವಡಿ. ಅದು ದೇಶಕ್ಕೆ ಮಾದರಿಯಾಗಿದೆ. ಅಂತಹ ಮೇಲ್ಮನೆಯ ಸಭಾಪತಿಯಾಗಿದ್ದೇನೆ ಎನ್ನುವುದೇ ಗೌರವದ ವಿಷಯ. ಆದರೆ, ಯಾರು ಯಾರಿಗೂ ಗೌರವ ಕೊಡುವುದಿಲ್ಲ. ಆ ಸ್ಥಾನದಲ್ಲಿದ್ದು, ನಿಯಮಬದ್ಧವಾಗಿ ಸದನ ನಡೆಸದಿದ್ದರೆ ಏನು ಉಪಯೋಗ? ನಾಮಕಾವಸ್ಥೆಗೆ ಆ ಸ್ಥಾನದಲ್ಲಿ ಇರಬಾರದು.

ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

25 ವರ್ಷಗಳ ಹಿಂದೆ

ಶುಕ್ರವಾರ, 24-3-2000

• ಕೃಪಾಂಕ: ವರದಿ ಬರುವ ತನಕ ನೇಮಕಾತಿ ಬೇಡ

ಬೆಂಗಳೂರು, ಮಾರ್ಚ್ 23– ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನೇಮಕಾತಿಯಲ್ಲಿ ಕೃಪಾಂಕ ನೀಡುವ ಬಗ್ಗೆ ಮಾಹಿತಿ ಸಂಗ್ರಹಿಸಲು ರಾಜ್ಯ ಸರ್ಕಾರ ನೇಮಿಸಿರುವ ಸಮಿತಿ ವರದಿ ನೀಡುವ ತನಕ ಯಾವುದೇ ನೇಮಕಾತಿ ಮಾಡಬಾರದು ಎಂದು ಕೆಪಿಎಸ್‌ಸಿಗೆ ಮನವಿ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಕೃಷ್ಣ ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

‘ಕೃಪಾಂಕದ ವಿಷಯದಲ್ಲಿ ರಾಜ್ಯ ಸರ್ಕಾರದ ನಿಲುವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿಯಲಿಲ್ಲ. ಸರ್ಕಾರ ತನ್ನ ನಿಲುವು ಸಮರ್ಥಿಸಲು ಸೂಕ್ತ ಮಾಹಿತಿ ನೀಡಿಲ್ಲ ಎಂದಿದೆ. ಹೀಗಾಗಿ, ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳ ವಿದ್ಯೆಯ ಮಟ್ಟ, ಹಿನ್ನೆಲೆ ಮೊದಲಾದ ವಿವರ ಸಂಗ್ರಹಕ್ಕೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ರಾಮಕೃಷ್ಣ ಅವರ ನೇತೃತ್ವದಲ್ಲಿ ತ್ರಿಸದಸ್ಯರ ಆಯೋಗ ರಚಿಸಲಾಗಿದೆ’ ಎಂದರು.

50 ವರ್ಷಗಳ ಹಿಂದೆ

ಸೋಮವಾರ, 24-3-1975

• ಬೆಲೆ ಏರಿಕೆ, ಕಲಬೆರಕೆಗೆ ಜಾಗೃತಿಯೇ ಮದ್ದು: ಅರಸು

ಬೆಂಗಳೂರು, ಮಾರ್ಚ್ 23– ಬಳಕೆದಾರರಲ್ಲಿ ಮೊದಲು ಜಾಗೃತಿ ಉಂಟಾಗಬೇಕು. ಅದೇ ಇಲ್ಲದೇ ಇದ್ದಲ್ಲಿ ಬೇರೆಯವರನ್ನು ದೂರಿದರೆ ಪ್ರಯೋಜನವೇನು?

ಬೆಲೆ ಏರಿಕೆ, ಕಲಬೆರಕೆ, ತೂಕದಲ್ಲಿ ಮೋಸ– ಇವುಗಳನ್ನು ತಡೆಗಟ್ಟಲು ರಾಜ್ಯದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಕೇಳಿದ ಪ್ರಶ್ನೆ ಇದು.

ಇಂದು ಸಂಜೆ ಕರ್ನಾಟಕ ಗ್ರಾಹಕರ ವೇದಿಕೆಯನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳು, ‘ಕಲಬೆರಕೆ ತಡೆಗಟ್ಟಲು ಆರೋಗ್ಯ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. ಆಹಾರ ವಿತರಣೆ ನೋಡಿಕೊಳ್ಳಲು ಆಹಾರ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. ಸುವ್ಯವಸ್ಥೆಗೆ ಎಲ್ಲವೂ ಇವೆ. ಆದರೆ ಅಧಿಕಾರಿಗಳು, ಅಂಗಡಿಯವರು ಒಂದಾಗ್ತಾರೆ. ಜನ ಏಕೆ ದೂರು ಕೊಡುತ್ತಿಲ್ಲ?’ ಎಂದು ಪ್ರಶ್ನಿಸಿದರು.

‘ಅಧಿಕಾರಿಗಳು ಲಂಚ ತಿನ್ನುತ್ತಾರೆ ಎಂದು ದೂರುತ್ತಾರೆ ಜನ. ಹೆಚ್ಚು ಮಂದಿಯ ಹೆಸರು ಸೇರಿಸಿ ಅಧಿಕ ಆಹಾರಧಾನ್ಯ ಪಡೆಯುವುದು ಭ್ರಷ್ಟಾಚಾರವಲ್ಲವೇ?’ ಎಂದರು.

‘ಬಳಕೆದಾರರು ಜಾಗೃತರಾಗಬೇಕು, ದೂರುಗಳನ್ನು ಕೊಟ್ಟು ಅವ್ಯವಹಾರ ಪ್ರತಿಭಟಿಸಲು ಮುಂದಾಗಬೇಕು’ ಎಂದು ಹೇಳಿದ ಅವರು, ಗ್ರಾಹಕರ ವೇದಿಕೆಗೆ ಸಹಾಯ– ಸಹಕಾರದ ಭರವಸೆ ನೀಡಿದರು.

ಮಲೆನಾಡಿನಲ್ಲಿ ಹಳ್ಳ ಹಿಡಿಯುತ್ತಿದೆ ಜಲ ಜೀವನ್ ಮಿಷನ್ ಯೋಜನೆಯ ಆಶಯ

ಜಲ ಭದ್ರತೆಯ ಬಗೆ ಹೇಗೆ?



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಮಧ್ಯ ಪಶ್ಚಿಮಘಟ್ಟದಲ್ಲೊಂದು ಊರಿನ ಹೆಸರು ಹೊಸಳ್ಳಿ. ಅದೆಷ್ಟೋ ವರ್ಷಗಳಿಂದ ಆ ಊರಿನ ಬಹಳಷ್ಟು ಕುಟುಂಬಗಳಿಗೆ ಅಬ್ಬಿ (ಕಿರುತೊರೆ) ನೀರೇ ಆಧಾರ. ವರ್ಷದ 365 ದಿನವೂ ಸದಾ ಧುಮ್ಮಿಕ್ಕುವ ಅಬ್ಬಿ ನೀರನ್ನು ಬಳಸಿಕೊಂಡೇ ಆ ಊರಿನ ಕುಟುಂಬಗಳು ಬದುಕು ಕಟ್ಟಿಕೊಂಡಿವೆ. ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೂ ಇದೇ ನೀರು ಬಳಕೆಯಾಗುತ್ತದೆ.

ಅದೇ ಗುಡ್ಡಗಳ ಸಾಲಿನಲ್ಲಿಯೇ ಬರುವ ಮತ್ತೊಂದು ಊರು ಹಿರೇಮನೆ. ಇಲ್ಲೂ ಹಲವು ಮನೆಗಳ ಹಿಂದಿನ ಗುಡ್ಡದಿಂದ ನೀರು ಒಸರುತ್ತದೆ. ಗುಡ್ಡದ ಬುಡದಲ್ಲೊಂದು ಚಿಕ್ಕ ಹೊಂಡ ಮಾಡಿಕೊಂಡಿದ್ದಾರೆ. ಸ್ಫಟಿಕದಷ್ಟು ಶುಭ್ರವಾದ ಖನಿಜಯುಕ್ತ ನೀರೇ ಅವರಿಗೆ ಜೀವನಾಧಾರ.

ಹೀಗೆ ಲಾಗಾಯ್ತಿನಿಂದ ನೀರಿನಾಶ್ರಯದಲ್ಲೇ ಮನುಕುಲ ವಿಕಾಸವಾಯಿತು. ನದಿ ತೀರದಲ್ಲೇ ನಾಗರಿಕತೆ ಬೆಳೆಯಿತು. ಏಷ್ಯಾದಲ್ಲೇ ಅತಿ ಹೆಚ್ಚು ಕೆರೆಗಳನ್ನು ಹೊಂದಿದ ಜಿಲ್ಲೆಯೆಂದು ಶಿವಮೊಗ್ಗ ಖ್ಯಾತಿ ಪಡೆದಿತ್ತು. ಅದೇ ಪಕ್ಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆರೆಗಳ ಸಂಖ್ಯೆ ಅತಿ ವಿರಳ. ಇದಕ್ಕೂ ಭೌಗೋಳಿಕ ರಚನೆಯೇ ಕಾರಣ. ಉತ್ತರ ಕನ್ನಡ ಜಿಲ್ಲೆ ಹೆಚ್ಚು ಗುಡ್ಡಗಳನ್ನು ಹೊಂದಿದೆ.

1980ರ ದಶಕದಲ್ಲಿ ಮಲೆನಾಡಿಗೆ ಅಕೇಶಿಯಾ ಎಂಬ ವಿದೇಶಿ ರಕ್ಕಸ ಬೆಳೆಯನ್ನು ಅರಣ್ಯ ಇಲಾಖೆಯೇ ತಂದುಹಾಕಿತು. ಗುಡ್ಡದಲ್ಲಿ ಬೆಳೆದ ನೈಸರ್ಗಿಕ ಅರಣ್ಯವನ್ನು, ಕುರುಚಲು ಕಾಡುಗಳನ್ನು, ಹುಲ್ಲುಗಾವಲುಗಳನ್ನು ಅಕೇಶಿಯಾ ಬಲಿ ತೆಗೆದುಕೊಂಡಿತು. ಶರಾವತಿ ನದಿ ಹುಟ್ಟುವ ಅಂಬುತೀರ್ಥದ ಗುಡ್ಡಗಳಲ್ಲಿ ಅಕೇಶಿಯಾವನ್ನು ನೆಡಲು ಅದೇ ಊರಿನವರು ವಿರೋಧ ಮಾಡಿದ ಕಾರಣಕ್ಕೆ ಶರಾವತಿ ನದಿ ಈಗಲೂ ಹರಿಯುತ್ತಿದ್ದಾಳೆ.

ಸಾಗರ ತಾಲ್ಲೂಕಿನ ಚಿಪ್ಪಳಿ– ಲಿಂಗದಹಳ್ಳಿ ಗ್ರಾಮದಲ್ಲಿ ಜೆಸಿಬಿ ಯಂತ್ರ ಬಂದು ಮನೆಯೊಂದರ ಮುಂದಿನ ರಸ್ತೆ ಮತ್ತು ಚರಂಡಿಯ ನಡುವಿನ ಜಾಗದಲ್ಲಿ ತೋಡನ್ನು ತೋಡಲು ಪ್ರಾರಂಭಿಸಿತು. ರಾಷ್ಟ್ರೀಯ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯ ಕಾರ್ಯ ಅದಾಗಿತ್ತು. ಈ ಯೋಜನೆಯ ಉದ್ದೇಶ ಏನೆಂದರೆ, ಭಾರತದ ಎಲ್ಲಾ ಹಳ್ಳಿಗಾಡುಗಳಲ್ಲಿ ವಾಸಿಸುವ ಕುಟುಂಬಗಳಿಗೆ ಕುಡಿಯಲು ಬೇಕಾದಷ್ಟು ಶುದ್ಧ ನೀರನ್ನು ಒದಗಿಸುವುದು. ಉದ್ದೇಶ ಒಳ್ಳೆಯದೇ. ಆದರೆ, ಇದರ ಅನುಷ್ಠಾನ ಹೇಗಾಗಬೇಕು? ಮನೆ ಮನೆಗೆ ನಲ್ಲಿ ಅಳವಡಿಸುವುದರಿಂದ ನೀರಿನ ಅಭಾವದಿಂದ ಬಳಲುವವರಿಗೆ ಇದು ವರವಾದೀತು. ನೀರಿನ ವಿಷಯದಲ್ಲಿ ನೈಸರ್ಗಿಕವಾಗಿ ಸ್ವಾವಲಂಬಿಗಳಾದವರಿಗೆ ಈ ಯೋಜನೆಯ ಪ್ರಯೋಜನವೇನು? ಅಥವಾ ಸರ್ಕಾರ ನೀಡುವ ನಲ್ಲಿ ನೀರಿನ ಅಗತ್ಯ ಅವರಿಗೆ ಇದೆಯೇ?

ಆ ಮನೆಯವರು ನೀರಿನ ವಿಷಯದಲ್ಲಿ ಸ್ವಾವಲಂಬನೆ ಹೊಂದಿದ್ದಾರೆ. ಜೆಜೆಎಂ ಯೋಜನೆಯ ನೀರಿನ ಅಗತ್ಯ ಅವರಿಗೆ ಇಲ್ಲ. ನಲ್ಲಿ ಅಳವಡಿಸಲು ಬಂದವರಿಗೆ ಇದನ್ನೇ ಹೇಳಲಾಯಿತು. ‘ಇಲ್ಲಾ ಸಾರ್, ಪ್ರತಿಯೊಬ್ಬರ ಮನೆಗೂ ನಲ್ಲಿ ನೀರು ಕೊಡುವ ಯೋಜನೆಯಿದು. ದಯವಿಟ್ಟು ಅಡ್ಡಿ ಮಾಡಬೇಡಿ. ನಲ್ಲಿ ಸಂಪರ್ಕವನ್ನು ಪಡೆದುಕೊಳ್ಳಿ’ ಎಂಬ ಸಲಹೆ ಮತ್ತು ಒತ್ತಾಯ ಗುತ್ತಿಗೆದಾರನಿಂದ ಬಂತು. ‘ನೀರು ಬಹಳ ಅಮೂಲ್ಯವಾದುದು, ಅದನ್ನು ಅಗತ್ಯ ಇರುವವರಿಗೆ ನೀಡುವುದು ನಿಮ್ಮ ಹೊಣೆ. ಯಾರಿಗೋ ಸೇರಬೇಕಾದ ನೀರನ್ನು ನಾವು ಬಳಸಲು ತಯಾರಿಲ್ಲ’ ಎಂದು ಆ ಮನೆಯವರು ಖಡಕ್ಕಾಗಿ ಹೇಳಿದರು. ಅಂತೂ ಗುತ್ತಿಗೆದಾರ ಗೊಣಗುತ್ತಾ ಸಂಪರ್ಕ ನೀಡದೇ ಮುಂದೆ ಹೋದ. ಅಕ್ಕಪಕ್ಕದ ಮನೆಯವರು ಬಂದು, ಸರ್ಕಾರ ನೀಡುವ ಪ್ರಯೋಜನವನ್ನು ಪಡೆದುಕೊಳ್ಳಿ ಎಂಬ ಪುಕ್ಕಟೆ ಸಲಹೆಯನ್ನು ಮನೆಯವರಿಗೆ ನೀಡಿದರು.

ಆ ಇಡೀ ಗ್ರಾಮದಲ್ಲಿ ಲಾಗಾಯ್ತಿನಿಂದ ವಾಸವಿರುವವರಿಗೆ ನಲ್ಲಿ ನೀರಿನ ಸಂಪರ್ಕದ ಅಗತ್ಯವಿಲ್ಲ. ಅವರಿಗೆ ಪಾರಂಪರಿಕ ಕೃಷಿ ಜಮೀನಿದೆ. ಕುಡಿಯುವ ನೀರಿಗೆ ಮನೆಯಲ್ಲಿ ಬಾವಿ ಇದೆ. ಕೃಷಿ ಮತ್ತು ತೋಟಗಾರಿಕೆಗಾಗಿ ತೋಟದಲ್ಲಿ ಬಾವಿ ಇದೆ. ಬಾವಿಗೆ ನೀರುಣಿಸುವ ಕೆರೆಗಳಿವೆ. ಆದರೂ, ಹಲವರು ಈ ಯೋಜನೆಯ ಫಲವನ್ನು ಪಡೆಯಲು ಮುಂದಾಗಿದ್ದಾರೆ. ಕೊಳವೆಬಾವಿ ತಂತ್ರಜ್ಞಾನದ ಆವಿಷ್ಕಾರಕ್ಕೂ ಮೊದಲು ಸಾಮಾನ್ಯವಾಗಿ ಜನ ತಮ್ಮ ದೈನಂದಿನ ನೀರಿನ ಅವಲಂಬನೆಗೆ ತೆರೆದ ಬಾವಿಯನ್ನು ಕಂಡುಕೊಂಡಿದ್ದರು. ಮೇಲ್ಮಟ್ಟದ ಅಂತರ್ಜಲ ಸುಲಭವಾಗಿ ಬಾವಿಗಳ ಮೂಲಕ ಲಭ್ಯವಾಗುತ್ತಿತ್ತು.

ಮಲೆನಾಡಿನಲ್ಲಿ ಜೆಜೆಎಂ ಯೋಜನೆಯ ನೀರು ಹೇಗೆಲ್ಲಾ ಬಳಕೆಯಾಗುತ್ತದೆ ಎಂದರೆ, ಕುಡಿಯಲು ಹೊರತುಪಡಿಸಿ, ಉಳಿದೆಲ್ಲಾ ಕೆಲಸಗಳಿಗೆ ಬಳಸಲಾಗುತ್ತಿದೆ. ಒಂದು ಮಹತ್ವಾಕಾಂಕ್ಷಿ ಯೋಜನೆಯ ಆಶಯ ಹೇಗೆ ಹಳ್ಳ ಹಿಡಿಯುತ್ತಿದೆ ಎಂಬುದನ್ನು ಕಾಣಬೇಕಾದರೆ ನೀವು ಮಲೆನಾಡಿಗೆ ಬರಬೇಕು. ರಸ್ತೆಯಲ್ಲಿ ದೂಳು ಏಳುತ್ತಿದೆ ಎಂದು, ಮನೆಯ ಮುಂದಿನ ಕೈತೋಟಕ್ಕೆಂದು ಜೆಜೆಎಂ ನೀರು ಬಳಕೆಯಾಗುತ್ತಿರುವುದನ್ನು ಬಹಳ ನೋವಿನಿಂದ ಉಲ್ಲೇಖಿಸಬೇಕಿದೆ.

ಜೆಜೆಎಂ 2019ರಲ್ಲಿ ಪ್ರಾರಂಭವಾದ ಯೋಜನೆ. ಕೇಂದ್ರ ಸರ್ಕಾರದ ಶೇ 50ರಷ್ಟು ಅನುದಾನ ಮತ್ತು ರಾಜ್ಯ ಸರ್ಕಾರದ ಶೇ 50ರಷ್ಟು ಅನುದಾನ ಈ ಯೋಜನೆಗೆ ಬಳಕೆ ಆಗುತ್ತಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ಶೇ 100ರಷ್ಟು ಅನುದಾನವನ್ನು ಕೇಂದ್ರವೇ ನೀಡುತ್ತದೆ, ಹಿಮಾಲಯ ವ್ಯಾಪ್ತಿಯ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಈ ಅನುಪಾತ 90:10ರಷ್ಟಿದೆ. ಈ ಯೋಜನೆಯ ಆಶಯದಂತೆ, ಭಾರತದ ಎಲ್ಲಾ ಹಳ್ಳಿಗಳ ಪ್ರತಿ ಮನೆಗೂ 2024ರಲ್ಲೇ ನಲ್ಲಿ ಸಂಪರ್ಕ ಲಭಿಸಬೇಕಾಗಿತ್ತು. ಆದರೆ, ನೀರಿನ ಅಲಭ್ಯತೆ ಮತ್ತು ಭ್ರಷ್ಟಾಚಾರದ ಕಾರಣಕ್ಕೆ ನಿಗದಿತ ಸಮಯದಲ್ಲಿ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ. 2024ರ ಆಗಸ್ಟ್ ಹೊತ್ತಿಗೆ ಸುಮಾರು 15 ಕೋಟಿ ಕುಟುಂಬಗಳಿಗೆ ಜೆಜೆಎಂ ಯೋಜನೆಯಡಿ ನಲ್ಲಿ ಸಂಪರ್ಕ ಲಭಿಸಿದೆ ಎಂದು ಅಂಕಿ-ಅಂಶಗಳು ತಿಳಿಸುತ್ತವೆ.



ಜೆಜೆಎಂ ಯೋಜನೆಯಲ್ಲಿ ಅಪಾರ ಪ್ರಮಾಣದ ಭ್ರಷ್ಟಾಚಾರವಾಗಿದೆ ಎಂದು ಛತ್ತೀಸಗಢ ವಿಧಾನಸಭೆಯಲ್ಲಿ ಆಳುವ ಪಕ್ಷವೇ ಹೋದ ತಿಂಗಳು ತಕರಾರು ಎತ್ತಿತು. ಪಕ್ಷದ ಶಾಸಕ ಅಜಯ್ ಚಂದ್ರಾಕರ್ ಈ ತಕರಾರು ಎತ್ತಿದಾಗ, ಅಲ್ಲಿನ ಲೋಕೋಪಯೋಗಿ ಸಚಿವ ಅರುಣ್ ಸಾವೋ ಸಮಗ್ರ ತನಿಖೆ ನಡೆಸುವ ಭರವಸೆ ನೀಡಿದರು. 2024ರ ನವೆಂಬರ್‌ನಲ್ಲಿ ರಾಜಸ್ಥಾನದ ಒಬ್ಬ ಪ್ರಮುಖ ರಾಜಕಾರಣಿ ಹಾಗೂ ಇನ್ನಿತರ 22 ಮಂದಿಯ ಮೇಲೆ ಜೆಜೆಎಂನಡಿ ಭ್ರಷ್ಟಾಚಾರ ಎಸಗಿದ ಆರೋಪ ಕೇಳಿ ಬಂತು. ಜೆಜೆಎಂ ಅನುಷ್ಠಾನಗೊಳಿಸುವ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಹಣ ಲಪಟಾಯಿಸಿದ ದೂರು ಕೇಳಿಬಂದಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಹಲವರನ್ನು ಬಂಧಿಸಿತು. ಅಸ್ಸಾಂ ರಾಜ್ಯದಲ್ಲೂ ಜೆಜೆಎಂ ಯೋಜನೆಯಡಿ ನಡೆದ ಭ್ರಷ್ಟಾಚಾರದ ಕುರಿತು ದೊಡ್ಡ ಮಟ್ಟದ ಕೋಲಾಹಲ ಉಂಟಾಯಿತು.

₹ 360 ಲಕ್ಷ ಕೋಟಿ ಅಂದಾಜು ವೆಚ್ಚದ ಜೆಜೆಎಂ ಯೋಜನೆಗೆ ಹಣವನ್ನು ಹೊಂದಿಸಲು ಸರ್ಕಾರ ಪರದಾಡುತ್ತಿದೆ. ಆದರೆ, ಮೂಲಗಳ ಪ್ರಕಾರ, ನೀರಿನ ಲಭ್ಯತೆ ಇಲ್ಲದಲ್ಲಿಯೂ ಯೋಜನೆ ಅನುಷ್ಠಾನವಾಗುತ್ತಿದೆ. ಈ ಹಿಂದೆ ಗ್ರಾಮ ಪಂಚಾಯಿತಿಗಳು ಕೊಳವೆಬಾವಿಗಳ ಮೂಲಕ ನಲ್ಲಿ ಸಂಪರ್ಕವನ್ನು ಅನೇಕ ಊರುಗಳಲ್ಲಿ ನೀಡಿದ್ದವು. ನೀರಿನ ಆ ಸಂಪರ್ಕವೇ ಹಲವೆಡೆ ಜೆಜೆಎಂ ಯೋಜನೆಗೂ ಬಳಕೆಯಾಗಿದೆ; ಪೈಪುಗಳು ಮಾತ್ರ ಬದಲಾಗಿವೆ. ಹಲವು ಪ್ರದೇಶಗಳಲ್ಲಿ ಕೊಳವೆಬಾವಿಗಳೇ ನೀರಿನ ಮೂಲವಾಗಿವೆ. ಕೊಳವೆಬಾವಿಗಳು ಬತ್ತಿಹೋದಲ್ಲಿ ಪರ್ಯಾಯ ವ್ಯವಸ್ಥೆಗಳನ್ನು ರೂಪಿಸಲಾಗಿಲ್ಲ.

ಪೈಪುಗಳ ಮೂಲಕ ಮನೆ ಮನೆಗೆ ನೀರನ್ನು ಪೂರೈಸುವುದು ಬಹಳ ದೊಡ್ಡ ಸವಾಲು. ಬೆಂಗಳೂರಿನಲ್ಲಿ ಸೋರಿಕೆಯ ಪ್ರಮಾಣ ಶೇ 29ರಷ್ಟು ಇದೆ ಎಂದು ಬೆಂಗಳೂರು ಜಲಮಂಡಳಿಯೇ ಹೇಳಿಕೊಂಡಿದೆ. ಇಂತಹ ಸನ್ನಿವೇಶದಲ್ಲಿ ಗ್ರಾಮೀಣ ಭಾಗದಲ್ಲಿ ನೀರು ದುರುಪಯೋಗ ಆಗದಂತೆ ಮತ್ತು ಸೋರಿಕೆಯಾಗದಂತೆ ನೋಡಿಕೊಳ್ಳುವುದು ಕಷ್ಟಸಾಧ್ಯ ಎನ್ನುವುದು ಜೆಜೆಎಂ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಕೆಲವು ಅಧಿಕಾರಿಗಳ ಅಳಲು.

ಜೀವಜಲವಾದ ನೀರನ್ನು ಸೃಷ್ಟಿ ಮಾಡಲು ನಮ್ಮಿಂದ ಸಾಧ್ಯವಿಲ್ಲ. ಆದರೆ, ರಾಷ್ಟ್ರೀಯ ಸಂಪತ್ತಾದ ನೀರನ್ನು ಸದ್ಬಳಕೆ ಮಾಡುವ ಮೂಲಕ ಅದು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಸಾಧ್ಯ. ಇದಕ್ಕೆ ಸ್ಥಳೀಯ ಜಲಮೂಲಗಳನ್ನು ರಕ್ಷಿಸುವುದು ಹಾಗೂ ಕೆರೆಗಳ ಸಂರಕ್ಷಣೆಗೆ ಆದ್ಯತೆ ನೀಡುವುದು ಈ ಹೊತ್ತಿನ ತುರ್ತು. ಈ ಕ್ರಮಕ್ಕೆ ಸರ್ಕಾರಗಳು ಮುಂದಾಗಲಿ.

ಚುರುಮುರಿ



100% ಏರಿಕೆ

• ಸುಮಂಗಲಾ

ಬೆಕ್ಕಣ್ಣ ಬೆಳಗಿನಿಂದಲೇ ಧುಸುಮುಸು ನಡೆಸಿತ್ತು. ‘ನಿನಗ ಈ ಸಲ ಪಗಾರ ಎಷ್ಟ್ ಹೆಚ್ಚು ಮಾಡತಾರೆ?’ ಕೇಳಿತು.

‘ಹೋಗಲೇ... ಕೆಲಸದಾಗೆ ಮುಂದುವರಿಸಿದರೆ ಸಾಕಾಗೈತಿ. ಹೈಕು ಅಂತೆಲ್ಲ ಕೇಳಂಗೇ ಇಲ್ಲ’ ಎಂದೆ ಬೇಜಾರಿನಿಂದ.

‘ನಿನಗ ಆಗಲಿ ಬಿಡಲಿ, ನನಗೆ ಕೊಡೂ ಪಾಕೆಟ್ ಮನಿಯನ್ನು ಪಗಾರ ಅಂತ ಪರಿಗಣಿಸಿ, ಅದನ್ನು 100% ಹೆಚ್ಚಿಗೆ ಮಾಡು’ ಎಂದಿತು.

‘ಪಗಾರ ಅಂತಲೇ ಅಂದುಕೊಂಡರೂ 100% ಯಾರು ಹೆಚ್ಚಿಗೆ ಮಾಡತಾರಲೇ? ಎಲ್ಲಾ ಕಂಪನಿವಳಗೂ ಅಬ್ಬಬ್ಬಾ ಅಂದರೆ 10-20% ಅಷ್ಟೇ ಹೆಚ್ಚಿಗೆ ಮಾಡೂದು’ ಎಂದು ವಾದಿಸಿದೆ.

‘ಶಾಸಕರು, ಮಂತ್ರಿಗಳು ತಮ್ಮ ಪಗಾರ 100% ಏರಿಸಿಕೊಂಡಾರಂತೆ. ನಾ ಎಷ್ಟ್ ಕಷ್ಟಬಿದ್ದು ಇಲಿ, ಹೆಗ್ಗಣ ಹಿಡಿತೀನಲ್ಲ... ನನಗೆ 100% ಪಗಾರ ಏರಿಕೆಯ ಹಕ್ಕೈತಿ’ ಎಂದು ಹಕ್ಕೊತ್ತಾಯ ಮಂಡಿಸಿತು.

‘ಪಾಪ, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತೆಯರು ಈ ತುಟ್ಟಿ ದಿನದಾಗೆ 8-10 ಸಾವಿರ ಸಂಬಳದಾಗೆ ಬದುಕೂದು ಕಷ್ಟ, ಹೆಚ್ಚಿಗೆ ಮಾಡ್ರಿ ಅಂದರೆ ಲಾಠಿ ಚಾರ್ಜ್ ಮಾಡತಾರೆ. ತಮಗಾದರೆ 100% ಜಾಸ್ತಿ ಮಾಡಿಕೋತಾರೆ’ ಎಂದೆ ಕೋಪದಿಂದ.

‘ಆಡಳಿತ ಪಕ್ಷ, ವಿರೋಧ ಪಕ್ಷಗಳ ನಾಯಕರು ಕಚ್ಚಾಡದೇ ಬಿಲ್ ಪಾಸ್ ಮಾಡಿದ್ದು ಇದೊಂದೇ ವಿಚಾರಕ್ಕೆ! ತುಟ್ಟಿ ದಿನದಾಗೆ ನಾವೂ ಬದುಕಬೇಕಲ್ಲ ಅಂತ ಒಬ್ಬರು ಮಂತ್ರಿಗಳು ಹೇಳತಾರೆ. ಇನ್ನೊಬ್ಬರು, ಸಂಬಳ ಜಾಸ್ತಿ ಮಾಡಿದರೆ ಭ್ರಷ್ಟಾಚಾರ ಕಡಿಮೆ ಆಗತೈತೆ ಅಂತಾರೆ’ ಎಂದಿತು ಬೆಕ್ಕಣ್ಣ.

‘ಎಡಿಆರ್ ವರದಿ ಪ್ರಕಾರ, ಕರ್ನಾಟಕದ ಎಲ್ಲಾ ಶಾಸಕರ ಆಸ್ತಿ ಒಟ್ಟು ಸೇರಿ ₹ 14,179 ಕೋಟಿ ಅಂತೆ. ರಾಜ್ಯದ 31 ಶಾಸಕರು ಶತಕೋಟ್ಯಧಿಪತಿಗಳು. ಸಂಬಳ ಜಾಸ್ತಿ ಮಾಡೂದ ಇದ್ದರೆ, ಎಲ್ಲಾ ಕೋಟ್ಯಧಿಪತಿಗಳನ್ನು ಬಿಟ್ಟು ಮಾಡಲಿ’ ಎಂದೆ.

‘ಕೋಟ್ಯಧಿಪತಿ ಶಾಸಕರಿಗೆ ಹೆಂಗಿದ್ದರೂ ಈ ಸಂಬಳವೆಲ್ಲ ಜುಜುಬಿ. ಬರೀ ಲಕ್ಷಾಧಿಪತಿ ಶಾಸಕರಿಗಷ್ಟೇ ಬೇಕಾರೆ ಸಂಬಳ ಹೆಚ್ಚಿಗೆ ಮಾಡಲಿ’ ಎಂದು ಬೆಕ್ಕಣ್ಣ ಸಿಟ್ಟಿನಿಂದ ನುಡಿಯಿತು.

ಸಂಗತ

ಕಲಿಕಾ ವಿಷಯ: ಬೇಡ ಕುರುಡು ಆಯ್ಕೆ

ಶಿಕ್ಷಣ ಮತ್ತು ಉದ್ಯೋಗದ ಕುರಿತು ಮಕ್ಕಳಿಗೆ ಹಾಗೂ ಪೋಷಕರಿಗೆ ಸರಿಯಾದ ಸಮಯದಲ್ಲಿ ಮಾರ್ಗದರ್ಶನ ಮಾಡಬೇಕಾದ ಹೊಣೆ ಶಿಕ್ಷಣ ಸಂಸ್ಥೆಗಳ ಮೇಲೆ ಇರುತ್ತದೆ

• ಡಾ. ಮುರಳೀಧರ ಕಿರಣಕೆರೆ

ಗ್ರಾಮೀಣ ಪ್ರದೇಶದ ಪ್ರೌಢಶಾಲೆಯೊಂದರ ಮುಖ್ಯೋಪಾಧ್ಯಾಯರು ಕರೆ ಮಾಡಿದ್ದರು. ಅವರ ಶಾಲೆ ಎಸ್ಎಸ್ಎಲ್‌ಸಿ ಪರೀಕ್ಷಾ ಕೇಂದ್ರವೂ ಹೌದು. ‘ಏಪ್ರಿಲ್ ನಾಲ್ಕಕ್ಕೆ ಎಸ್ಎಸ್ಎಲ್‌ಸಿ ಎಕ್ಸಾಂ ಮುಗಿಯುತ್ತೆ. ಪರೀಕ್ಷೆ ಮುಗಿದ ಮೇಲೆ ಮಕ್ಕಳಿಗೆ ಕಾಲೇಜು ಶಿಕ್ಷಣದಲ್ಲಿ ಲಭ್ಯವಿರುವ ವಿವಿಧ ಕೋರ್ಸ್‌ಗಳು ಮತ್ತು ವಿದ್ಯಾರ್ಥಿ ವೇತನದ ಬಗ್ಗೆ ಒಂದು ಮಾಹಿತಿ ಕಾರ್ಯಕ್ರಮ ನಡೆಸಿಕೊಡಬಹುದಾ?’ ಎಂಬ ಅವರ ಕೋರಿಕೆ ಆಶ್ಚರ್ಯ ತಂದಿತ್ತು. ‘ಮಕ್ಕಳೆಲ್ಲಾ ಪರೀಕ್ಷೆ ಮುಗಿಸಿ, ಒತ್ತಡದಿಂದ ಮುಕ್ತರಾಗಿ ಮನೆಗೆ ಓಡುವ ಸಂಭ್ರಮದಲ್ಲಿರುತ್ತಾರೆ. ಈ ವಿಷಯವನ್ನೆಲ್ಲಾ ಕೇಳೋ ತಾಳ್ಮೆ, ಮನಃಸ್ಥಿತಿ ಎಲ್ಲಿರುತ್ತೆ? ಕೆರಿಯರ್ ಗೈಡೆನ್ಸ್ ಪ್ರೋಗ್ರಾಂ ಮಾಡೋ ಹೊತ್ತಲ್ಲ ಇದು’ ಎಂದೆ.

‘ಇಂತಹ ಮಾರ್ಗದರ್ಶನ ಕಾರ್ಯಕ್ರಮವನ್ನು ಮೊದಲೇ ಮಾಡಬೇಕು ಅಂತ ನಮಗೆ ಸೂಚನೆ ಇರುತ್ತೆ ಸರ್. ಆದರೆ ಪಾಠ ಪ್ರವಚನದ ಒತ್ತಡದ ಮಧ್ಯೆ ಇದನ್ನೆಲ್ಲಾ ಮಾಡೋಕ್ಕೆ ಸಮಯವಿರಲ್ಲ. ಈಗ ಇಟ್ಕೊಂಡ್ರೂ ಕೆಲವರಾದ್ರೂ ಉಪಯೋಗ ಪಡ್ಕೋತಾರೆ’ ಆಶಾಭಾವನೆಯಿತ್ತು ಅವರ ಧ್ವನಿಯಲ್ಲಿ.

ಹೌದು, ಪ್ರೌಢಶಾಲೆ ಮತ್ತು ಪಿಯುಸಿ ಹಂತದಲ್ಲಿರುವವರಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರ ಆಸಕ್ತಿಗೆ ಅನುಗುಣವಾದ ವಿಷಯ ಆಯ್ದುಕೊಳ್ಳುವಲ್ಲಿ ಸಕಾಲಿಕ ಶೈಕ್ಷಣಿಕ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಬಹುತೇಕರಿಗೆ ಕಾಲೇಜು ಹಂತದಲ್ಲಿ ಲಭ್ಯವಿರುವ ವೈವಿಧ್ಯಮಯ ಕೋರ್ಸ್‌ಗಳ ಬಗ್ಗೆ ಸರಿಯಾದ ಅರಿವು ಇರುವುದಿಲ್ಲ. ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಈ ದಿನಗಳಲ್ಲಿ ಬೇಡಿಕೆಯಿರುವ ಕ್ಷೇತ್ರಗಳು, ಬೇಕಿರುವ ವಿದ್ಯಾರ್ಹತೆ, ಅಗತ್ಯ ಕೌಶಲಗಳ ಬಗ್ಗೆ ಮಾಹಿತಿಯ ಕೊರತೆಯಿದೆ. ತಮ್ಮ ಆಸಕ್ತಿ ಏನೆಂದು ಅರಿಯದೆ, ಪೋಷಕರು ಹೇಳಿದ ಇಲ್ಲವೇ ಸ್ನೇಹಿತರು ಆಯ್ದುಕೊಂಡ ಕೋರ್ಸ್‌ಗಳಿಗೆ ಕುರುಡಾಗಿ ಸೇರಿಕೊಳ್ಳುವವರೇ ಬಹು ಮಂದಿ!

ಕೃಷಿ ಕುಟುಂಬದವಳಲ್ಲದಿದ್ದರೂ ಪದವಿಗೆ ಕೃಷಿ ವಿಜ್ಞಾನಕ್ಕೆ ಸೇರಿದ ಆ ಪರಿಚಿತ ಹುಡುಗಿಯ ಆಯ್ಕೆ ನನಗೆ ತುಸು ಆಶ್ಚರ್ಯದ ಜೊತೆಗೆ ಕುತೂಹಲ ತಂದಿತ್ತು. ಇಂತಹದ್ದೊಂದು ನಡೆಗೆ ಆಕೆ ಕೊಟ್ಟ ವಿವರಣೆಯು ಕುರಿಗಳ ವರ್ತನೆ ನೆನಪಿಸುವುದರ ಜೊತೆಗೆ ಭವಿಷ್ಯದ ಬಗ್ಗೆ ಆತಂಕ ಮೂಡಿಸುವಂತೆ ಇತ್ತು! ‘ನನ್ನ ಸ್ನೇಹಿತೆ ಅಗ್ರಿಕಲ್ಚರ್ ಕೋರ್ಸ್‌ಗೆ ಸೇರ್ತೀನಿ ಅಂದಳು. ಅದಕ್ಕೇ ನಮ್ಮ ಗ್ರೂಪ್‌ನ ಏಳೂ ಮಂದಿ ಮಾತನಾಡಿಕೊಂಡು ಒಟ್ಟಿಗೆ ಈ ಕೋರ್ಸಿಗೆ ಸೇರಿದ್ದು’ ಎಂದಿದ್ದಳು ಹೆಮ್ಮೆಯಿಂದ. ಇವರಲ್ಲಿ ಒಬ್ಬರೂ ತಮ್ಮ ಇಷ್ಟಕ್ಕಾಗಲಿ, ಗುರಿ ಸಾಧನೆಗಾಗಲಿ ಈ ವಿಭಾಗವನ್ನು ಆಯ್ದುಕೊಂಡಿರಲಿಲ್ಲ! ಹತ್ತನೆಯ ತರಗತಿ ಮುಗಿಸಿದ, ಆರ್ಥಿಕವಾಗಿ ದುರ್ಬಲನಾಗಿರುವ ಆ ಹುಡುಗ ತನಗೆ ಇಷ್ಟವಿಲ್ಲದಿದ್ದರೂ ತಾಯಿಯ ಒತ್ತಡದಿಂದ ಡಿಪ್ಲೊಮಾ ಸೇರಿದ್ದ. ವಿಷಯಗಳನ್ನು ಅರಗಿಸಿಕೊಳ್ಳಲಾಗದೆ ಒಂದೇ ವರ್ಷಕ್ಕೆ ಕಾಲೇಜು ಬಿಟ್ಟಿದ್ದಷ್ಟೇ ಅಲ್ಲ, ವಿದ್ಯಾಭ್ಯಾಸದ ಬಗ್ಗೆ ಜುಗುಪ್ಸೆ ಹೊಂದಿ, ಯಾರ ಮಾತನ್ನೂ ಕೇಳದೆ ಈಗ ಗಾರೆ ಕೆಲಸಕ್ಕೆ ಹೋಗುತ್ತಿದ್ದಾನೆ.

ಮೊದಲ ಹಂತದಲ್ಲಿ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನದ ಅವಶ್ಯಕತೆ ಮಕ್ಕಳಿಗಿಂತ ಅವರ ಹೆತ್ತವರಿಗೇ ಹೆಚ್ಚಾಗಿರುತ್ತದೆ. ಈಡೇರದ ತಮ್ಮ ಕನಸುಗಳನ್ನು ಮಕ್ಕಳ ಮೂಲಕ ನನಸಾಗಿಸಿಕೊಳ್ಳಲು ಪ್ರಯತ್ನಿಸುವ ಪೋಷಕರೇ ಅಧಿಕ. ಸ್ಥಾನಮಾನ, ಪ್ರತಿಷ್ಠೆಗಾಗಿ ತಮ್ಮ ಆಸೆ, ಆಕಾಂಕ್ಷೆಗಳನ್ನು ಬಲವಂತವಾಗಿ ಹೇರುವವರೂ ಇದ್ದಾರೆ. ಇವರು ತಮ್ಮ ಮಕ್ಕಳ ಇಷ್ಟಾನಿಷ್ಟಗಳನ್ನು ತಿಳಿಯಲು ಹೋಗುವುದಿಲ್ಲ. ತಾವು ಹೇಳಿದ ಕೋರ್ಸನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದು ಒತ್ತಡ ಹಾಕುತ್ತಾರೆ. ಸಾಕಷ್ಟು ಅಂಕಗಳು ಇಲ್ಲದಾಗ ಅಥವಾ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಡೊನೇಷನ್ ಕೊಟ್ಟಾದರೂ ಮಕ್ಕಳನ್ನು ತಮ್ಮ ಬಯಕೆಯ ಕೋರ್ಸ್‌ಗೆ ಸೇರಿಸಿ ಧನ್ಯರಾಗುತ್ತಾರೆ!

ಈ ರೀತಿಯ ಬಲವಂತದ ಹೇರಿಕೆ ಒಮ್ಮೊಮ್ಮೆ ಮಕ್ಕಳ ಭವಿಷ್ಯವನ್ನೇ ಹಾಳು ಮಾಡುತ್ತದೆ. ಕೆಲವರು ಮಧ್ಯದಲ್ಲೇ ಬಿಟ್ಟು ಬೇರೆ ವಿಷಯಗಳನ್ನು ಆಯ್ಕೆ ಮಾಡಿಕೊಂಡು ವಿದ್ಯಾರ್ಥಿ ಜೀವನದ ಅಮೂಲ್ಯ ಸಮಯವನ್ನು ಹಾಳು ಮಾಡಿಕೊಂಡರೆ, ಓದುವುದನ್ನೇ ಕೈಬಿಡುವವರೂ ಇದ್ದಾರೆ. ಒಂದು ವೇಳೆ ಉದ್ಯೋಗ ಹಿಡಿದರೂ ತಮಗಿಷ್ಟವಿಲ್ಲದ ಕ್ಷೇತ್ರದಲ್ಲಿ ಮನಃಪೂರ್ವಕವಾಗಿ ಕೆಲಸ ಮಾಡುವುದಾದರೂ ಹೇಗೆ ಸಾಧ್ಯ?



ಮೊದಲು ಮಕ್ಕಳ ಆಕಾಂಕ್ಷೆ, ಅಭಿರುಚಿಯ ಬಗ್ಗೆ ಪೋಷಕರು ವಿಚಾರಿಸಬೇಕು. ‘ನಿನಗೇನು ತಿಳಿಯುತ್ತದೆ, ಇನ್ನೂ ಸಣ್ಣ ವಯಸ್ಸು’ ಎಂಬ ಧೋರಣೆ ಖಂಡಿತ ಸಲ್ಲದು. ಮಕ್ಕಳಿಗೆ ಗುರಿಯೇ ಇಲ್ಲದಾಗ, ಮುಂದಿನ ವಿದ್ಯಾಭ್ಯಾಸದ ಬಗ್ಗೆ ಗೊಂದಲವಿದ್ದಾಗ ಹೆತ್ತವರು ಅವರ ಇಚ್ಛೆ, ಬಯಕೆ, ಆತಂಕವನ್ನು ತಿಳಿದುಕೊಂಡು ಸರಿಯಾದ ಸಲಹೆ, ಬೆಂಬಲ ನೀಡಬೇಕು. ಹಾಗೆಂದು ಆಯ್ಕೆಯ ಜವಾಬ್ದಾರಿಯನ್ನು ಎಳೆಯರ ಮೇಲೆಯೇ ಪೂರ್ಣವಾಗಿ ಬಿಡುವಂತೆಯೂ ಇಲ್ಲ. ಮಕ್ಕಳಿಗೆ ಸಿನಿಮಾ, ಕ್ರಿಕೆಟ್‌ನಂತಹ ಕ್ಷೇತ್ರಗಳಲ್ಲಿ ಹುಚ್ಚು ಜಾಸ್ತಿ. ಅವರನ್ನು ಪ್ರೋತ್ಸಾಹಿಸುವ ಮುನ್ನ ಅಪಾಯಗಳು, ಸಾಧಕ-ಬಾಧಕಗಳನ್ನು ತಿಳಿಸಿ ಹೇಳುವ ಜೊತೆಗೆ ಅಪೇಕ್ಷಿತ ಶೈಕ್ಷಣಿಕ ಮಟ್ಟದ ಬಗ್ಗೆಯೂ ಮನದಟ್ಟು ಮಾಡಿಸಬೇಕು.

ಮಕ್ಕಳು, ಪೋಷಕರಿಗೆ ಶಿಕ್ಷಣ, ಉದ್ಯೋಗದ ಕುರಿತು ಸಕಾಲದಲ್ಲಿ ಮಾರ್ಗದರ್ಶನ ಮಾಡುವುದರಿಂದ ಕಲಿಕೆ ಉತ್ತಮವಾಗುತ್ತದೆ. ಶೈಕ್ಷಣಿಕ ವೈಫಲ್ಯ, ಶಾಲೆ-ಕಾಲೇಜುಗಳಿಂದ ಹೊರಗುಳಿಯುವ ಅಪಾಯ, ನಿರುದ್ಯೋಗ ಕಡಿಮೆಯಾಗುತ್ತದೆ. ವೃತ್ತಿಯಲ್ಲಿನ ಸೋಲು, ಒತ್ತಡ ಗಣನೀಯವಾಗಿ ತಗ್ಗುತ್ತವೆ. ಇಷ್ಟಪಟ್ಟು ಕೆಲಸ ಮಾಡುವುದರಿಂದ ಆಯಾ ಕ್ಷೇತ್ರಕ್ಕೂ ಲಾಭವಾಗಿ ಉತ್ಪಾದಕತೆ ಹೆಚ್ಚುತ್ತದೆ. ಇಂತಹ ದಾರಿ ತೋರುವ ಹೊಣೆಗಾರಿಕೆ ಶಿಕ್ಷಣ ಸಂಸ್ಥೆಗಳ ಮೇಲೆಯೇ ಇದೆ.

ವಾಚಕರ ವಾಣಿ

ಹನಿಟ್ರ್ಯಾಪ್: ಸಿಬಿಐ ತನಿಖೆ ನಡೆಯಲಿ

ರಾಜ್ಯದ 48ಕ್ಕೂ ಹೆಚ್ಚು ಮಂದಿ ವಿವಿಧ ಪಕ್ಷಗಳ ನಾಯಕರು, ಗಣ್ಯರು ಹಾಗೂ ಇತರ ಪ್ರಭಾವಿಗಳು ಹನಿಟ್ರ್ಯಾಪ್‌ನಲ್ಲಿ ಸಿಲುಕಿದ್ದಾರೆ ಎಂದು ಸಹಕಾರ ಸಚಿವ ರಾಜಣ್ಣ ಅವರು ಹೇಳಿರುವುದು ರಾಜ್ಯದಾದ್ಯಂತ ತಲ್ಲಣವನ್ನು ಉಂಟುಮಾಡಿದೆ. ಈ ಆರೋಪ ಮಾಡಿರುವವರು ಒಬ್ಬ ಪ್ರಭಾವಿ ಸಚಿವ ಹಾಗೂ ಮುಖ್ಯಮಂತ್ರಿಯವರ ಪರಮಾಪ್ತರಲ್ಲಿ ಒಬ್ಬರಾಗಿದ್ದಾರೆ. ಹನಿಟ್ರ್ಯಾಪ್‌ನಂತಹ ಹೀನ ದಂಧೆಯಲ್ಲಿ ಕೆಲವು ಪ್ರಮುಖ ರಾಜಕಾರಣಿಗಳು ತೊಡಗಿಸಿಕೊಂಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಈ ಪ್ರಕರಣ ತುಂಬಾ ಗಂಭೀರವಾಗಿರುವುದರಿಂದ ಹಾಗೂ ಕೆಲವು ಸಚಿವರೇ ಭಾಗಿಯಾಗಿದ್ದಾರೆ ಎಂದು ಹೇಳಲಾಗುತ್ತಿರುವುದರಿಂದ ಪ್ರಕರಣವನ್ನು ರಾಜ್ಯ ಸರ್ಕಾರ ಸ್ವಯಂಪ್ರೇರಿತವಾಗಿ ಸಿಬಿಐ ತನಿಖೆಗೆ ಒಳಪಡಿಸಬೇಕು. ಈ ದಂಧೆಯಲ್ಲಿ ಭಾಗಿಯಾಗಿರುವವರ ಮುಖವಾಡ ಕಳಚಬೇಕು.

ಕೆ.ವಿ.ವಾಸು, ಮೈಸೂರು

ಬಂದ್ ಕರೆಯ ಅಗತ್ಯ ಇತ್ತೇ?

ವಾಟಾಳ್ ಪಕ್ಷ ಮತ್ತು ಕೆಲವು ಕನ್ನಡಪರ ಸಂಘಟನೆಗಳು ಶನಿವಾರ ನೀಡಿದ್ದ ‘ಕರ್ನಾಟಕ ಬಂದ್’ ಕರೆಗೆ ಜನರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬಂದ್ ಕುರಿತ ನಿರ್ಧಾರಕ್ಕೆ ಸಂಘಟನೆಗಳಲ್ಲಿಯೇ ಒಮ್ಮತ ಇರಲಿಲ್ಲ ಎನ್ನುವುದು ಕಂಡುಬರುತ್ತದೆ. ಈ ಬಂದ್ ಕರೆಯಿಂದ ‘ಅಂಗೈ ತೋರಿಸಿ ಅವಲಕ್ಷಣ’ ಎಂದು ಅನ್ನಿಸಿಕೊಂಡಂತೆ ಆಗಿದೆ. ಅಷ್ಟಕ್ಕೂ ಈಗ ಬಂದ್‌ನ ಅವಶ್ಯಕತೆ ಇತ್ತೇ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಬಂದ್ ಕರೆಗೆ ನೀಡಿದ್ದ ಕಾರಣಗಳಲ್ಲಿ, ಬೆಳಗಾವಿಯಲ್ಲಿ ಎಂಇಎಸ್ ಮಾಡಿದ ಪುಂಡಾಟಕ್ಕೆ ವಿರೋಧ ವ್ಯಕ್ತಪಡಿಸುವುದೂ ಒಂದಾಗಿತ್ತು. ಇಂತಹ ಪುಂಡಾಟಕ್ಕೆ ಅಲ್ಲಿಯೇ ಅವರನ್ನು ಹೆಡೆಮುರಿ ಕಟ್ಟಬೇಕು. ಆದರೆ ಇಡೀ ಕರ್ನಾಟಕಕ್ಕೆ ಬಂದ್ ಬೇಕಿರಲಿಲ್ಲ. ಅದರಲ್ಲೂ ಆ ಪ್ರಕರಣ ನಡೆದು ಸುಮಾರು ಇಪ್ಪತ್ತು ದಿನಗಳೇ ಆಗಿಹೋಗಿದ್ದವು. ಇಂತಹ ಪ್ರಕರಣಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಹಾಗೆಂದು ಬಂದ್ ಮಾಡುವುದೇ ಪರಿಹಾರ ಅಲ್ಲ.

ಬಂದ್‌ಗೆ ದೊರೆತ ನೀರಸ ಪ್ರತಿಕ್ರಿಯೆಯನ್ನು ನೋಡಿದರೆ, ಜನರಿಗೆ ಇದು ಬೇಕಿರಲಿಲ್ಲ, ಸಂಘಟಕರಿಗೆ ಮಾತ್ರ ಬೇಕಿತ್ತೇನೋ ಎಂಬ ಅನುಮಾನ ಮೂಡುತ್ತದೆ. ಯಾರೇ ಆಗಲಿ ಬಂದ್ ಕರೆ ನೀಡುವುದಕ್ಕೂ ಮುನ್ನ ಸರಿಯಾಗಿ ಚಿಂತಿಸಲಿ. ಬಂದ್ ಮಾಡಿದರೆ, ಅದರ ಯಶಸ್ಸನ್ನು ಕಂಡು ಸರ್ಕಾರ ಕೂಡಲೇ ಒಂದು ನಿರ್ಧಾರಕ್ಕೆ ಬರುವಂತೆ ಆಗಬೇಕು. ಇಲ್ಲವಾದರೆ ಬಂದ್ ನಡೆಸಿ ಪ್ರಯೋಜನ ಇರದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕನ್ನಡ ಶಿಕ್ಷಕರ ನೇಮಕ: ಅಲಕ್ಷ್ಯ ಸಲ್ಲ

‘ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಪಠ್ಯವನ್ನು ಅನ್ಯವಿಷಯ ತಜ್ಞರು ಬೋಧಿಸುತ್ತಿರುವುದು ವೃತ್ತಿ ಶಿಕ್ಷಣದಲ್ಲಿ ಕನ್ನಡದ ಉಳಿವಿಗೆ ಮಾರಕ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 23). ಸರ್ಕಾರಿ ಪ್ರೌಢಶಾಲೆಗಳಲ್ಲಿ ಇಂಗ್ಲಿಷ್ ಅಥವಾ ವಿಜ್ಞಾನ ಶಿಕ್ಷಕರ ಹುದ್ದೆಗಳು ಖಾಲಿಯಾದರೆ ತಕ್ಷಣ ಆ ಹುದ್ದೆಗಳನ್ನು ಭರ್ತಿ ಮಾಡಲು ಸಂಸ್ಥೆಯವರು ಮುತುವರ್ಜಿ ವಹಿಸುತ್ತಾರೆ. ಆದರೆ ಕನ್ನಡ ಶಿಕ್ಷಕ ಹುದ್ದೆ ಖಾಲಿ ಬಿದ್ದರೆ, ಅದನ್ನು ಭರ್ತಿ ಮಾಡಲು ಕಾಳಜಿ ವಹಿಸುವುದಿಲ್ಲ. ಏಕೆಂದರೆ ಕನ್ನಡ ಬಲ್ಲ ಯಾವುದೇ ಶಿಕ್ಷಕ ಆ ಹುದ್ದೆಯ ಕಾರ್ಯಭಾರವನ್ನು ನಿರ್ವಹಿಸಬಲ್ಲ ಎಂಬ ಉದಾಸೀನ ಭಾವನೆ ಅವರಲ್ಲಿ ಇರುತ್ತದೆ.

ಕೆಲವು ಖಾಸಗಿ ಶಾಲೆಗಳಲ್ಲಿ ಕನ್ನಡ ಶಿಕ್ಷಕನ ನೇಮಕ ಆತನ ವಿದ್ಯಾರ್ಹತೆಯ ಮೇಲೆ ನಡೆಯದೆ, ಆತನು ಒಪ್ಪುವ ಅಲ್ಪ ವೇತನದ ಮೇಲೆ ನಡೆಯುತ್ತದೆ. ಅಷ್ಟಕ್ಕೂ ಕನ್ನಡ ಶಿಕ್ಷಕನನ್ನು ನೇಮಕ ಮಾಡಿಕೊಳ್ಳಲೇಬೇಕು ಅಂತೇನೂ ಇಲ್ಲ. ಆ ಕೆಲಸವನ್ನು ಹಿಂದಿ ಶಿಕ್ಷಕನ ತಲೆಗೋ ಸಂಸ್ಕೃತ ಶಿಕ್ಷಕನ ತಲೆಗೋ ಕಟ್ಟಿದರಾಯಿತು ಎಂಬ ಅತ್ಯಂತ ಕೆಟ್ಟ ಧೋರಣೆ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಇದೆ. ನನಗೆ ಪರಿಚಯದ ಪ್ರತಿಷ್ಠಿತ ತರಬೇತಿ ಸಂಸ್ಥೆಯೊಂದರಲ್ಲಿ ‘ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆ’ ವಿಷಯದ ಕುರಿತು ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಯು ಅಲ್ಪಪ್ರಾಣ, ಮಹಾಪ್ರಾಣದ ವ್ಯತ್ಯಾಸ ಗೊತ್ತಿರದ, ಕಡತಗಳಲ್ಲಿ ರೂಢಿಗತವಾಗಿ ಬಳಕೆಯಾಗುತ್ತಿರುವ ಕನ್ನಡ ಪದಗಳಲ್ಲಿ ಸರಿ-ತಪ್ಪು ಗುರುತಿಸಲು ಅಸಮರ್ಥನಾದ ವಿಜ್ಞಾನದ ಪದವೀಧರ. ಇಂಥ ಪರಿಸ್ಥಿತಿಗೆ ಇತಿಶ್ರೀ ಹಾಡಲೇಬೇಕಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಚೆಂಡಿನ ಮೇಲೆ ಎಂಜಲು: ಅಸಹ್ಯಕರ ನಡೆ

ಕ್ರಿಕೆಟ್ ಆಡುವಾಗ ಚೆಂಡಿನ ಮೇಲೆ ಎಂಜಲಿನ ಬಳಕೆಗೆ ಕೋವಿಡ್ ಸಮಯದಲ್ಲಿ ಹೇರಿದ್ದ ನಿಷೇಧವನ್ನು ಪ್ರಸಕ್ತ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ- 20 ಕ್ರಿಕೆಟ್ ಟೂರ್ನಿಯ ಸಂದರ್ಭದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತೆರವುಗೊಳಿಸಿರುವ ಸುದ್ದಿ (ಪ್ರ.ವಾ., ಮಾರ್ಚ್ 21) ಓದಿ ಆಶ್ಚರ್ಯ ಆಯಿತು. ಕ್ರಿಕೆಟ್ ಚೆಂಡಿಗೆ ಬೌಲರ್‌ಗಳು ಪದೇ ಪದೇ ಎಂಜಲು ಬಳಸಿ ಉಜ್ಜುತ್ತಿದ್ದ ಕ್ರಿಯೆ ಬಹಳ ಅಸಹ್ಯಕರವಾಗಿತ್ತು. ಹಿಂದೆಲ್ಲ ಬಸ್ ಕಂಡಕ್ಟರ್‌ಗಳು ಟಿಕೆಟ್ ಹರಿಯಲು ಎಂಜಲು ಬಳಸುತ್ತಿದ್ದುದು ಟೀಕೆಗೆ ಗುರಿಯಾಗಿತ್ತು. ಈಗ ಯಂತ್ರ ಬಳಕೆಯಿಂದ ಅದು ನಿವಾರಣೆಯಾಗಿದೆ.

ಲೋಕಸಭಾ ಟಿ.ವಿ.ಯಲ್ಲಿ ಇತ್ತೀಚೆಗೆ ಪ್ರಸಾರವಾದ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಿದ್ದ ಸದಸ್ಯರೊಬ್ಬರು ಐದಾರು ಹಾಳೆಗಳನ್ನು ಹಿಡಿದು ಓದುತ್ತಿದ್ದರು. ಆದರೆ ಪ್ರತಿ ಹಾಳೆ ತೆಗೆಯಲು ಎಂಜಲು ಬಳಸುತ್ತಿದ್ದರು. ಇದನ್ನು ನೋಡಿ ಎಲ್ಲ ಸದಸ್ಯರ ಮೇಜಿನ ಮೇಲೆ ಒಂದೊಂದು ಸ್ಪಾಂಜ್ ಬಟ್ಟಲನ್ನು ಇಟ್ಟರೆ ಒಳ್ಳೆಯದು ಎನಿಸಿತು.

ಕೋವಿಡ್ ಕಾರಣದಿಂದ ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿದೆ. ಕೆಲವು ಸೋಂಕುಗಳನ್ನು ತಡೆಯಲು ಕೂಡ ಇಂತಹ ನಿಷೇಧ ಸಹಕಾರಿಯಾಗಿದೆ. ಎಂಜಲು ಬಳಸುವುದು, ಕ್ರೀಡಾಂಗಣದಲ್ಲಿ ಪದೇ ಪದೇ ಉಗುಳುವುದು ವೀಕ್ಷಕರಿಗೆ ಅಸಹ್ಯಕರ ಭಾವನೆ ಉಂಟು ಮಾಡುತ್ತದೆ. ಆದ್ದರಿಂದ ನಿಷೇಧ ತೆಗೆಯದಂತೆ ಆರೋಗ್ಯ ಇಲಾಖೆಯು ಬಿಸಿಸಿಐಗೆ ನಿರ್ದೇಶನ ನೀಡಲಿ.

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.


ತೆಲಂಗಾಣದಲ್ಲಿ ಎಸ್‌ಸಿ ಒಳಮೀಸಲಾತಿ ಮಸೂದೆ ಅಂಗೀಕಾರ; ಆಂಧ್ರದಲ್ಲಿಯೂ ಜಾರಿಗೆ ಒಪ್ಪಿಗೆ

ಒಳಮೀಸಲು ತೆಲುಗು ರಾಜ್ಯಗಳ ಮುನ್ನಡಿ

ದೇಶದಲ್ಲಿ ಪರಿಶಿಷ್ಟ ಜಾತಿಗಳ (ಎಸ್‌ಸಿ) ಒಳಮೀಸಲಾತಿ ಹೋರಾಟಕ್ಕೆ ಹೊಸ ದಿಕ್ಕು ನೀಡಿದ್ದೇ ಅವಿಭಜಿತ ಆಂಧ್ರ ಪ್ರದೇಶದ ಮಾದಿಗ ಸಮುದಾಯ. ಮೂರು ದಶಕಗಳ ಅವರ ಹೋರಾಟಕ್ಕೆ ಇದೀಗ ಫಲ ಸಿಕ್ಕಿದೆ. ತೆಲಂಗಾಣ ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಎಸ್‌ಸಿ ಒಳಮೀಸಲಾತಿ ನೀಡುವ ದಿಸೆಯಲ್ಲಿ ನಿರ್ಣಾಯಕ ಹೆಜ್ಜೆ ಇಟ್ಟಿವೆ. ಇದೇ ವೇಳೆ, ಕಾನೂನು ತೊಡಕು, ನಿಖರ ದತ್ತಾಂಶದ ವಿಚಾರಗಳು ಮತ್ತೆ ಮುನ್ನೆಲೆಗೆ ಬಂದಿದ್ದು, ಒಳಮೀಸಲಾತಿ ಪ್ರಕ್ರಿಯೆ ತಾರ್ಕಿಕ ಅಂತ್ಯ ಕಾಣುವುದೇ ಎನ್ನುವ ಪ್ರಶ್ನೆಗಳು ಉದ್ಭವಿಸಿವೆ

• ಬಿ.ವಿ.ಶ್ರೀನಾಥ್

ತೆಲಂಗಾಣದ ಎ.ರೇವಂತ್ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರವು ಎಸ್‌ಸಿ ಒಳಮೀಸಲಾತಿ ಜಾರಿಗೆ ಮುಂದಡಿ ಇಟ್ಟಿದೆ. ಪರಿಶಿಷ್ಟ ಜಾತಿಯ ಮಾದಿಗರು ಸೇರಿದಂತೆ ಇತರ ಅತಿ ಹಿಂದುಳಿದ ಉಪಜಾತಿಗಳಿಗೆ ಪ್ರಾತಿನಿಧ್ಯ ಕಲ್ಪಿಸಲು 'ತೆಲಂಗಾಣ ಪರಿಶಿಷ್ಟ ಜಾತಿಗಳ (ಮೀಸಲಾತಿ ತರ್ಕಬದ್ಧಗೊಳಿಸುವಿಕೆ) ಮಸೂದೆ-2025' ಅನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಗಿದೆ. ತೆಲಂಗಾಣದಲ್ಲಿ ಎಸ್‌ಸಿ ಪಟ್ಟಿಯಲ್ಲಿ 59 ಉಪಜಾತಿಗಳಿದ್ದು, ಜನಸಂಖ್ಯೆ, ಹಿಂದುಳಿದಿರುವಿಕೆ ಆಧಾರದಲ್ಲಿ ಅವನ್ನು ಮೂರು ಗುಂಪುಗಳನ್ನಾಗಿ ಮಾಡಿ ಮೀಸಲಾತಿ ಹಂಚಿಕೆ ಮಾಡಲಾಗಿದೆ ಎಂದು ಸರ್ಕಾರ ತಿಳಿಸಿದೆ.



ಎಸ್‌ಸಿ ಒಳಮೀಸಲಾತಿಗೆ ಸಂಬಂಧಿಸಿದಂತೆ ಇ.ವಿ.ಚಿನ್ನಯ್ಯ ಮತ್ತು ಆಂಧ್ರ ಪ್ರದೇಶ ಸರ್ಕಾರದ ನಡುವಿನ ಪ್ರಕರಣದಲ್ಲಿ ತೀರ್ಪು ನೀಡಿದ್ದ (2024ರ ಆಗಸ್ಟ್ 1) ಸುಪ್ರೀಂ ಕೋರ್ಟ್, ಒಳಮೀಸಲಾತಿ ನೀಡುವ ಸಾಂವಿಧಾನಿಕ ಅಧಿಕಾರ


ಎ.ರೇವಂತ್ ರೆಡ್ಡಿ

ರಾಜ್ಯಗಳಿಗೆ ಇದೆ ಎಂದಿತ್ತು. ಈ ತೀರ್ಪಿನ ನಂತರ ಶಾಸನಬದ್ಧವಾಗಿ ಎಸ್‌ಸಿ ಒಳಮೀಸಲಾತಿ ಕಲ್ಪಿಸಿದ ಮೊದಲ ರಾಜ್ಯ ಎಂದು ತೆಲಂಗಾಣ ಹೆಸರಾಗಿದೆ.

ಸುಪ್ರೀಂ ಕೋರ್ಟ್‌ನ ತೀರ್ಪಿಗೆ ಅನುಗುಣವಾಗಿ ತೆಲಂಗಾಣ ಸರ್ಕಾರವು ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಶಮೀಮ್ ಅಖ್ತರ್ ಅವರ ನೇತೃತ್ವದಲ್ಲಿ ನ್ಯಾಯಾಂಗ ಆಯೋಗವನ್ನು ರಚಿಸಿತ್ತು. ಆಯೋಗವು ಎಸ್‌ಸಿ ಪಟ್ಟಿಯಲ್ಲಿ ಬರುವ 59 ಉಪಜಾತಿಗಳ ಜನಸಂಖ್ಯೆ, ಸಾಕ್ಷರತೆ, ಉದ್ಯೋಗ, ಶಿಕ್ಷಣ, ನೇಮಕಾತಿ, ಆರ್ಥಿಕ ಸೌಲಭ್ಯ ಮತ್ತು ರಾಜಕೀಯ ಪ್ರಾತಿನಿಧ್ಯ ಮುಂತಾದ ಅಂಶಗಳನ್ನು ಒಳಗೊಂಡ ದತ್ತಾಂಶವನ್ನು ಸಂಗ್ರಹಿಸಿತು. ಅದನ್ನು ಆಧರಿಸಿ ಎಸ್‌ಸಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ, ಒಳಮೀಸಲಾತಿ ಕಲ್ಪಿಸಬೇಕೆಂದು ತೆಲಂಗಾಣ ಸರ್ಕಾರದ ನೀರಾವರಿ ಸಚಿವ ಉತ್ತಮ್ ಕುಮಾರ್ ರೆಡ್ಡಿ ನೇತೃತ್ವದ ಸಂಪುಟ ಉಪಸಮಿತಿಗೆ ಫೆಬ್ರುವರಿಯಲ್ಲಿ ವರದಿ ಸಲ್ಲಿಸಿತು. ಅದರ ಆಧಾರದಲ್ಲಿ ಸಚಿವ ಸಂಪುಟದಲ್ಲಿ ಮಸೂದೆಯನ್ನು ಮಂಡಿಸಿ, ಅಂಗೀಕರಿಸಲಾಗಿದೆ. 2011ರ ಜನಗಣತಿಯ ಆಧಾರದಲ್ಲಿ ಎಸ್‌ಸಿ ಮೀಸಲಾತಿ ಪ್ರಮಾಣವು ಶೇ 15ರಷ್ಟಿದ್ದು, ಅದರ ಪ್ರಕಾರ ಸದ್ಯ ಹಂಚಿಕೆ ಮಾಡಲಾಗಿದೆ.

2026ರ ಜನಗಣತಿಯ ವರದಿ ಬಂದ ನಂತರ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವುದಾಗಿ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹೇಳಿದ್ದಾರೆ.

ತೆಲಂಗಾಣ: ಎಸ್‌ಸಿ ಜನಸಂಖ್ಯೆಯಲ್ಲಿ ಯಾರಿಗೆ ಎಷ್ಟು ಮೀಸಲಾತಿ?



ಮಿತಿ ಹೆಚ್ಚಳಕ್ಕೆ ಸಿಗುವುದೇ ಸಮ್ಮತಿ?

ಎಸ್‌ಸಿ ಒಳ ಮೀಸಲಾತಿ ಮಸೂದೆ ಅಂಗೀಕರಿಸಿದ್ದರ ಜತೆಗೆ ತೆಲಂಗಾಣ ಸರ್ಕಾರವು 'ತೆಲಂಗಾಣ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು (ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಮೀಸಲಾತಿ) 2025' ಮಸೂದೆಯನ್ನು ಅಂಗೀಕರಿಸಿದೆ. ಇದರ ಮೂಲಕ ಹಿಂದುಳಿದ ವರ್ಗಗಳ (ಬಿಸಿ) ಮೀಸಲಾತಿಯನ್ನು ಶೇ 42ಕ್ಕೆ, ಎಸ್‌ಸಿ ಮೀಸಲಾತಿಯನ್ನು ಶೇ 18ಕ್ಕೆ ಮತ್ತು ಎಸ್‌ಟಿ ಮೀಸಲಾತಿಯನ್ನು ಶೇ 10ಕ್ಕೆ ಹೆಚ್ಚಳ ಮಾಡಿದೆ. ಸದ್ಯ ಬಿಸಿಗಳಿಗೆ ಶೇ 29, ಎಸ್‌ಸಿಗಳಿಗೆ ಶೇ 15 ಮತ್ತು ಎಸ್‌ಟಿಗಳಿಗೆ ಶೇ 6ರಷ್ಟು ಮೀಸಲಾತಿ ಇದೆ.

ಈ ಮಸೂದೆಯಿಂದ ತೆಲಂಗಾಣದಲ್ಲಿ ಮೀಸಲಾತಿ ಪ್ರಮಾಣವು ಶೇ 70ಕ್ಕೆ ಏರಲಿದೆ. ಆದರೆ, ಮೀಸಲಾತಿಯ ಮಿತಿ ಶೇ 50 ಅನ್ನು ಮೀರಬಾರದು ಎಂದು 1992ರಲ್ಲಿ ಇಂದಿರಾ ಸಹಾನಿ ಮತ್ತು ಕೇಂದ್ರ ಸರ್ಕಾರದ ನಡುವಣ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಹೀಗಾಗಿ, ತೆಲಂಗಾಣ ಸರ್ಕಾರದ ಈ ಮಸೂದೆಗೆ ಕಾನೂನಿನ ತೊಡಕು ಎದುರಾಗುವ ಸಂಭವ ಇದೆ. ಬಿಹಾರದ ನಿತೀಶ್ ಕುಮಾರ್ ಸರ್ಕಾರವು ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿಯನ್ನು ಶೇ 65ಕ್ಕೆ ಏರಿಸಿದಾಗ ಅದನ್ನು ಪಟ್ನಾ ಹೈಕೋರ್ಟ್ ಅಸಾಂವಿಧಾನಿಕ ಎಂದು ರದ್ದುಪಡಿಸಿತ್ತು. ಇದೇ ರೀತಿ ಮರಾಠಾ ಮೀಸಲಾತಿ ಮಸೂದೆ, ಛತ್ತೀಸಗಢದ ಮೀಸಲಾತಿ ಮಸೂದೆಗಳು ರದ್ದಾಗಿದ್ದವು.

1992ರ ಸುಪ್ರೀಂ ಕೋರ್ಟ್ ಆದೇಶದ ಹೊರತಾಗಿಯೂ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿ, ಅದನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದು ತಮಿಳುನಾಡು. ಜಯಲಲಿತಾ ನೇತೃತ್ವದ ಎಐಎಡಿಎಂಕೆ ಸರ್ಕಾರವು ಮೀಸಲಾತಿ ಪ್ರಮಾಣವನ್ನು ಶೇ 69ಕ್ಕೆ ಹೆಚ್ಚಿಸಿ, ಅದನ್ನು ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಸೇರಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಿ, ಅದರಲ್ಲಿ ಯಶಸ್ವಿಯಾಗಿತ್ತು. ಈ ಮಾರ್ಗವೂ ತೆಲಂಗಾಣದ ಮುಂದಿದೆ.

ರೇವಂತ್ ರೆಡ್ಡಿ ಸರ್ಕಾರವು ಮತ್ತೊಂದು ಮಸೂದೆಯನ್ನೂ ಮಂಡಿಸಿ ಅಂಗೀಕಾರ ಪಡೆದುಕೊಂಡಿದೆ. 'ತೆಲಂಗಾಣ ಹಿಂದುಳಿದ ವರ್ಗಗಳು (ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ) ಮಸೂದೆ 2025' ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಶೇ 42ರಷ್ಟು ಮೀಸಲಾತಿ ಕಲ್ಪಿಸುತ್ತದೆ.



ಹರಿಯಾಣ ಮೊದಲು

1994ರಲ್ಲಿ ಮೊದಲ ಬಾರಿಗೆ ಪರಿಶಿಷ್ಟ ಜಾತಿಯ ಉಪಪಂಗಡಗಳಲ್ಲಿ ಒಳಮೀಸಲಾತಿ ಜಾರಿ ಮಾಡಿದ ರಾಜ್ಯ ಹರಿಯಾಣ. 2006ರಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಅದನ್ನು ರದ್ದುಪಡಿಸಿತ್ತು. ನಂತರ ಈ ವಿಚಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ, ಒಳಮೀಸಲಾತಿ ಪರವಾದ ತೀರ್ಪು ಬಂತು. ಸುಪ್ರೀಂ ಕೋರ್ಟ್ ತೀರ್ಪಿನ ನಂತರವೂ ಎಸ್‌ಸಿ ಒಳಮೀಸಲಾತಿ ನೀಡಿದ ಮಾಡಿದ ಮೊದಲ ರಾಜ್ಯ ಹರಿಯಾಣ.


2024ರ ವಿಧಾನಸಭಾ ಚುನಾವಣೆಯಲ್ಲಿ ವಾಲ್ಮೀಕಿ ಮತ್ತು ಇತರ ಪ್ರಬಲ ಎಸ್‌ಸಿ ಉಪಜಾತಿಗಳು ಕಾಂಗ್ರೆಸ್ ಅನ್ನು ಬೆಂಬಲಿಸಿದ್ದರೆ, ಉಳಿದ, ಅಷ್ಟೇನೂ ಪ್ರಬಲವಲ್ಲದ ಎಸ್‌ಸಿ ಉಪಜಾತಿಗಳ ಹೆಚ್ಚು ಮಂದಿ ಬಿಜೆಪಿಯನ್ನು ಬೆಂಬಲಿಸಿದ್ದರು. ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದ ಬಿಜೆಪಿ, ತನ್ನ ಮೊದಲ ಸಂಪುಟ ಸಭೆಯಲ್ಲೇ ಒಳಮೀಸಲಾತಿ ಜಾರಿ ಮಾಡಿತು. ಎಸ್‌ಸಿ ಉಪಜಾತಿಗಳನ್ನು 'ವಂಚಿತ ಎಸ್‌ಸಿ ಉಪಜಾತಿಗಳು' (ಡಿಎಸ್‌ಸಿ), 'ಇತರೆ ಎಸ್‌ಸಿ ಉಪಜಾತಿಗಳು' (ಒಎಸ್‌ಸಿ) ಎಂದು ವರ್ಗೀಕರಿಸಿ, ಶೇ 20ರ ಮೀಸಲಾತಿಯನ್ನು ಎರಡೂ ಗುಂಪುಗಳಿಗೆ ಸಮನಾಗಿ ಹಂಚಿತು. ರಾಜ್ಯ ಪರಿಶಿಷ್ಟ ಜಾತಿ ಆಯೋಗದ ವರದಿಯ ಅನ್ವಯ ಡಿಎಸ್‌ಸಿ ಗುಂಪಿಗೆ ಶೇ 10ರ ಮೀಸಲಾತಿ ಕಲ್ಪಿಸಿತು.

ಹರಿಯಾಣದಲ್ಲಿ ಶೇ 20.2ರಷ್ಟು ದಲಿತರಿದ್ದಾರೆ. ಈ ಪೈಕಿ ಜಾಟವರು (ಚಮ್ಮಾರರು ಕೂಡ ಇದೇ ಗುಂಪಿಗೆ ಸೇರಿದವರು) ಪ್ರಬಲರಾಗಿದ್ದು, ಒಟ್ಟು ಎಸ್‌ಸಿ ಜನಸಂಖ್ಯೆಯಲ್ಲಿ ಅವರ ಪ್ರಮಾಣ ಶೇ 50 ಆಗಿದೆ. ಅದರ ಜತೆಗೆ, ವಾಲ್ಮೀಕಿ ಶೇ 25–ಶೇ 30 ಇದ್ದರೆ, ಧಾನಕ್‌ಗಳು ಶೇ 10ರಷ್ಟು ಇದ್ದಾರೆ. ಉಳಿದ ಎಸ್‌ಸಿ ಜನಸಂಖ್ಯೆಯಲ್ಲಿ 34 ಸಣ್ಣ ಉಪಜಾತಿಗಳು ಸೇರಿವೆ.

ಯಾವುದೇ ನಿಖರ, ವೈಜ್ಞಾನಿಕ ದತ್ತಾಂಶ ಇಲ್ಲದೇ ಹರಿಯಾಣ ಸರ್ಕಾರವು ಎಸ್‌ಸಿ ಒಳಮೀಸಲಾತಿ ನೀಡಿದೆ ಎಂದು 'ಹರಿಯಾಣ ಪ್ರದೇಶ ಚಮ್ಮಾರ್ ಮಹಾಸಭಾ' ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಅದು ವಿಚಾರಣೆಯ ಹಂತದಲ್ಲಿದೆ.


ಆಂಧ್ರ ಪ್ರದೇಶದಲ್ಲೂ ಒಪ್ಪಿಗೆ

ಮತ್ತೊಂದು ತೆಲುಗು ರಾಜ್ಯವಾದ ಆಂಧ್ರ ಪ್ರದೇಶದಲ್ಲಿಯೂ ಎಸ್‌ಸಿ ಒಳಮೀಸಲಾತಿಗೆ ಸಮ್ಮತಿಯ ಮುದ್ರೆ ಬಿದ್ದಿದೆ. ಈ ಸಂಬಂಧ ಆಂಧ್ರ ಪ್ರದೇಶ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ರಾಜೀವ್ ರಂಜನ್ ಮಿಶ್ರಾ ಅವರಿದ್ದ ಏಸದಸ್ಯ ಆಯೋಗ ರಚಿಸಿತ್ತು. ಅದು ನೀಡಿದ ವರದಿಗೆ ಚಂದ್ರಬಾಬು ನಾಯ್ಡು ಅವರ ಸರ್ಕಾರವು ಒಪ್ಪಿಗೆ ಸೂಚಿಸಿದೆ. ಇಡೀ ರಾಜ್ಯವನ್ನು ಒಂದು ಘಟಕವನ್ನಾಗಿಸಿ, ಎಸ್‌ಸಿ ಒಳಮೀಸಲಾತಿ ನೀಡಲು ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. 2011ರ ಜನಗಣತಿಯ ಅನ್ವಯ ಒಳಮೀಸಲು ನೀಡಲಾಗಿದೆ ಎಂದು ನಾಯ್ಡು ತಿಳಿಸಿದ್ದಾರೆ. 'ನಾವು ಚುನಾವಣೆಯಲ್ಲಿ ಜಿಲ್ಲಾವಾರು ಒಳಮೀಸಲಾತಿಯ ಭರವಸೆ ನೀಡಿದ್ದೆವು; 2026ರ ಜನಗಣತಿಯ ದತ್ತಾಂಶ ಬಂದ ನಂತರ ಜಿಲ್ಲಾವಾರು ಎಸ್‌ಸಿ ಒಳಮೀಸಲಾತಿ ನೀಡಲಾಗುವುದು' ಎಂದಿದ್ದಾರೆ ನಾಯ್ಡು.



ಚಂದ್ರಬಾಬು ನಾಯ್ಡು

ಆಂಧ್ರ ಪ್ರದೇಶ: ಎಸ್‌ಸಿ ಜನಸಂಖ್ಯೆಯಲ್ಲಿ ಯಾರಿಗೆ ಎಷ್ಟು ಮೀಸಲಾತಿ?



ಕರ್ನಾಟಕದಲ್ಲಿಯೂ ಹೋರಾಟ

ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಕರ್ನಾಟಕದಲ್ಲಿಯೂ ಹಲವು ಸಂಘಟನೆಗಳು ಹಕ್ಕೊತ್ತಾಯ ಮಂಡಿಸುತ್ತಲೇ ಇವೆ. ಅದಕ್ಕಾಗಿ ಮತ್ತೆ ಪ್ರತಿಭಟನೆ, ಪಾದಯಾತ್ರೆ ನಡೆಸಲಾಗುತ್ತಿದೆ. ಒಳಮೀಸಲಾತಿ ಜಾರಿ ಆಗುವವರೆಗೆ ಸರ್ಕಾರವು ಯಾವುದೇ ನೇಮಕಾತಿ ಮಾಡಿಕೊಳ್ಳಬಾರದು ಎಂದು ಸಂಘಟನೆಗಳು ಆಗ್ರಹಿಸುತ್ತಿವೆ.

'ನಿಖರ ದತ್ತಾಂಶ' ತೊಡಕಾಗುವುದೇ?

ಎಸ್‌ಸಿ ಒಳಮೀಸಲಾತಿ ಕಲ್ಪಿಸುವಾಗ ಉಪಜಾತಿಗಳ ನಿಖರ, ವೈಜ್ಞಾನಿಕ ದತ್ತಾಂಶ ಆಧರಿಸಿ ಹಂಚಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ತೆಲಂಗಾಣದಲ್ಲಿ ಇತ್ತೀಚೆಗೆ ಜಾತಿಗಣತಿ ಮಾಡಿದ್ದರೂ ಅಲ್ಲಿ ಒಳಮೀಸಲಾತಿ ಕಲ್ಪಿಸಿರುವುದು 2011ರ ಜನಗಣತಿಯ ಆಧಾರದಲ್ಲಿ. ಆಂಧ್ರ ಪ್ರದೇಶದಲ್ಲಿಯೂ ಒಳಮೀಸಲಾತಿ ಪ್ರಮಾಣವನ್ನು 2011ರ ಜನಗಣತಿ ಆಧರಿಸಿಯೇ ಲೆಕ್ಕಹಾಕಲಾಗಿದೆ.

ತೆಲಂಗಾಣ ಸರ್ಕಾರದ ಮಸೂದೆಗೆ ರಾಜ್ಯಪಾಲರ ಅಂಕಿತ ಬಿದ್ದ ಮೇಲೆ ಅದು ಕಾಯ್ದೆಯಾಗಿ ಜಾರಿಗೆ ಬರಲಿದೆ. ತೆಲಂಗಾಣದಲ್ಲಿ ಈ ಹಿಂದೆ ರಾಜ್ಯಪಾಲರು ಮತ್ತು ಸರ್ಕಾರ ನಡುವೆ ಸಂಘರ್ಷ ನಡೆದಿತ್ತು. ಅದು ಈ ಬಾರಿಯೂ ಮುಂದುವರಿದರೆ, ಒಳಮೀಸಲಾತಿ ಮಸೂದೆ, ಹಿಂದುಳಿದ ವರ್ಗಗಳ ಮೀಸಲಾತಿ ಮಿತಿ ಹೆಚ್ಚಳದ ಮಸೂದೆಗಳ ಜಾರಿಗೆ ಅಡ್ಡಿಯಾಗಬಹುದು. ಜತೆಗೆ, ನಿಖರ ದತ್ತಾಂಶದ ಪ್ರಶ್ನೆಯ ಆಧಾರದಲ್ಲಿ ತೆಲಂಗಾಣ ಮತ್ತು ಆಂಧ್ರ ಪ್ರದೇಶ ಎರಡೂ ರಾಜ್ಯಗಳ ನಿರ್ಧಾರದ ಬಗ್ಗೆ ಯಾರಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಿದರೆ, ಅದನ್ನು ಸರ್ಕಾರಗಳು ಹೇಗೆ ಸಮರ್ಥಿಸಿಕೊಳ್ಳುತ್ತವೆ ಎನ್ನುವುದರ ಮೇಲೆ ಒಳಮೀಸಲಾತಿ ಜಾರಿಯಾಗಲಿದೆಯೇ ಇಲ್ಲವೇ ಎನ್ನುವುದು ನಿಂತಿದೆ.

ಆಧಾರ: ಪಿಟಿಐ, ತೆಲಂಗಾಣ, ಆಂಧ್ರ ಪ್ರದೇಶ ಸರ್ಕಾರದ ವರದಿಗಳು

ಸೆಟ್ಟೇರುತ್ತಿದೆ 'ಚಿ ಸೌಜನ್ಯ'



2012ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ನಡೆದ ಸೌಜನ್ಯ ಕೊಲೆ ಪ್ರಕರಣ ಇತ್ತೀಚೆಗೆ ಮತ್ತೆ ಸದ್ದು ಮಾಡುತ್ತಿದೆ. ಸಮಾಜದಲ್ಲಿ ಸದ್ದುಗದ್ದಲ ಸೃಷ್ಟಿಸಿದ ಪ್ರಕರಣಗಳು ತಕ್ಷಣ ಸಿನಿಮಾವಾಗಿ ಸೆಟ್ಟೇರುವುದು ಹೊಸತೇನಲ್ಲ. ಇತ್ತೀಚೆಗಷ್ಟೇ ಘೋಷಣೆಗೊಂಡಿರುವ 'ಚಿ ಸೌಜನ್ಯ' ಚಿತ್ರ ಕೂಡ ಇದೇ ಸಾಲಿಗೆ ಸೇರುವ ಚಿತ್ರವೇ ಎಂಬ ಅನುಮಾನ ಮೂಡಿದೆ.

ನಟಿ ಹರ್ಷಿಕಾ ಪೂಣಚ್ಚ ಈ ಚಿತ್ರದೊಂದಿಗೆ ನಿರ್ದೇಶಕಿಯಾಗುತ್ತಿದ್ದಾರೆ. ಕಂಸಾಳೆ ಫಿಲ್ಮ್ಸ್ ಹಾಗೂ ಭುವನ್ ಎಂಟರ್‌ಟೈನ್‌ಮೆಂಟ್ ಜಂಟಿಯಾಗಿ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ.

'ಹೆಣ್ಣುಮಕ್ಕಳ ಶೋಷಣೆಯ ಬಗ್ಗೆ ನಾನು ಹಾಗೂ ನನ್ನ ಪತಿ ಭುವನ್ ಸಾಕಷ್ಟು ಹೋರಾಟ ಮಾಡಿದ್ದೇವೆ. ಇಂತಹ ಸಾಮಾಜಿಕ ಕಳಕಳಿಯುಳ್ಳ ಚಿತ್ರವನ್ನು ಮಾಡಬೇಕೆಂದು ಆಸೆಯಿತ್ತು. ಹೆಣ್ಣುಮಕ್ಕಳ ನೋವು ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಿಗೆ ಜಾಸ್ತಿ ಗೊತ್ತಿರುತ್ತದೆ. ಹಾಗಾಗಿ ಈ ಚಿತ್ರವನ್ನು ನೀವೇ ನಿರ್ದೇಶನ ಮಾಡಿ ಎಂದು ನಿರ್ಮಾಪಕರು ಹೇಳಿದರು. ಇದು ಯಾವುದೇ ಒಂದು ಘಟನೆಯ ಕುರಿತಾದ ಚಿತ್ರವಲ್ಲ. ದೇಶದಲ್ಲಿ ನಡೆದಿರುವ ಅಮಾನುಷ ಘಟನೆಗಳನ್ನಿಟ್ಟುಕೊಂಡು ಮಾಡುತ್ತಿರುವ ಚಿತ್ರ. ನಮ್ಮ ಚಿತ್ರದ ನಾಯಕಿ ಹೆಸರು ಸೌಜನ್ಯ' ಎಂದು ಸಮಜಾಯಿಷಿ ನೀಡಿದ್ದಾರೆ ಹರ್ಷಿಕಾ.

ಚಿತ್ರಕ್ಕೆ 'ಒಂದು ಹೆಣ್ಣಿನ ಕಥೆ' ಎಂಬ ಅಡಿಬರಹವಿದೆ. ಚಿತ್ರತಂಡ ಮಾತ್ರ ಇದು ಹಲವು ಹೆಣ್ಣುಮಕ್ಕಳ ಕಥೆ ಎನ್ನುತ್ತಿದೆ! ಪ್ರಮುಖಪಾತ್ರದಲ್ಲಿ ನಟ ಕಿಶೋರ್ ಕಾಣಿಸಿಕೊಳ್ಳುತ್ತಿದ್ದಾರೆ. ಉಗ್ರಂ ಮಂಜು, ಕಾಕ್ರೋಜ್ ಸುಧೀ , ಯಶ್ ಶೆಟ್ಟಿ ಮುಂತಾದವರು ನಟಿಸುತ್ತಿದ್ದಾರೆ. ಅರುಣ್ ಸುರೇಶ್ ಛಾಯಾಚಿತ್ರಗ್ರಹಣವಿದೆ.

ಹಾರರ್ ಕಥೆಯ 'ಅವಳೆ ಕಾಂಚನ'

ಮಂಡ್ಯ ನಾಗರಾಜ್ ನಿರ್ದೇಶನದ 'ಅವಳೆ ಕಾಂಚನ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

'ಹಳ್ಳಿಯಲ್ಲಿ ಎರಡು ಕುಟುಂಬಗಳ ಮಧ್ಯೆ ನಡೆಯುವ ವಿವಾದ ಕುರಿತಾದ ಕಥೆ ಇದಾಗಿದೆ. ಒಂದೇ ಊರಿನವರು ಪ್ರೀತಿಯಲ್ಲಿ ಬಿದ್ದಾಗ, ಹಿರಿಯರಿಂದ ಪರ ವಿರೋಧ ಚರ್ಚೆಗಳು ನಡೆಯುತ್ತವೆ. ಕೊನೆಗೆ ಈ ವಿವಾದ ಏನೆಲ್ಲ ತಿರುವು ಪಡೆದುಕೊಳ್ಳುತ್ತದೆ ಎಂಬುದನ್ನು ಹಾರರ್, ಥ್ರಿಲ್ಲರ್ ಮಾದರಿಯಲ್ಲಿ ತೋರಿಸಲಾಗಿದೆ. ಮಂಡ್ಯ, ಮೈಸೂರು, ಬನ್ನೂರು ಮೊದಲಾದೆಡೆ ಚಿತ್ರೀಕರಣ ಮಾಡಿದ್ದೇವೆ' ಎನ್ನುತ್ತಾರೆ ನಿರ್ದೇಶಕರು.

ನವನಟ ಜನಾರ್ದನ್ ಚಿತ್ರದ ನಾಯಕ. ಪ್ರಿಯಾ ನಾಗಣ್ಣ ನಾಯಕಿ. ಭೀಮಣ್ಣ ನಾಯಕ, ಹರಿಣಿ ನಟರಾಜ್, ಅಪೂರ್ವ ಮುಂತಾದವರು ಚಿತ್ರದಲ್ಲಿದ್ದಾರೆ.

'ಮಂಡ್ಯ ನಾಗರಾಜ್ ಸೋಲು, ಗೆಲುವು ಲೆಕ್ಕಿಸದೆ ನಿರಂತರವಾಗಿ ಚಿತ್ರಗಳನ್ನು ಮಾಡುತ್ತಾ ಬಂದವರು. ಎಲ್ಲರು ಚಿತ್ರವನ್ನು ಲಾಭಕ್ಕಾಗಿ ಮಾಡುತ್ತಾರೆ. ಆದರೆ ಇವರು ಯಾವುದೇ ಸ್ವಾರ್ಥವಿಲ್ಲದೆ ಸಂತೋಷಕ್ಕಾಗಿ ಸಿನಿಮಾ ನಿರ್ಮಿಸಿ ಹೊಸಬರಿಗೆ ಅವಕಾಶ ನೀಡುತ್ತಾರೆ. ಇದು ಖುಷಿ ಪಡುವ ವಿಷಯ' ಎಂದರು ನಿರ್ದೇಶಕ ಸಂಘದ ಅಧ್ಯಕ್ಷ ಎನ್.ಆರ್.ಕೆ ವಿಶ್ವನಾಥ್.

ಚಿತ್ರಕ್ಕೆ ಕುಮಾರಸ್ವಾಮಿ ಸಂಗೀತ, ವರ್ಷಿತ್.ಎಸ್.ಎನ್ ಛಾಯಾಚಿತ್ರಗ್ರಹಣ-ಸಂಕಲನವಿದೆ.



ಪ್ರಿಯಾ ನಾಗಣ್ಣ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮರುಭೂಮಿಯಾದ ಮನುಷ್ಯನ ಹೃದಯ!



ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

158

ಒಂದು ದೊಡ್ಡ ಗಿಡ ಇತ್ತು. ಅದರ ಮಗ್ಗುಲಲ್ಲೇ ಒಂದು ಸಣ್ಣ ಗಿಡವೂ ಇತ್ತು. ಎರಡೂ ಒಂದೇ ಬೇರಿನಿಂದ ಬಂದಿದ್ದವು. ಸಣ್ಣ ಗಿಡ ದೊಡ್ಡ ಗಿಡಕ್ಕೆ ಕೇಳಿತು. 'ಈ ಮನುಷ್ಯರು ಮರಗಳನ್ನೆಲ್ಲಾ ಕಡಿತಾರಲ್ಲ. ಕಡಿದು ಏನು ಮಾಡುತ್ತಾರೆ?' ಎಂದು. ಅದಕ್ಕೆ ದೊಡ್ಡ ಗಿಡ 'ನಮ್ಮನ್ನೆಲ್ಲಾ ಕಡಿದುಕೊಂಡು ಹೋಗಿ ಅದರಲ್ಲಿ ಪೇಪರ್ ತಯಾರು ಮಾಡ್ತಾರೆ. ಅದರ ಮೇಲೆ ಕಾಡು ಬೆಳೆಸಿ, ನಾಡು ಉಳಿಸಿ ಅಂತ ಬರೀತಾರೆ' ಎಂದು ಉತ್ತರಿಸಿತು. ನಮಗೆ ಒಂದು ಕಲ್ಲಿನ ಗುಡ್ಡ ಕಾಣಿಸಿದರೆ ನಾವು ಇಲ್ಲಿ ಕ್ರಷರ್ ಮಷೀನ್ ಹಾಕಬೇಕು ಅಂದಕೋತೀವಿ. ಆದರೆ, ಒಬ್ಬ ಕಲಾವಿದ ನೋಡಿದರೆ ಈ ಕಲ್ಲೊಳಗೆ ಶಂಕರನೇ ನಿರ್ಮಾಣ ಆಗುತ್ತಾನೆ ಎಂದು ಕೊಳ್ಳುತ್ತಾನೆ. ನಾವು ಎಲ್ಲ ಗುಡ್ಡ ಕಡಿದು ಮುಗಿಸಿದ್ದೇವೆ. ನಾವು ಸಾಗರಗಳನ್ನೂ ಬಿಟ್ಟಿಲ್ಲ. ಯಾಕೆ ಹೊಸ ಹೊಸ ಸಂಶೋಧನೆಗಳು ನಡೆದವು ಅಂದ್ರೆ, ಕೇವಲ ಸಂಪತ್ತಿನ ಸಲುವಾಗಿ.

ಸಮುದ್ರದ ಮೇಲೆ, ಒಳಗೆ ಎಲ್ಲ ಕಡೆ ನಾವು ಸಂಪತ್ತು ಹುಡುಕಿದ್ದೇವೆ. ಸಮುದ್ರ ಉಳಿದಿಲ್ಲ. ಹೊಳೆ ಉಳಿದಿಲ್ಲ. ಹಳ್ಳ ಉಳಿದಿಲ್ಲ. ಎಲ್ಲವನ್ನೂ ಸಂಪತ್ತಿನ ಸಲುವಾಗಿ ಸ್ವಚ್ಛ ಮಾಡಿಬಿಟ್ಟಿದ್ದೇವೆ. ಮರಳು ತೆಗೆದರೆ ಹಿಡೀತಾರೆ. ನೀರು ತೆಗೆದುಕೊಂಡರೆ ಹಿಡಿಯೋದಿಲ್ಲ. ಮರಳು ಮಾತ್ರ ಸಂಪತ್ತು ಅಂದುಕೊಂಡಿದ್ದೇವೆ. ನೀರೂ ಸಂಪತ್ತು ಎನ್ನುವುದು ನಮಗೆ ಗೊತ್ತಾಗುವುದಿಲ್ಲ. ಊರೊಳಗೆ ಒಂದು ಕುರಿ ಉಳಿದಿಲ್ಲ, ಊರ ಹೊರಗೆ ಒಂದು ಕೆರೆ ಉಳಿದಿಲ್ಲ. ಎಲ್ಲವನ್ನೂ ಮುಗಿಸಿದ್ದಾನೆ ಮನುಷ್ಯ. ನೀರು ಅಂದರೆ 'ನೀ ಇರು' ಅಂತ ಅರ್ಥ. ನೀನು ಇರಬೇಕಾದರೆ ನೀರು ಇರಲೇಬೇಕು. ನೀರು ಬಿಟ್ಟು ಮನುಷ್ಯ ಬದುಕಲು ಸಾಧ್ಯವೇ ಇಲ್ಲ. ರಾಜ ಮಹಾರಾಜರನ್ನೂ ನಾವು ಹೊಗಳುವುದು ಏತಕ್ಕೆ? ಅವರು ಸಂತೋಷವಾಗಬೇಕು, ನಮಗೇನಾದರೂ ಭಕ್ಷೀಸು ಸಿಕ್ಕೀತು ಎಂಬ ಭಾವದಿಂದ. ಅದಕ್ಕೆ ಬಸವಣ್ಣನವರು 'ಹಾಡಿದೊಡೆ ಎನ್ನೊಡೆಯನ ಹಾಡುವೆ, ಬೇಡಿದೊಡೆ ಎನ್ನೊಡೆಯನ ಬೇಡುವೆ, ಒಡೆಯಂಗೆ ಒಡಲು ತೋರಿ ಎನ್ನ ಬಡವತನವ ಬಿನ್ನೈಸುವೆ, ಒಡೆಯ ಮಹಾದಾನಿ ಕೂಡಲಸಂಗ ನಿಮಗೆ ಸೆರಗೊಡ್ಡಿ ಬೇಡುವೆ' ಎಂದು ಹೇಳುತ್ತಾರೆ.

ಈ ಜಗತ್ತಿನಲ್ಲಿ ದಾನಿಗಳು ಇರಬಹುದು. ಆದರೆ ಅವರು ಹೆಸರು ಬರೆಸಿಕೊಂಡಿದ್ದಾರೆ. ಆದರೆ, ಭಗವಂತ ಮಹಾದಾನಿ. 'ನೀನು ಕೊಟ್ಟಿದ್ದೀಯ, ಆದರೆ, ಅದನ್ನು ನೆನಪಿನಲ್ಲಿ ಇಟ್ಟುಕೊಂಡಿಲ್ಲ. ಅದಕ್ಕೇ ನೀನು ಮಹಾದಾನಿ ಭಗವಂತ' ಎಂದು ಅವರು ಹೇಳುತ್ತಾರೆ. ಆದಿತ್ಯವಾರ ಅಮಾವಾಸ್ಯೆ ಬಂದರೆ ಸ್ಮಶಾನಕ್ಕೆ ಹೋಗಿ ಕುಳಿತುಕೊಳ್ಳುತ್ತಾರೆ. ಅದಕ್ಕೆ ಗಂಡು ಅಮಾವಾಸ್ಯೆ ಅಂತಾರೆ. ಅಮಾವಾಸ್ಯೆಯಲ್ಲಿಯೂ ಗಂಡು ಹೆಣ್ಣು ಎಂಬ ತಾರತಮ್ಯ. ರಾತ್ರಿ ಹೋಗಿ ಸ್ಮಶಾನದಲ್ಲಿ ಕುಳಿತುಕೊಳ್ಳುವುದು ಯಾಕೆಂದರೆ, ಸಂಪತ್ತಿನ ಬಯಕೆಯಿಂದ. ಒಂದು ಸಣ್ಣ ಸಸಿಯನ್ನು ಕತ್ತಲೆಯ ಕೋಣೆಯಲ್ಲಿ ಇಟ್ಟರೂ ಅದು ಬೆಳಕಿನ ಕಡೆಗೆ ಮುಖ ಮಾಡುತ್ತದೆ. ಆದರೆ, ಮನುಷ್ಯ ಬೆಳಕಿನಿಂದ ಕತ್ತಲೆಯ ಕಡೆ ನೋಡುತ್ತಿದ್ದಾನೆ. ಇವೆಲ್ಲ ಸಂಪತ್ತಿನ ಸಲುವಾಗಿ ಅಷ್ಟೆ. ನಮ್ಮ ಆಸೆ ಮುಗಿಯುವುದಿಲ್ಲ. ಬಿಸಿಲ್ಗುದುರೆ ಇದ್ದ ಹಾಗೆ. ಮರುಭೂಮಿಯಲ್ಲಿ ಎಷ್ಟು ಮಳೆ ಬಿದ್ದರೂ ನೀರು ನಿಲ್ಲೋದಿಲ್ಲ. ಹಾಗೆಯೇ ಮನುಷ್ಯನ ಹೃದಯ ಕೂಡ ಮರುಭೂಮಿಯಾಗಿದೆ; ಎಷ್ಟೇ ಸಂಪತ್ತು ಬಂದರೂ ಸಾಕು ಅಂತ ಅನ್ನಿಸುವುದೇ ಇಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮಾರ್ಚ್ 24, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣದಶಮಿ ಗಂ. 29-06 ನಕ್ಷತ್ರ: ಉತ್ತರಾಷಾಢ ಗಂ. 28-27 ಯೋಗ: ಪರಿಘ ಗಂ. 16-45 ಕರಣ: ವಣಿಜ ಗಂ. 17-28, ಮೀನ ಮಾಸದ 10 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 3. ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-35 ಸೂರ್ಯಾಸ್ತ : 06-38

ಮುಸ್ಲಿಂ ದಿನಾಂಕ : 23 ರಂಜಾನ್

ಅದೃಷ್ಟ ಸಂಖ್ಯೆ : 2, 8

ಮೇಷ: ತೊಂದರೆಗಳೆಲ್ಲಾ ಒಂದೊಂದಾಗಿ ಶಮನಗೊಳ್ಳುತ್ತಾ ಅಭಿವೃದ್ಧಿ ತೋರಿ ಬರುವುದು. ಮನಸ್ಸಿನ ದುಗುಡ ನಿವಾರಣೆಗೆ ತಾಳ್ಮೆ ಮುಖ್ಯ. ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ವಹಿಸಿರಿ.

ವೃಷಭ: ಕೆಲಸದ ಒತ್ತಡ ಹೆಚ್ಚಾಗಿ ಶಿರೋವೇದನೆ ಉಂಟಾಗುವುದು. ವಿದ್ಯಾಬಲದಿಂದಾಗಿ ಉತ್ತಮ ಸ್ಥಾನಮಾನ ಪ್ರಾಪ್ತಿ. ಜನರನ್ನು ಆಕರ್ಷಿಸುವ ಕಲೆ ಕರಗತವಾಗಿದೆ.

ಮಿಥುನ: ಮನೆಯಲ್ಲಿ ವೃದ್ಧರ ಆರೋಗ್ಯದಲ್ಲಿ ಏರುಪೇರಾಗುವ ಸಂದರ್ಭವಿರು-ವುದರಿಂದ ಜಾಗ್ರತರಾಗಿರಿ. ವ್ಯವಹಾರಗಳಿಗೆ ಹೊಸ ತಿರುವು ಮೂಡುವುದು. ಸಮಾಜಸೇವೆಯ ನಿಮಿತ್ತ ಓಡಾಟ ಹೆಚ್ಚುವುದು.

ಕರ್ಕಾಟಕ: ಸೂಕ್ಷ್ಮ ವಿಚಾರಗಳನ್ನು ಅರ್ಥ ಮಾಡಿಕೊಂಡು ಹಿರಿಯರ ಮಾರ್ಗ-ದರ್ಶನದಂತೆ ನಡೆಯಿರಿ. ಹೋಟೆಲ್ ವ್ಯಾಪಾರ ಪ್ರಾರಂಭ ಮಾಡುವ ಯೋಚನೆ ಫಲಪ್ರದ. ಧಾರ್ಮಿಕ ವಿಚಾರದ ಬಗ್ಗೆ ಗಮನಹರಿಸಿ.

ಸಿಂಹ: ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ದುಡಿಮೆಯು ಸಾರ್ಥಕವಾಗಲಿದೆ. ಎಲ್ಲಾ ವಿಷಯಗಳನ್ನೂ ಸಮಗ್ರವಾಗಿ ಅವಲೋಕಿಸಲು ಸುದಿನ. ಶ್ರಮಕ್ಕೆ ತಕ್ಕ ಪ್ರತಿಫಲ ಕಾಣುವಿರಿ.

ಕನ್ಯಾ: ಕಾರ್ಯಕ್ಷೇತ್ರದಲ್ಲಿ ಉತ್ತಮ ಸ್ಥಾನಮಾನ ತೋರಿಬರುವುದರ ಜತೆಯಲ್ಲಿ ಕೆಲಸದ ಅತಿ ಒತ್ತಡವು ದೇಹದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಅವಿವಾಹಿತರಿಗೆ ಶುಭ ಫಲ ಸಿಗಲಿದೆ.

ತುಲಾ: ಕೆಲಸದ ಬದಲಾವಣೆಗಾಗಿ ಪ್ರಯತ್ನಪಡುತ್ತಿದ್ದರೆ ಸೋದರಮಾವನ ಸಹಾಯ ಪಡೆದುಕೊಂಡಲ್ಲಿ ಶೀಘ್ರ ನಡೆಯುವುದು. ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು.

ವೃಶ್ಚಿಕ: ಕಾಲೇಜು ವಿದ್ಯಾರ್ಥಿಗಳು ರಜಾದಿನದಲ್ಲಿ ಮಾಡಿದ ಮೋಜುಮಸ್ತಿಯ ಅಡ್ಡಪರಿಣಾಮ ಗೊತ್ತಾಗಲಿದೆ. ಶುಭ ಸಮಾರಂಭಗಳಿಗೆ, ಬಂಧು-ಮಿತ್ರರ ಮನೆಗೆ ಭೇಟಿ ಕೊಡುವ ಮನಸ್ಸಾಗಲಿದೆ.

ಧನು: ಕಷ್ಟಬಂದರೂ ಗುರಿಯನ್ನು ಸಾಧಿಸುವಿರಿ. ಅದರ ಪರಿಣಾಮವಾಗಿ ಜೀವನದ ಮುಂದಿನ ಹಾದಿಯು ಸುಗಮವಾಗಲಿದೆ. ಸಮಾಜದಲ್ಲಿ ನಿಗರ್ವಿಯಾಗಿರುವ ವ್ಯಕ್ತಿತ್ವವು ಶೋಭೆ ತರುವುದು.

ಮಕರ: ನಡೆಯುವ ಕಹಿ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕ್ಷಣಿಕವಾದದ್ದು. ಬರಬೇಕಾದ ಹಣ ಪಡೆಯಲು ಅಧಿಕಾರಿಗಳ ಹಿಂದೆ ಸುತ್ತುವಿಕೆ ಕೊನೆಯಾಗಲಿದೆ.

ಕುಂಭ: ಧರ್ಮದ ವಿಚಾರದ ಬಗ್ಗೆ ಬರೆಯುವ ಲೇಖಕರಿಗೆ , ಅಂಕಣಕಾರರಿಗೆ ಕೀರ್ತಿ ಲಭ್ಯ. ಇಂದಿನ ಮೃದುಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯ ಎನಿಸುವುದು. ಸಾಂಸಾರಿಕ ಜೀವನದ ಬಗ್ಗೆ ಗಮನ ಇರಲಿ.

ಮೀನ: ಪಶುಸಂಗೋಪನೆ ಮಾಡುವವರಿಗೆ, ಜೇನು ಕೃಷಿ ಮಾಡುವವರಿಗೆ ಮತ್ತು ಪಾನೀಯ ಮಾರಾಟಗಾರರಿಗೆ ಮಹಾಲಕ್ಷ್ಮಿ ಅನುಗ್ರಹವು ಸಿಗಲಿದೆ. ತೈಲ, ಇಂಧನಗಳ ವ್ಯಾಪಾರ ಮಾಡುವವರಿಗೆ ಅಧಿಕ ಲಾಭ ಸಿಗಲಿದೆ.

ಪದಬಂಧ 5991


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಆರಾಣೆಗಾಗಿ ಪ್ರಮಾಣ ಮಾಡುವುದು (2)
3.ಕಗ್ಗೊಲೆಯ ಘಟನೆ (4)
5.ಸೊಂಟದಿಂದ ಪ್ರಾರಂಭವಾದ ಕಂಪನ (3)
6.ತಿನ್ನಲು ಬಳಸುವ ಮುಖದ ಅಂಗ (2)
7.ಕಣದಲ್ಲಿರುವ ಹತೋಟಿ (4)
10.ಮನದೊಳಗಿರುವ ಕುಲ (4)
13.ರಂಗೋಲಿಗೆ ತುಂಬಿರುವ ಬಣ್ಣ (2)
14.ಇದು ಕನ್ನಡಿಗನ ಸ್ಪೂನ್! (3)
15.ರಮಣೀಯವಾದುದು ಮರದೊಳಗಿದೆ (4)
16.ಕಟುವಾದುದನ್ನು ಹೀಗೂ ಹೇಳುತ್ತಾರೆ (2)

ಮೇಲಿಂದ ಕೆಳಕ್ಕೆ

1.ಬೇಡ ಇಲ್ಲಿದ್ದಾನೆ (4)
2.ಅನಿರೀಕ್ಷಿತ ಘಟನೆ (4)
3.ಹಣದೊಳಗಿರುವ ಗೊಂದಲ (4)
4.ಈತ ಕೊಳ್ಳೆ ಹೊಡೆಯುವವನು (4)
8.ಒಳ್ಳೆಯ ಅಥವಾ ಕೆಟ್ಟ ನಾತ (3)
9.ಕೊನೆಗೆ ತಿರುಗಿರುವ ಮಗ ತಂದಿರುವ ಕುದುರೆ (4)
10.ನನ್ನದೆಂಬ ಭಾವನೆ (4)
11.ರಾತ್ರಿ ವೇಳೆ ಸಂಚರಿಸುವ ದೆವ್ವ ಪಿಶಾಚಿ ಕಳ್ಳ ಇತ್ಯಾದಿ (4)
12.ಸ್ಥಾವರ ಹಾಗೂ ಜಂಗಮ ವಸ್ತುಗಳು (4)



5990ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಟಕ 6.ಜವಾಬುದಾರಿ 7.ಶಾರೀರ 8.ವನ 10.ಶರ 11.ಮೂಷಿಕ 13.ಆನೆ 14.ಟದಿ 18.ಗಂಜಲ 19.ಮಾರ್ಗದರ್ಶಕ 20.ರಥಜ

ಮೇಲಿಂದ ಕೆಳಕ್ಕೆ:
1.ಜಯಶಾಲಿ 2.ಕಲರವ 3.ಅಂಜಲಿ 4.ಅಂಬುಧರ 5.ತುರಿಮಣೆ 9.ನಮೂನೆ 10.ಶಕಟ 12.ಕರುಮಾಡ 13.ಆಪಾದನೆ 15.ದಿಗಂಬರ 16.ಮಲಯಜ 17.ವಿಕಚ

ಸುಡೊಕು 6376

				2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6375 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಚೀನಾದ 5 ಉತ್ಪನ್ನಕ್ಕೆ ಹೆಚ್ಚುವರಿ ತೆರಿಗೆ

ನವದೆಹಲಿ (ಪಿಟಿಐ): ಚೀನಾದಿಂದ ಭಾರತಕ್ಕೆ ಅಗ್ಗದ ದರದಲ್ಲಿ ಆಮದಾಗುತ್ತಿದ್ದ ಐದು ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರವು ಹೆಚ್ಚುವರಿ ತೆರಿಗೆ ವಿಧಿಸಿದೆ.

ಸಾಫ್ಟ್ ಫೆರೈಟ್ ಕೋರ್‌ಗಳು, ವ್ಯಾಕ್ಯೂಮ್ ಫ್ಲಾಸ್ಕ್, ಅಲ್ಯೂಮಿನಿಯಂ ಫಾಯಿಲ್ (ಹಾಳೆ), ಟ್ರೈಕ್ಲೋರೊ ಐಸೊಸೈನುರಿಕ್ ಆಮ್ಲ ಮತ್ತು ಪಿವಿಸಿ ಪೇಸ್ಟ್ ರೆಸಿನ್ ಉತ್ಪನ್ನಗಳ ಆಮದು ಮೇಲೆ ಈ ತೆರಿಗೆ ವಿಧಿಸಲಾಗಿದೆ.

ಭಾರತದಲ್ಲಿ ಈ ಉತ್ಪನ್ನಗಳ ಸಹಜ ದರಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಆಗುತ್ತಿವೆ. ಇದು ದೇಶದ ಮಾರಾಟಗಾರರ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಹೀಗಾಗಿ ಮಾರಾಟಗಾರರ ರಕ್ಷಣೆ ದೃಷ್ಟಿಯಿಂದ ಹೆಚ್ಚುವರಿ ತೆರಿಗೆ ವಿಧಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಚೀನಾದಿಂದ 8.47 ಲಕ್ಷ ಟನ್ ಡಿಎಪಿ ಆಮದು

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಫೆಬ್ರುವರಿವರೆಗೆ ಭಾರತವು ಚೀನಾದಿಂದ 8.47 ಲಕ್ಷ ಟನ್ ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ರಸಗೊಬ್ಬರವನ್ನು ಆಮದು ಮಾಡಿಕೊಂಡಿದೆ ಎಂದು ಕೇಂದ್ರ ಸರ್ಕಾರದ ಅಂಕಿಅಂಶ ತಿಳಿಸಿವೆ.

ಈ ಅವಧಿಯಲ್ಲಿ 44.19 ಲಕ್ಷ ಟನ್ ಡಿಎಪಿ ಆಮದು ಮಾಡಿಕೊಳ್ಳಲಾಗಿದ್ದು, ಇದರಲ್ಲಿ ಚೀನಾದ ಪಾಲು ಶೇ 19.17ರಷ್ಟಿದೆ. ಕಳೆದ ಆರ್ಥಿಕ ವರ್ಷದಲ್ಲಿ ಒಟ್ಟು 55.67 ಲಕ್ಷ ಟನ್ ಆಮದು ಮಾಡಿಕೊಳ್ಳಲಾಗಿತ್ತು. ಈ ಪೈಕಿ ಚೀನಾದ ಪಾಲು 22.28 ಲಕ್ಷ ಟನ್ ಇತ್ತು. ದೇಶದಲ್ಲಿ ಯೂರಿಯಾ ನಂತರ ಅತಿಹೆಚ್ಚು ಪ್ರಮಾಣದಲ್ಲಿ ಡಿಎಪಿ ಬಳಸಲಾಗುತ್ತದೆ. ದೇಶೀಯ ಬೇಡಿಕೆಗೆ ಅನುಗುಣವಾಗಿ ರಷ್ಯಾ, ಸೌದಿ ಅರೇಬಿಯಾ, ಮೊರಾಕ್ಕೊ ಮತ್ತು ಜೋರ್ಡನ್‌ನಿಂದ ಆಮದು ಮಾಡಿಕೊಳ್ಳಲಾಗುತ್ತದೆ.

ಬೋಯಿಂಗ್: 180 ಉದ್ಯೋಗಿಗಳ ವಜಾ

ನವದೆಹಲಿ (ಪಿಟಿಐ): ಅಮೆರಿಕದ ವಿಮಾನ ತಯಾರಿಕಾ ಕಂಪನಿ ಬೋಯಿಂಗ್, ಬೆಂಗಳೂರಿನಲ್ಲಿರುವ ತನ್ನ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಸೆಂಟರ್‌ನ 180 ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಭಾರತದಲ್ಲಿ ಒಟ್ಟು 7 ಸಾವಿರ ಉದ್ಯೋಗಿಗಳಿದ್ದಾರೆ. ಕಂಪನಿಯು ಹಲವು ಸವಾಲುಗಳನ್ನು ಎದುರಿಸುತ್ತಿದೆ. ಇದನ್ನು ನಿಭಾಯಿಸಲು ಜಾಗತಿಕ ಮಟ್ಟದಲ್ಲಿರುವ ಒಟ್ಟು ಉದ್ಯೋಗಿಗಳ ಪೈಕಿ ಶೇ 10ರಷ್ಟು ಮಂದಿಯನ್ನು ಕೆಲಸದಿಂದ ಕಡಿತಗೊಳಿಸುವ ಬಗ್ಗೆ ಕಳೆದ ವರ್ಷವೇ ಕಂಪನಿಯು ಪ್ರಕಟಿಸಿತ್ತು ಎಂದು ಹೇಳಿವೆ.

ಡಿಸೆಂಬರ್ ತ್ರೈಮಾಸಿಕದಲ್ಲಿಯೇ ಈ ಉದ್ಯೋಗಿಗಳನ್ನು ವಜಾಗೊಳಿಸಿದೆ. ಗ್ರಾಹಕರ ಸೇವೆ, ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಯಾವುದೇ ತೊಂದರೆಯಾಗದಂತೆ ನಿಗಾವಹಿಸಿ ಈ ಕ್ರಮಕೈಗೊಂಡಿದೆ ಎಂದು ಹೇಳಿವೆ.

ಕ್ರೆಡಿಟ್ ಸ್ಕೋರ್ ಪರಿಶೀಲನೆ ಹೇಗೆ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸಾಲಕ್ಕಾಗಿ ಯಾವುದೇ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದಾಗ ಬ್ಯಾಂಕ್‌ಗಳು ಮೊದಲು ನೋಡುವುದೇ ನಿಮ್ಮ ಕ್ರೆಡಿಟ್ ಸ್ಕೋರ್. ಇದು ಉತ್ತಮವಾಗಿದ್ದರೆ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ಸಾಲ ಒದಗಿಸುತ್ತವೆ. ಕಡಿಮೆ ಇದ್ದರೆ ಹೆಚ್ಚಿನ ಬಡ್ಡಿ ವಿಧಿಸುತ್ತವೆ. ತೀರಾ ಕಳಪೆ ಎನಿಸಿದರೆ ಸಾಲದ ಅರ್ಜಿಯನ್ನೇ ತಿರಸ್ಕರಿಸುತ್ತವೆ.

ಬ್ಯಾಂಕ್‌ಗಳು ಕ್ರೆಡಿಟ್ ಸ್ಕೋರ್ ಅನ್ನು ಎರಡು ಮಾದರಿಯಲ್ಲಿ ಪರೀಕ್ಷಿಸುತ್ತವೆ. ಒಂದನೆಯದ್ದು ಹಾರ್ಡ್ ಎನ್‌ಕ್ವೈರಿ; ಮತ್ತೊಂದು ಸಾಫ್ಟ್ ಎನ್‌ಕ್ವೈರಿ. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಕ್ರೆಡಿಟ್ ಸ್ಕೋರ್‌ನ ಹಾರ್ಡ್ ಎನ್‌ಕ್ವೈರಿ ಆದಾಗ ಅದು ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಬನ್ನಿ ಕ್ರೆಡಿಟ್ ಸ್ಕೋರ್ ಮೇಲೆ ಹಾರ್ಡ್ ಎನ್‌ಕ್ವೈರಿ ಪರಿಣಾಮ ಬೀರದಂತೆ ಎಚ್ಚರಿಕೆ ವಹಿಸೋದು ಹೇಗೆ ಎಂಬುದನ್ನು ತಿಳಿಯೋಣ.

ಕ್ರೆಡಿಟ್ ಸ್ಕೋರ್ ಎಂದರೇನು?: ಸಾಲ ಪಡೆಯಲು ನೀವು ಎಷ್ಟು ಅರ್ಹರು ಎನ್ನುವುದನ್ನು ಕ್ರೆಡಿಟ್ ಸ್ಕೋರ್ ತಿಳಿಸುತ್ತದೆ. ನಿಮ್ಮ ಹಣಕಾಸಿನ ಶಿಸ್ತಿಗೆ ಇದು ಕನ್ನಡಿ ಇದ್ದಂತೆ. 300ರಿಂದ 900ರ ವರೆಗೆ ಕ್ರೆಡಿಟ್ ಸ್ಕೋರ್ ಇರುತ್ತದೆ. 750ಕ್ಕಿಂತ ಹೆಚ್ಚಿಗೆ ಇದ್ದರೆ ಉತ್ತಮ ಎಂದು ಪರಿಗಣಿಸಲಾಗುತ್ತದೆ. ಸಾಲ ಪಡೆಯುವಿಕೆ ಮತ್ತು ನಿರ್ವಹಣೆಯಲ್ಲಿ ಎಷ್ಟು ಶಿಸ್ತು ಕಾಯ್ದುಕೊಳ್ಳುತ್ತೀರೋ ಅಷ್ಟು ಒಳ್ಳೆಯ ರೀತಿಯಲ್ಲಿ ಕ್ರೆಡಿಟ್ ಸ್ಕೋರ್ ಇರುತ್ತದೆ.

ಕ್ರೆಡಿಟ್ ಇನ್ಫಾರ್ಮೇಷನ್ ಬ್ಯೂರೊ ಆಫ್ ಇಂಡಿಯಾ ಲಿಮಿಟೆಡ್ (ಸಿಬಿಲ್), ಎಕ್ಸ್‌ಪೀರಿಯನ್, ಈಕ್ವಿಫ್ಯಾಕ್ಸ್ ಸಂಸ್ಥೆಗಳು ಬ್ಯಾಂಕ್‌ಗಳಿಂದ ಮಾಹಿತಿ ಪಡೆದುಕೊಂಡು ಸಾಲಗಾರರ ಮಾಹಿತಿ ಭರ್ತಿ ಮಾಡಿ ಕ್ರೆಡಿಟ್ ಸ್ಕೋರ್ ನೀಡುತ್ತವೆ.

ಸಾಫ್ಟ್ ಎನ್‌ಕ್ವೈರಿ ಎಂದರೇನು?: ನಿಮ್ಮ ಕ್ರೆಡಿಟ್ ಸ್ಕೋರ್ ಎಷ್ಟಿದೆ ಎಂದು ನೀವೇ ಪರಿಶೀಲನೆ ಮಾಡುವುದು ಅಥವಾ ಬ್ಯಾಂಕ್‌ಗಳು ಸಾಲದ ಆಫರ್ ನೀಡಲು ಸ್ವಯಂ ಪ್ರೇರಿತವಾಗಿ ನಿಮ್ಮ ಕ್ರೆಡಿಟ್ ಸ್ಕೋರ್ ಪರಿಶೀಲನೆ ಮಾಡುವುದಕ್ಕೆ ಸಾಫ್ಟ್ ಎನ್‌ಕ್ವೈರಿ ಎಂದು ಕರೆಯಲಾಗುತ್ತದೆ. ಇದು ಕ್ರೆಡಿಟ್ ಸ್ಕೋರ್ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರುವುದಿಲ್ಲ. ಕಾಲಕಾಲಕ್ಕೆ ಹೀಗೆ ಮಾಡುವುದರಿಂದ ನಿಮ್ಮ ಕ್ರೆಡಿಟ್ ರಿಪೋರ್ಟ್‌ನಲ್ಲಿ ಏನಾದರೂ ತಪ್ಪುಗಳಿದ್ದರೆ ಅದನ್ನು ಪ್ರಶ್ನಿಸಿ ಸರಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಹಾರ್ಡ್ ಎನ್‌ಕ್ವೈರಿ ಎಂದರೇನು?: ಸಾಲ ಕೊಡುವ ಸಂಸ್ಥೆ ನಿಮಗೆ ಸಾಲ ಕೊಡಬಹುದೇ ಅಥವಾ ಇಲ್ಲವೋ ಎಂದು ತೀರ್ಮಾನಿಸಲು ಮಾಡುವ ಕ್ರೆಡಿಟ್ ಸ್ಕೋರ್ ಪರಿಶೀಲನೆಯನ್ನು ಹಾರ್ಡ್ ಎನ್‌ಕ್ವೈರಿ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಹೊಸ ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದಾಗ, ಸಾಲಕ್ಕಾಗಿ ಬ್ಯಾಂಕ್ ಮೊರೆ ಹೋದಾಗ, ಅಡಮಾನ ಸಾಲಕ್ಕೆ ಮುಂದಾದಾಗ ಬ್ಯಾಂಕ್‌ಗಳು ಈ ತಪಾಸಣೆ ಮಾಡುತ್ತವೆ.

ಈ ಪ್ರಕ್ರಿಯೆಯು ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುತ್ತದೆ. ಒಂದು ಹಾರ್ಡ್ ಎನ್‌ಕ್ವೈರಿಯಿಂದ ಕ್ರೆಡಿಟ್ ಸ್ಕೋರ್‌ನ 5ರಿಂದ 10 ಅಂಕ ಕಡಿಮೆಯಾಗುತ್ತದೆ. ಈ ಬಗೆಗಿನ ಮಾಹಿತಿ ನಿಮ್ಮ ಕ್ರೆಡಿಟ್ ರಿಪೋರ್ಟ್‌ನಲ್ಲಿ ಸುಮಾರು ಎರಡು ವರ್ಷದವರೆಗೂ ಗೋಚರಿಸುತ್ತದೆ. ಆರು ತಿಂಗಳ ಅವಧಿಯಲ್ಲಿ ಮೂರಕ್ಕಿಂತ ಹೆಚ್ಚು ಹಾರ್ಡ್ ಎನ್‌ಕ್ವೈರಿ ಇದ್ದರೆ ಬ್ಯಾಂಕ್‌ಗಳು ಅದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತವೆ.

ವ್ಯಕ್ತಿಯೊಬ್ಬ ಆರು ತಿಂಗಳ ಅವಧಿಯಲ್ಲಿ ಮೇಲಿಂದ ಮೇಲೆ ಸಾಲಕ್ಕಾಗಿ ಅರ್ಜಿ ಸಲ್ಲಿಸುತ್ತಿರುವುದು ಏಕೆ ಎಂದು ಬ್ಯಾಂಕ್‌ಗಳು ಅನುಮಾನದಿಂದ ನೋಡುತ್ತವೆ. ಹಾಗಾಗಿ, ಸಾಲಕ್ಕೆ ಅರ್ಜಿ ಸಲ್ಲಿಸುವಾಗ ಎಚ್ಚರಿಕೆಯಿಂದ ಮುನ್ನಡೆಯಿರಿ. ನಿಮಗೆ ಸರಿಹೊಂದುವ ಸಾಲ ಯಾವುದು ಎಂದು ಮನಗಂಡು ಅಗತ್ಯಕ್ಕೆ ಅನುಗುಣವಾಗಿ ಮಾತ್ರ ಅರ್ಜಿ ಸಲ್ಲಿಸಿ. ಹೀಗೆ ಮಾಡದಿದ್ದರೆ ಅದು ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

ಕಿವಿಮಾತು: ಹಾರ್ಡ್ ಎನ್‌ಕ್ವೈರಿ ಮತ್ತು ಸಾಫ್ಟ್ ಎನ್‌ಕ್ವೈರಿ ನಡುವಿನ ವ್ಯತ್ಯಾಸ ತಿಳಿದುಕೊಳ್ಳುವುದರಿಂದ ಕ್ರೆಡಿಟ್ ಸ್ಕೋರ್ ನಿರ್ವಹಣೆಯು ಸುಲಭವಾಗುತ್ತದೆ. ಕ್ರೆಡಿಟ್ ಸ್ಕೋರ್ ಅನ್ನು ಉತ್ತಮ ರೀತಿಯಲ್ಲಿ ಕಾಯ್ದುಕೊಂಡರೆ ಬ್ಯಾಂಕ್‌ಗಳು ನಿಮಗೆ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ಸಾಲ ಒದಗಿಸುತ್ತವೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಪುಟಿದೆದ್ದ ಷೇರು ಸೂಚ್ಯಂಕಗಳು



ಮಾರ್ಚ್ 21ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಪುಟಿದೆದ್ದಿವೆ. ನಾಲ್ಕು ವರ್ಷದ ಅವಧಿಯಲ್ಲಿ ಕಂಡುಬಂದ ಅತ್ಯುತ್ತಮ ವಾರದ ಗಳಿಕೆ ಇದಾಗಿದೆ.

76,905 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 4.19ರಷ್ಟು ಗಳಿಸಿಕೊಂಡಿದೆ. 23,350 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 4.26ರಷ್ಟು ಗಳಿಸಿಕೊಂಡಿದೆ. ಇನ್ನು ನಿಫ್ಟಿ ಮಿಡ್‌ಕ್ಯಾಪ್ ಸೂಚ್ಯಂಕ ಶೇ 7.74ರಷ್ಟು ಗಳಿಸಿಕೊಂಡರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಒಂದು ವಾರದ ಅವಧಿಯಲ್ಲಿ ಶೇ 8.64ರಷ್ಟು ಜಿಗಿದಿದೆ.

ಅಮೆರಿಕದ ಫೆಡರಲ್ ರಿಸರ್ವ್ ಈ ವರ್ಷ ಎರಡು ಬಾರಿ ಬಡ್ಡಿದರ ಇಳಿಕೆ ಮಾಡುವ ಮುನ್ಸೂಚನೆ ನೀಡಿದೆ. ಅಲ್ಲದೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸ್ಥಿರತೆ, ವಿದೇಶಿ ಹೂಡಿಕೆದಾರರಿಂದ ಖರೀದಿ ಉತ್ಸಾಹ, ಡಾಲರ್ ಎದುರು ರೂಪಾಯಿ ಚೇತರಿಕೆ ಸೇರಿ ಹಲವು ಅಂಶಗಳು ಷೇರುಪೇಟೆ ಚೇತರಿಸಿಕೊಳ್ಳಲು ಕೊಡುಗೆ ನೀಡಿವೆ.

ನಿಫ್ಟಿ ಸೂಚ್ಯಂಕದಲ್ಲಿ ವಲಯವಾರು ಲೆಕ್ಕಾಚಾರದಲ್ಲಿ ವಾರದ ಪ್ರಗತಿ ನೋಡಿದಾಗ ರಿಯಲ್ ಎಸ್ಟೇಟ್ ಶೇ 7.82, ಮಾಧ್ಯಮ ಶೇ 7.64, ಎನರ್ಜಿ ಶೇ 6.33, ಫಾರ್ಮಾ ಶೇ 6.08, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 6, ಆಟೊ ಶೇ 5.85, ಫೈನಾನ್ಸ್ ಶೇ 5.49, ಬ್ಯಾಂಕ್ ಸೂಚ್ಯಂಕ ಶೇ 5.27, ಸರ್ವಿಸ್ ಶೇ 4,89, ಲೋಹ ಶೇ 4.85, ಎಫ್ಎಂಸಿಜಿ ಶೇ 2.1 ಮತ್ತು ಮಾಹಿತಿ ತಂತ್ರಜ್ಞಾನ ಶೇ 1.61ರಷ್ಟು ಗಳಿಸಿಕೊಂಡಿವೆ.

ಗಳಿಕೆ–ಇಳಿಕೆ: ವಾರದ ಗಳಿಕೆ ಲೆಕ್ಕಾಚಾರದಲ್ಲಿ ನಿಫ್ಟಿಯಲ್ಲಿ ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 11.52, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 9.25, ಶ್ರೀರಾಮ್ ಫೈನಾನ್ಸ್ ಶೇ 8.9, ಅಪೋಲೊ ಹಾಸ್ಪಿಟಲ್ಸ್ ಶೇ 8.65, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 8.42, ಬಜಾಜ್ ಆಟೊ ಶೇ 7.84, ಒಎನ್‌ಜಿಸಿ ಶೇ 7.58, ಕೋಲ್ ಇಂಡಿಯಾ ಶೇ 7.34, ಐಸಿಐಸಿಐ ಬ್ಯಾಂಕ್ ಶೇ 7.29, ಟಾಟಾ ಮೋಟರ್ಸ್ ಶೇ 7.24, ಎಲ್ ಆ್ಯಂಡ್ ಟಿ ಶೇ 7.18 ಮತ್ತು ಎಕ್ಸಿಸ್ ಬ್ಯಾಂಕ್ ಶೇ 6.58ರಷ್ಟು ಗಳಿಸಿಕೊಂಡಿವೆ. ಟೆಕ್ ಮಹೀಂದ್ರ ಶೇ 1.6 ಮತ್ತು ಐಟಿಸಿ ಶೇ 1.47ರಷ್ಟು ಕುಸಿದಿವೆ.

ಮುನ್ನೋಟ: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕ ಸಮರ, ಏಪ್ರಿಲ್ 7ರಿಂದ 9ರ ನಡುವೆ ನಡೆಯುವ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಬಡ್ಡಿದರದ ಬಗ್ಗೆ ಕೈಗೊಳ್ಳುವ ತೀರ್ಮಾನ ಸೇರಿ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹470

ಸರ್ಕಾರಿ ಬ್ಯಾಂಕ್‌ಗಳ ಲಾಭಾಂಶ ಪಾವತಿ ಏರಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಲಾಭಾಂಶ (ಡಿವಿಡೆಂಡ್) ಪಾವತಿ ಪ್ರಮಾಣದಲ್ಲಿ ಶೇ 33ರಷ್ಟು ಏರಿಕೆಯಾಗಿದೆ. ಇದು ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿಯ ಸದೃಢತೆಗೆ ಕನ್ನಡಿ ಹಿಡಿದಿದೆ.

2022–23ರಲ್ಲಿ ₹20,964 ಕೋಟಿ ಡಿವಿಡೆಂಡ್ ಪಾವತಿಸಿದ್ದವು. 2023–24ರಲ್ಲಿ ₹27,830 ಕೋಟಿ ಪಾವತಿಸಿವೆ. ಈ ಪೈಕಿ ಕೇಂದ್ರದ ಪಾಲು ಶೇ 65ರಷ್ಟಿದ್ದು, ಒಟ್ಟು ₹18,013 ಕೋಟಿ ಪಾವತಿಸಿವೆ ಎಂದು ಸರ್ಕಾರದ ಅಂಕಿಅಂಶ ತಿಳಿಸಿವೆ.

ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳು 2022–23ರಲ್ಲಿ ₹1.05 ಲಕ್ಷ ಕೋಟಿ ನಿವ್ವಳ ಲಾಭಗಳಿಸಿದ್ದರೆ, 2023–24ರಲ್ಲಿ ₹1.41 ಲಕ್ಷ ಕೋಟಿ ಲಾಭಗಳಿಸಿವೆ. 2024–25ನೇ ಆರ್ಥಿಕ ವರ್ಷದ ಮೊದಲ ಒಂಬತ್ತು ತಿಂಗಳ ಅವಧಿಯಲ್ಲಿ ₹1.29 ಲಕ್ಷ ಕೋಟಿ ಲಾಭ ಗಳಿಸಿವೆ.

ಕರ್ನಾಟಕದಲ್ಲಿ ಮತ್ತಷ್ಟು ಮಳಿಗೆ ವಿಸ್ತರಣೆ: ಕೆ.ಆರ್. ನಾಗರಾಜನ್ ಹೇಳಿಕೆ

‘ರಾಮ್‌ರಾಜ್‌ನಿಂದ 15 ಸಾವಿರ ಉದ್ಯೋಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಆಶಯದಡಿ ಕರ್ನಾಟಕದಾದ್ಯಂತ ಮತ್ತಷ್ಟು ಹೊಸ ಮಳಿಗೆಗಳನ್ನು ತೆರೆಯುವ ಮೂಲಕ ರಾಮ್‌ರಾಜ್ ಕಾಟನ್ ಸೇವೆಯನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ’ ಎಂದು ರಾಮ್‌ರಾಜ್ ಕಾಟನ್ ಸಂಸ್ಥೆಯ ಸಂಸ್ಥಾಪಕ ಮತ್ತು ಅಧ್ಯಕ್ಷ ಕೆ.ಆರ್. ನಾಗರಾಜನ್ ಹೇಳಿದರು.

ನಗರದ ಕೆಂಪೇಗೌಡ ರಸ್ತೆಯಲ್ಲಿ ಭಾನುವಾರ ನಡೆದ ಹೊಸ ಮಳಿಗೆಯ ಉದ್ಘಾಟನೆ ಬಳಿಕ ಮಾತನಾಡಿದ ಅವರು, ‘ಸಂಸ್ಥೆಯು ಸ್ಥಾಪನೆಗೊಂಡು 42 ವರ್ಷಗಳಾಗಿವೆ. ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ ಸೇರಿ ದೇಶದ ವಿವಿಧೆಡೆ ಮತ್ತು ವಿದೇಶಗಳಲ್ಲೂ ಮಳಿಗೆ ಸ್ಥಾಪಿಸಲಾಗಿದೆ’ ಎಂದು ವಿವರಿಸಿದರು.

ಇಲ್ಲಿಯವರೆಗೆ ಸಂಸ್ಥೆಯಿಂದ 15 ಸಾವಿರಕ್ಕೂ ಹೆಚ್ಚು ಜನರಿಗೆ ನೇರವಾಗಿ ಉದ್ಯೋಗ ಕಲ್ಪಿಸಲಾಗಿದೆ. ಪರೋಕ್ಷವಾಗಿ ಇಷ್ಟೇ ಸಂಖ್ಯೆಯ ಜನರಿಗೆ ಉದ್ಯೋಗ ಸಿಕ್ಕಿದೆ. ಪ್ರಸ್ತುತ ದೇಶದಾದ್ಯಂತ 350 ಮಳಿಗೆಗಳಿದ್ದು, ಈ ಪೈಕಿ ಕರ್ನಾಟಕದಲ್ಲಿ 65 ಮಳಿಗೆಗಳಿವೆ ಎಂದು ವಿವರಿಸಿದರು.

ಸಂಸ್ಥೆಯಿಂದ ತಯಾರಿಸುವ ಉಡುಪುಗಳನ್ನು ಶ್ರೀಲಂಕಾ, ಸಿಂಗಪುರ, ಮಲೇಷ್ಯಾ ಸೇರಿ ವಿವಿಧ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ ಎಂದು ಹೇಳಿದರು.

ರಾಮ್‌ರಾಜ್ ದೇಶದ ನಂಬಿಕೆಯ ಬ್ರ್ಯಾಂಡ್ ಆಗಿದೆ. ಮಹಾತ್ಮಗಾಂಧಿ ಅವರು ಧೋತಿ ಧರಿಸುವ ಮೂಲಕ ಸ್ವದೇಶಿ ಉಡುಪಿನ ಮಹತ್ವ ಸಾರಿದ್ದಾರೆ. ಇದು ಭಾರತೀಯ ಸಂಸ್ಕೃತಿಯ ದ್ಯೋತಕ ಆಗಿದೆ. ಈ ಪರಂಪರೆಯನ್ನು ಬೆಳೆಸಲು ಸಂಸ್ಥೆಯು ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ಈ ಬಾರಿಯ ಯುಗಾದಿ ಹಬ್ಬಕ್ಕೆ ಆಕರ್ಷಕ ಧೋತಿಗಳು ಹಾಗೂ ಹಲವು ಬಗೆಯ ಉಡುಪುಗಳಿವೆ. ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಖರೀದಿಗೆ ಲಭ್ಯವಿವೆ. ಆನ್‌ಲೈನ್‌ನಲ್ಲೂ ಖರೀದಿಸಬಹುದಾಗಿದೆ ಎಂದು ಹೇಳಿದರು.

ಮಳಿಗೆ ಉದ್ಘಾಟಿಸಿದ ಶಾಸಕ ಸಿ.ಪಿ. ಯೋಗೇಶ್ವರ್ ಮಾತನಾಡಿ, ‘ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದ ದೇಶೀಯ ಸಂಸ್ಕೃತಿಯು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಭಾರತೀಯ ಸಂಸ್ಕೃತಿ ಉಳಿಸುವಲ್ಲಿ ರಾಮ್‌ರಾಜ್ ಕೊಡುಗೆಯು ದೊಡ್ಡದಿದೆ’ ಎಂದು ಶ್ಲಾಘಿಸಿದರು.



ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಭಾನುವಾರ ರಾಮ್‌ರಾಜ್ ಕಾಟನ್ ಸಂಸ್ಥೆಯ ಹೊಸ ಮಳಿಗೆಯನ್ನು ಉದ್ಘಾಟಿಸಿದ ಶಾಸಕ ಸಿ.ಪಿ. ಯೋಗೇಶ್ವರ್ ಅವರು, ಉಡುಪುಗಳನ್ನು ವೀಕ್ಷಿಸಿದರು. ರಾಮ್‌ರಾಜ್ ಕಾಟನ್ ಸಂಸ್ಥೆಯ ಸಂಸ್ಥಾಪಕ ಮತ್ತು ಅಧ್ಯಕ್ಷ ಕೆ.ಆರ್. ನಾಗರಾಜನ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹321-595
ದ್ವಿತಳಿ (ಬಿ.ವಿ)	₹308-689

ಎಂಪಾಕ್ಸ್: ಪಾಕಿಸ್ತಾನದಲ್ಲಿ 2ನೇ ಪ್ರಕರಣ ಪತ್ತೆ

ಇಸ್ಲಾಮಾಬಾದ್ (ಪಿಟಿಐ): ಕರಾಚಿಯಲ್ಲಿ 29 ವರ್ಷದ ವ್ಯಕ್ತಿಗೆ ಎಂಪಾಕ್ಸ್ (ಮಂಕಿ ಪಾಕ್ಸ್) ಸೋಂಕು ತಗುಲಿರುವುದು ದೃಢಪಟ್ಟಿದೆ. ಇದು, ಪಾಕಿಸ್ತಾನದಲ್ಲಿ ಪತ್ತೆಯಾದ ಎರಡನೇ ಪ್ರಕರಣ ಎಂದು ಮಾಧ್ಯಮ ವರದಿ ತಿಳಿಸಿದೆ.

ಶಾ ಲತೀಫ್ ಪಟ್ಟಣದ ನಿವಾಸಿಯಾಗಿರುವ ರೋಗಿ ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಚರ್ಮದ ಅಲರ್ಜಿ ಚಿಕಿತ್ಸೆಗೆ ಎರಡು ದಿನದ ಹಿಂದೆ ಆಸ್ಪತ್ರೆಗೆ ಬಂದಿದ್ದರು. ತಪಾಸಣೆಯಲ್ಲಿ ಎಂಪಾಕ್ಸ್ ಇರುವುದು ಪತ್ತೆಯಾಗಿದೆ. ಸಿಂಧ್ ಪ್ರಾಂತ್ಯದಲ್ಲಿ ದಾಖಲಾಗಿರುವ ಮೊದಲ ಪ್ರಕರಣ ಇದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಮೆರಿಕದಲ್ಲೂ ಭಾರತದ ಗೋಲಿ ಸೋಡಾಕ್ಕೆ ಬೇಡಿಕೆ

ನವದೆಹಲಿ (ಪಿಟಿಐ): ದೇಶದ ಸಾಂಪ್ರದಾಯಿಕ ಪಾನೀಯವಾದ ಗೋಲಿ ಸೋಡಾಕ್ಕೆ ಅಮೆರಿಕ ಸೇರಿ ಜಾಗತಿಕ ಮಾರುಕಟ್ಟೆಯಲ್ಲಿ ಗ್ರಾಹಕರಿಂದ ಬೇಡಿಕೆ ವೃದ್ಧಿಸಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಡಿಯಲ್ಲಿ ಬರುವ ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು (ಎಪಿಇಡಿಎ) ಭಾನುವಾರ ತಿಳಿಸಿದೆ.

ಲುಲು ಹೈಪರ್ ಮಾರ್ಕೆಟ್ ಕೊಲ್ಲಿ ದೇಶಗಳಲ್ಲಿ ಅತಿದೊಡ್ಡ ಚಿಲ್ಲರೆ ಮಾರಾಟ ಕಂಪನಿಯಾಗಿದೆ. ಗೋಲಿ ಪಾಪ್ ಸೋಡಾ ಬ್ರ್ಯಾಂಡ್‌ನಡಿ ಮಾರಾಟ ಮಾಡಲಾಗುತ್ತಿದೆ. ಹೊಸ ಪ್ಯಾಕೇಜಿಂಗ್ ಶೈಲಿಯು ಬೇಡಿಕೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದೆ.

ಗೋಲಿ ಸೋಡಾವು ಬ್ರಿಟನ್, ಯುರೋಪ್ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿ ಮಾರುಕಟ್ಟೆ ಸೃಷ್ಟಿಸಿಕೊಂಡಿದೆ ಎಂದು ತಿಳಿಸಿದೆ.

ಬಹುರಾಷ್ಟ್ರೀಯ ಪಾನೀಯ ಕಂಪನಿಗಳ ಪ್ರಾಬಲ್ಯದಿಂದ ಗೋಲಿ ಸೋಡಾವು ಕಣ್ಮರೆಯ ಹಾದಿಯಲ್ಲಿತ್ತು. ಆದರೆ, ಸರ್ಕಾರದ ಉತ್ತೇಜನ ಮತ್ತು ರಫ್ತಿನಿಂದ ಜಾಗತಿಕ ಮಾರುಕಟ್ಟೆಯಲ್ಲಿ ಸ್ಥಾನ ಪಡೆದಿದೆ ಎಂದು ಹೇಳಿದೆ.

ಕತ್ತು ಸೀಳಿ ಮಗನ ಕೊಂದ ಭಾರತೀಯ ಮಹಿಳೆ ಬಂಧನ

ನ್ಯೂಯಾರ್ಕ್ (ಪಿಟಿಐ): ಭಾರತ ಮೂಲದ ಮಹಿಳೆಯೊಬ್ಬರು ತನ್ನ 11 ವರ್ಷದ ಮಗನ ಕತ್ತನ್ನು ಚಾಕುವಿನಿಂದ ಸೀಳಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

‘ಯತಿನ್ ಮೃತ ಬಾಲಕ. ಈತನ ತಾಯಿ, 48 ವರ್ಷ ವಯಸ್ಸಿನ ಸರಿತಾ ರಾಮರಾಜು ಆರೋಪಿ. ಇವರ ವಿರುದ್ಧದ ಆರೋಪ ಸಾಬೀತಾದಲ್ಲಿ 26 ವರ್ಷ ಸಜೆ ವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ’ ಎಂದು ಕ್ಯಾಲಿಫೋರ್ನಿಯಾದ ಆರೆಂಜ್ ಕೌಂಟಿ ಜಿಲ್ಲೆಯ ಆಟಾರ್ನಿ ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಪತಿಯಿಂದ ವಿಚ್ಛೇದನ ಪಡೆದ ಬಳಿಕ ಸರಿತಾ ಅವರು ಸಾಂಟಾ ಅನಾ ನಗರದಲ್ಲಿ ವಾಸಿಸುತ್ತಿದ್ದರು. ಮಗ ತನ್ನ ವಶದಲ್ಲಿ ಇದ್ದ ಅವಧಿಯಲ್ಲಿ ಡಿಸ್ನಿಲ್ಯಾಂಡ್‌ಗೆ ಮೂರು ದಿನದ ಪ್ರವಾಸ ತೆರಳಿದ್ದರು. ಮಾರ್ಚ್ 19ರಂದು ಆತನ ತಂದೆಯ ವಶಕ್ಕೆ ಮಗನನ್ನು ಒಪ್ಪಿಸಬೇಕಿತ್ತು. ಅದೇ ದಿನ ಪೊಲೀಸರಿಗೆ ಕರೆ ಮಾಡಿ ‘ಮಗನನ್ನು ಕೊಂದಿದ್ದೇನೆ’ ಎಂದು ತಿಳಿಸಿದ್ದರು.

ಪೊಲೀಸರು ಸ್ಥಳಕ್ಕೆ ತೆರಳಿದಾಗ ಕತ್ತು ಸೀಳಿದ ಸ್ಥಿತಿಯಲ್ಲಿ ಬಾಲಕನ ಶವ ಕಂಡುಬಂದಿತ್ತು. ‘ಸ್ಥಳದಲ್ಲಿ ಹಿಂದಿನ ದಿನ ಖರೀದಿಸಿದ್ದ ಚಾಕು ಸಿಕ್ಕಿದೆ. ಕೊಲೆ ಆರೋಪದಡಿ ಮಹಿಳೆಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತ ಮೂಲದ ತಂದೆ–ಮಗಳ ಹತ್ಯೆ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ವರ್ಜೀನಿಯಾ ನಗರದ ವಾಣಿಜ್ಯ ಮಳಿಗೆಯೊಂದರಲ್ಲಿ ಭಾರತ ಮೂಲದ 56 ವರ್ಷದ ವ್ಯಕ್ತಿ ಮತ್ತು ಅವರ 24 ವರ್ಷದ ಪುತ್ರಿಯನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

ಗುಂಡಿನ ದಾಳಿ ಆರೋಪದಡಿ ಪೊಲೀಸರು ವ್ಯಕ್ತಿಯೊಬ್ಬನನ್ನು ಬಂಧಿಸಿದ್ದಾರೆ. ಅಕೊಮ್ಯಾಕ್ ಕೌಂಟಿ ನಗರದ ಮಳಿಗೆಯಲ್ಲಿ ತಂದೆ ಪ್ರದೀಪ್‌ಕುಮಾರ್ ಪಟೇಲ್ ಮತ್ತು ಅವರ ಪುತ್ರಿ ಕೆಲಸ ಮಾಡುವಾಗ ಕೃತ್ಯ ನಡೆದಿದೆ. ‘ಬಂಧಿತ 44 ವರ್ಷದ ವ್ಯಕ್ತಿ ಸದ್ಯ ಜೈಲಿನಲ್ಲಿದ್ದಾನೆ. ಕೊಲೆಗೆ ಕಾರಣ ತಿಳಿದುಬಂದಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರ ಸಂಬಂಧಿಯೂ ಆದ ಮಳಿಗೆಯ ಮಾಲೀಕ ಪರೇಶ್ ಪಟೇಲ್ ದೂರು ನೀಡಿದ್ದಾರೆ.

ಕಮಲಾದೇವಿಗೆ ಸಿಂಗಪುರ ‘ಹಾಲ್ ಆಫ್ ಫೇಮ್’ ಗೌರವ

ಸಿಂಗಪುರ (ಪಿಟಿಐ): ಭಾರತ ಮೂಲದ ಲೇಖಕಿ ಮತ್ತು ನಾಟಕ ರಚನಕಾರ್ತಿ ಕಮಲಾದೇವಿ ಅರವಿಂದನ್ ಅವರು ಸಿಂಗಪುರದ ‘ವಿಮೆನ್ಸ್ ಹಾಲ್ ಆಫ್ ಫೇಮ್’ ಗೌರವಕ್ಕೆ ಪಾತ್ರರಾಗಿದ್ದಾರೆ. ಆರು ಮಂದಿಗೆ ಈ ಪ್ರಶಸ್ತಿಯನ್ನು ಘೋಷಿಸಲಾಗಿದೆ.

ಇದರೊಂದಿಗೆ, 2014ರಿಂದ ಈಚೆಗೆ 198 ಮಹಿಳೆಯರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಸಿಂಗಪುರದ ಮಹಿಳಾ ಸಂಘಟನೆಗಳ ಮಂಡಳಿಯು ಈ ಪ್ರಶಸ್ತಿಯನ್ನು ನೀಡುತ್ತದೆ. ಲಿಂಗ ಸಮಾನತೆಯಲ್ಲಿನ ಪ್ರಗತಿ, ಸಿಂಗಪುರದ ಇತಿಹಾಸ, ಸಮಾಜ ಮತ್ತು ಪ್ರಗತಿಗೆ ನೀಡುವ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತದೆ.

ಅರವಿಂದನ್ ಅವರು ತಮಿಳು ಮತ್ತು ಮಲಯಾಳ ಲೇಖಕಿಯಾಗಿದ್ದು, ಅವರ ಕೆಲವು ಬರಹಗಳು ಇಂಗ್ಲಿಷ್ ಭಾಷೆಗೆ ತರ್ಜುಮೆಯಾಗಿವೆ.

ಅವರ 160 ಸಣ್ಣಕತೆಗಳು, 18 ನಾಟಕಗಳು, 300 ರೇಡಿಯೊ ನಾಟಕಗಳು ಮತ್ತು ಐದು ಪುಸ್ತಕಗಳು ಪ್ರಕಟವಾಗಿವೆ.

ಹಮಾಸ್ ರಾಜಕೀಯ ನಾಯಕ ಸೇರಿ 19 ಮಂದಿ ಬಲಿ

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಪ್ಯಾಲೆಸ್ಟೀನ್‌ನ ದಕ್ಷಿಣ ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ವಾಯುಸೇನೆಯು ಭಾನುವಾರವೂ ದಾಳಿ ಮುಂದುವರಿಸಿದ್ದು, ಹಮಾಸ್ ಹಿರಿಯ ರಾಜಕೀಯ ನಾಯಕ ಸೇರಿದಂತೆ 19 ಮಂದಿ ಮೃತಪಟ್ಟಿದ್ದಾರೆ.

ಇದುವರೆಗೆ 50 ಸಾವಿರಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರು ಹತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಹಮಾಸ್ ಜೊತೆ ನಂಟು ಹೊಂದಿರುವ ಇರಾನ್ ಬೆಂಬಲಿತ ಹುಥಿ ಬಂಡುಕೋರರು ಇಸ್ರೇಲ್ ಮೇಲೆ ಭಾನುವಾರ ಕ್ಷಿಪಣಿ ದಾಳಿ ನಡೆಸಿದರು. ಅದನ್ನು ಆಕಾಶ ಮಾರ್ಗದಲ್ಲೇ ಹೊಡೆದುರುಳಿಸಲಾಗಿದ್ದು, ಯಾವುದೇ ಸಾವು–ನೋವು ಸಂಭವಿಸಿಲ್ಲ’ ಎಂದು ಇಸ್ರೇಲ್ ತಿಳಿಸಿದೆ.


‘ದಾಳಿಯಲ್ಲಿ ಸತ್ತ 17 ಮಂದಿಯ ಮೃತದೇಹಗಳು ದಕ್ಷಿಣ ಗಾಜಾದಲ್ಲಿರುವ ಎರಡು ಆಸ್ಪತ್ರೆಗೆ ತಲುಪಿವೆ. ಮೃತರಲ್ಲಿ ಮಹಿಳೆಯರು, ಮಕ್ಕಳು ಹೆಚ್ಚಾಗಿ ಇದ್ದಾರೆ’ ಎಂದು ಆಸ್ಪತ್ರೆ ಸಿಬ್ಬಂದಿ ತಿಳಿಸಿದ್ದಾರೆ.



ಗಾಜಾ ಪಟ್ಟಿಯ ದಕ್ಷಿಣ ಭಾಗದಲ್ಲಿ ಇಸ್ರೇಲ್ ವಾಯು ದಾಳಿ ನಡೆಸಿದ ಬಳಿಕ ನಾಶಗೊಂಡ ಕಟ್ಟಡದ ಮುಂದೆ ಪ್ಯಾಲೆಸ್ಟೀನ್‌ನ ಮಕ್ಕಳು ನಿಂತಿದ್ದರು ಎಎಫ್‌ಪಿ ಚಿತ್ರ

‘ಖಾನ್ ಯೂನಿಸ್ ಮೇಲೆ ನಡೆದ ದಾಳಿಯಲ್ಲಿ ಸಂಘಟನೆಯ ರಾಜಕೀಯ ವಿಭಾಗದ ಸದಸ್ಯ ಸಲಾ ಬರ್ದಾವಿಲ್ ಹಾಗೂ ಅವರ ಪತ್ನಿ ಮೃತಪಟ್ಟಿದ್ದಾರೆ’ ಎಂದು ಹಮಾಸ್ ಅಧಿಕೃತವಾಗಿ ಪ್ರಕಟಿಸಿದೆ. ಆಸ್ಪತ್ರೆಯು ಪ್ರಕಟಿಸಿದ ಮೃತರ ಪಟ್ಟಿಯಲ್ಲಿ ಇವರಿಬ್ಬರ ಹೆಸರು ಸೇರಿಲ್ಲ.







ರನ್ ಹೊಳೆಯಲ್ಲಿ ಈಜಿ ಗೆದ್ದ ಸನ್

ಇಶಾನ್ ಕಿಶನ್ ಅಬ್ಬರದ ಶತಕ • ಹೆಡ್ ಸಿಡಿಲಬ್ಬರ • ರಾಯಲ್ಸ್ ಹೋರಾಟಕ್ಕೆ ಸಿಗದ ಫಲ

ಹೈದರಾಬಾದ್ (ಪಿಟಿಐ): ಇಶಾನ್ ಕಿಶನ್ ಸಿಡಿಲಬ್ಬರದ ಶತಕದಿಂದ ಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ 45 ಎಸೆತಗಳಲ್ಲಿ ಶತಕ ಹೊಡೆದ ಇಶಾನ್ ಮತ್ತು 31 ಎಸೆತಗಳಲ್ಲಿ 67 ರನ್ ಸಿಡಿಸಿದ ಟ್ರಾವಿಸ್ ಹೆಡ್ ಅವರ ಬ್ಯಾಟಿಂಗ್‌ನಿಂದ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 286 ರನ್ ಗಳಿಸಿತು. ಐಪಿಎಲ್‌ನಲ್ಲಿ ಇದು ಎರಡನೇ ಗರಿಷ್ಠ ಮೊತ್ತವಾಗಿದೆ. ಅತಿ ಹೆಚ್ಚಿನ ಮೊತ್ತದ (287) ದಾಖಲೆಯೂ ಸನ್‌ರೈಸರ್ಸ್ ಹೆಸರಿನಲ್ಲಿಯೇ ಇದೆ.

ಗುರಿ ಬೆನ್ನಟ್ಟಿದ ರಾಜಸ್ಥಾನ ರಾಯಲ್ಸ್ ತಂಡದ ಸಂಜು ಸ್ಯಾಮ್ಸನ್ (66; 37ಎ, 4X7, 6X4) ಮತ್ತು ಧ್ರುವ ಜುರೇಲ್ (70; 35ಎ, 4X5, 6X6) ಅವರ ಅಬ್ಬರದ ಹೊರತಾಗಿಯೂ ಜಯ ಗಳಿಸಲು ಸಾಧ್ಯವಾಗಲಿಲ್ಲ. 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 242 ರನ್ ಗಳಿಸಿದ ರಾಯಲ್ಸ್ 44 ರನ್‌ಗಳಿಂದ ಸೋತಿತು.

ಟಾಸ್ ಗೆದ್ದ ರಾಜಸ್ಥಾನ ತಂಡದ ಹಂಗಾಮಿ ನಾಯಕ ರಿಯಾನ್ ಪರಾಗ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಸನ್‌ರೈಸರ್ಸ್ ತಂಡವು ಹೋದ ವರ್ಷದ ಟೂರ್ನಿಯಂತೆ ಈ ಸಲವೂ ಆಕ್ರಮಣಕಾರಿ ಬ್ಯಾಟಿಂಗ್ ತಂತ್ರಗಾರಿಕೆಯನ್ನು ಮುಂದುವರಿಸಿತು.

ಮೊದಲ ಓವರ್‌ನಿಂದಲೇ ಚೆಂಡನ್ನು ಬೌಂಡರಿ ಗೆರೆ ದಾಟಿಸುವುದರಲ್ಲಿ ಬ್ಯಾಟರ್‌ಗಳು ಮಗ್ನರಾದರು. ಆರಂಭಿಕ ಜೋಡಿ ಅಭಿಷೇಕ್ ಶರ್ಮಾ (24; 11ಎ) ಮತ್ತು ಮತ್ತು ಹೆಡ್ ಕೇವಲ 3 ಓವರ್‌ಗಳಲ್ಲಿ 45 ರನ್ ಗಳಿಸಿದರು. ಸ್ಪಿನ್ನರ್ ತೀಕ್ಷಣ ಬೌಲಿಂಗ್‌ನಲ್ಲಿ ಯಶಸ್ವಿ ಜೈಸ್ವಾಲ್ ಪಡೆದ ಕ್ಯಾಚ್‌ಗೆ ಅಭಿಷೇಕ್ ಆಟಕ್ಕೆ ತೆರೆಬಿತ್ತು. ಕ್ರೀಸ್‌ಗೆ ಇಶಾನ್ ಕಿಶನ್ ಅವರು ಹೆಡ್ ಜೊತೆಗೂಡಿ ರಾಯಲ್ಸ್‌ಗೆ ತಲೆನೋವು ತಂದರು. ಹೆಡ್ 9 ಬೌಂಡರಿ ಮತ್ತು 3 ಸಿಕ್ಸರ್‌ಗಳನ್ನು ಸಿಡಿಸಿದರು. ಆಸ್ಟ್ರೇಲಿಯಾದ ಹೆಡ್ 21 ಎಸೆತಗಳಲ್ಲಿ ಅರ್ಧಶತಕ ದಾಟಿದರು.

ಇದೇ ಮೊದಲ ಬಾರಿ ಸನ್‌ರೈಸರ್ಸ್ ತಂಡದಲ್ಲಿ ಸ್ಥಾನ ಪಡೆದಿರುವ ಇಶಾನ್ ಬೀಸಾಟವೂ ರಂಗೇರಿತು. ಇದರಿಂದಾಗಿ ತಂಡದ ಮೊತ್ತವು ಏಳು ಓವರ್ ದಾಟುವ ಮುನ್ನವೇ 100ರ ಗಡಿ ದಾಟಿತು. ಇಶಾನ್ 25 ಎಸೆತಗಳಲ್ಲಿ ಅರ್ಧಶತಕ ಹೊಡೆದರು. 10ನೇ ಓವರ್‌ನಲ್ಲಿ ಹೆಡ್ ಔಟಾದ ನಂತರ ಇಶಾನ್ ತುಸು ಹೊತ್ತು ಎಚ್ಚರಿಕೆಯಿಂದ ಆಡಿದರು. ಆದರೆ ಕ್ರೀಸ್‌ಗೆ ಬಂದ ನಿತೀಶ್ (15ಎಸೆತಗಳಲ್ಲಿ30) ಬೌಲರ್‌ಗಳನ್ನು ದಂಡಿಸಿದರು. ಅವರು ಔಟಾದ ನಂತರ ಹೆನ್ರಿಚ್ ಕ್ಲಾಸೆನ್ (34; 14ಎ) ಕೂಡ ಅಬ್ಬರಿಸಿದರು. ಇದರಿಂದಾಗಿ ಮೊತ್ತವು 18 ಓವರ್‌ಗಳಲ್ಲಿ 250ರ ಗಡಿ ದಾಟಿತು. ಕ್ಲಾಸೆನ್ ಔಟಾದಾಗ, ಶತಕದ ಸನಿಹದಲ್ಲಿದ್ದ ಇಶಾನ್ ನಿರ್ಭಿತಿಯಿಂದ ಬ್ಯಾಟಿಂಗ್ ಮಾಡಿದರು. ಸಂದೀಪ್ ಶರ್ಮಾ ಹಾಕಿದ 19ನೇ ಓವರ್‌ನಲ್ಲಿ ಎರಡು ಸಿಕ್ಸರ್ ಹೊಡೆದರು. ತಾವೆದುರಿಸಿದ 45ನೇ ಎಸೆತದಲ್ಲಿ ಎರಡು ರನ್ ಗಳಿಸಿ ಶತಕದ ಗಡಿ ಮುಟ್ಟಿದರು. ಐಪಿಎಲ್‌ನಲ್ಲಿ ಇದು ಅವರ ಚೊಚ್ಚಲ ಶತಕ.

ಸನ್‌ರೈಸರ್ಸ್ ತಂಡದ ಮೊದಲ ಆರು ಬ್ಯಾಟರ್‌ಗಳು 200ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ವೇಗಿ ತುಷಾರ ದೇಶಪಾಂಡೆ ಅವರು ಕೊನೆಯ ಓವರ್‌ನಲ್ಲಿ ಎರಡು ವಿಕೆಟ್ ಗಳಿಸಿದ್ದರಿಂದ ಸನ್‌ರೈಸರ್ಸ್ ತಂಡದ ತ್ರಿಶತಕದ ದಾಖಲೆ ತಪ್ಪಿತು.

ರಾಯಲ್ಸ್ ತಂಡವು ಸುಲಭವಾಗಿ ಸೋಲಲಿಲ್ಲ. ಆರಂಭಿಕ ಯಶಸ್ವಿ ಜೈಸ್ವಾಲ್ (1 ರನ್) ಮತ್ತು ರಿಯಾನ್ ಪರಾಗ್ (4 ರನ್) ಅವರಿಬ್ಬರೂ ಸಿಮರ್ಜೀತ್ ಸಿಂಗ್ ಹಾಕಿದ ಎರಡನೇ ಓವರ್‌ನಲ್ಲಿ ಔಟಾದರು. ಈ ಹಂತದಲ್ಲಿ ಸಂಜು ಬ್ಯಾಟ್ ಬೀಸಿದರು. ನಿತೀಶ್ ರಾಣಾ (11 ರನ್) ಕೂಡ ನಿರ್ಗಮಿಸಿದರು. ಸಂಜು ಜೊತೆಗೂಡಿದ ಜುರೇಲ್ 4ನೇ ವಿಕೆಟ್ ಜೊತೆಯಾಟದಲ್ಲಿ 111 ರನ್ ಸೇರಿಸಿದರು. ಸಂಜು ಮತ್ತು ಜುರೇಲ್ ಔಟಾದ ನಂತರವೂ ಶಿಮ್ರಾನ್ ಹೆಟ್ಮೆಯರ್ ಮತ್ತು ಶುಭಂ ದುಬೆ ಅವರು ತಲಾ 4 ಸಿಕ್ಸರ್ ಹೊಡೆದರು. ಆದರೆ ಅವರ ಪ್ರಯತ್ನಗಳಿಗೆ ಫಲ ಸಿಗಲಿಲ್ಲ.



ಸನ್‌ರೈಸರ್ಸ್ ತಂಡದ ಇಶಾನ್ ಕಿಶನ್ ಶತಕ ಸಂಭ್ರಮ –ಎಎಫ್‌ಪಿ ಚಿತ್ರ

ಪ್ರಮುಖ ಅಂಶಗಳು

528
ಈ ಪಂದ್ಯದಲ್ಲಿ ಉಭಯ ತಂಡಗಳು ಸೇರಿ ಗಳಿಸಿದ ಒಟ್ಟು ರನ್‌ಗಳು. ಹೋದ ವರ್ಷ ಸನ್‌ರೈಸರ್ಸ್–ಆರ್‌ಸಿಬಿ ಪಂದ್ಯದಲ್ಲಿ 549 ಮತ್ತು ಸನ್‌ರೈಸರ್ಸ್–ಮುಂಬೈ ಇಂಡಿಯನ್ಸ್ ಪಂದ್ಯದಲ್ಲಿ **523** ರನ್‌ಗಳು ಸೇರಿದ್ದವು.

0/76
ರಾಜಸ್ಥಾನ ರಾಯಲ್ಸ್ ತಂಡದ ವೇಗಿ ಜೋಫ್ರಾ ಆರ್ಚರ್ ನೀಡಿದ ರನ್‌ಗಳು ಐಪಿಎಲ್‌ನಲ್ಲಿಯೇ ಇದು ಗರಿಷ್ಠ. ಹೋದ ವರ್ಷ ಗುಜರಾತ್ ಟೈಟನ್ಸ್ ತಂಡದ ಮೋಹಿತ್ ಶರ್ಮಾ **4** ಓವರ್‌ಗಳಲ್ಲಿ **73** ರನ್ ನೀಡಿದ್ದರು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 6ಕ್ಕೆ286 (20 ಓವರುಗಳಲ್ಲಿ)
ಅಭಿಷೇಕ್ ಸಿ ಜೈಸ್ವಾಲ್ ಬಿ ತೀಕ್ಷಣ 24 (11ಎ, 4x5)
ಹೆಡ್ ಸಿ ಹೆಟ್ಮೆಯರ್ ಬಿ ದೇಶಪಾಂಡೆ 67 (31ಎ, 4x9, 6x3)
ಇಶಾನ್ ಕಿಶಾನ್ ಔಟಾಗದೇ 106 (47ಎ, 4x11, 6x6)
ನಿತೀಶ್ ರೆಡ್ಡಿ ಸಿ ಜೈಸ್ವಾಲ್ ಬಿ ತೀಕ್ಷಣ 30 (15ಎ, 4x4, 6x1)
ಕ್ಲಾಸೆನ್ ಸಿ ಪರಾಗ್ ಬಿ ಸಂದೀಪ್ 34 (14ಎ, 4x5, 6x1)
ಅನಿಕೇತ್ ಸಿ ಆರ್ಚರ್ ಬಿ ದೇಶಪಾಂಡೆ 7 (3ಎ, 6x1)
ಅಭಿನವ್ ಸಿ ಪರಾಗ್ ಬಿ ದೇಶಪಾಂಡೆ 0 (1ಎ)
ಕಮಿನ್ಸ್ ಔಟಾಗದೇ 0 (1ಎ)
ಇತರೆ: 18 (ಬೈ 4, ಲೆಗ್ ಬೈ 1, ನೋಬಾಲ್ 3, ವೈಡ್ 10)
ವಿಕೆಟ್ ಪತನ: 1–45 (ಅಭಿಷೇಕ್ ಶರ್ಮಾ, 3.1), 2–130 (ಟ್ರಾವಿಸ್ ಹೆಡ್, 9.3), 3–202 (ನಿತೀಶ್ ಕುಮಾರ್ ರೆಡ್ಡಿ, 14.2), 4–258 (ಹೆನ್ರಿಚ್ ಕ್ಲಾಸೆನ್, 18.2), 5–279 (ಅನಿಕೇತ್ ವರ್ಮಾ, 19.2), 6–279 (ಅಭಿನವ್ ಮನೋಹರ್, 19.3)
ಬೌಲಿಂಗ್: ಫಜಲಖ್ ಫಾರೂಖಿ 3–0–49–0; ಮಹೀಷ ತೀಕ್ಷಣ 4–0–52–2; ಜೋಫ್ರಾ ಆರ್ಚರ್ 4–0–76–0; ಸಂದೀಪ್ ಶರ್ಮಾ 4–0–51–1; ನಿತೀಶ್ ರಾಣಾ 1–0–9–0; ತುಷಾರ್ ದೇಶಪಾಂಡೆ 4–0–44–3.

ರಾಜಸ್ಥಾನ ರಾಯಲ್ಸ್: 6ಕ್ಕೆ242 (20 ಓವರುಗಳಲ್ಲಿ)
ಜೈಸ್ವಾಲ್ ಸಿ ಮನೋಹರ್ ಬಿ ಸಿಮರ್ಜೀತ್ 1 (5ಎ)
ಸ್ಯಾಮ್ಸನ್ ಸಿ ಕ್ಲಾಸೆಬ್ ಬಿ ಹರ್ಷಲ್ 66 (37, 4x7, 6x4)
ಪರಾಗ್ ಸಿ ಕಮಿನ್ಸ್ ಬಿ ಸಿಮರ್ಜೀತ್ 4 (2ಎ, 4x1)
ರಾಣಾ ಸಿ ಕಮಿನ್ಸ್ ಬಿ ಶಮಿ 11 (8ಎ, 4x2)
ಜುರೆಲ್ ಸಿ ಇಶಾನ್ ಬಿ ಜಂಪಾ 70 (35ಎ, 4x5, 6x6)
ಹೆಟ್ಮೇಯರ್ ಸಿ ಮನೋಹರ್ ಬಿ ಹರ್ಷಲ್ 42 (23, 4x1, 6x4)
ಶುಭಂ ದುಬೆ ಔಟಾಗದೇ 34 (11ಎ, 4x1, 6x4)
ಆರ್ಚರ್ ಔಟಾಗದೇ 1 (1ಎ)
ಇತರೆ: 13 (ಬೈ 4, ನೋಬಾಲ್ 2, ವೈಡ್ 7)
ವಿಕೆಟ್ ಪತನ: 1–20 (ಯಶಸ್ವಿ ಜೈಸ್ವಾಲ್, 1.3), 2–24 (ರಿಯಾನ್ ಪರಾಗ್, 1.5), 3–50 (ನಿತೀಶ್ ರಾಣಾ, 4.1), 4–161 (ಸಂಜು ಸ್ಯಾಮ್ಸನ್, 13.6), 5–161 (ಧ್ರುವ್ ಜುರೆಲ್, 14.2), 6–241 (ಶಿಮ್ರಾನ್ ಹೆಟ್ಮೇಯರ್, 19.5).
ಬೌಲಿಂಗ್: ಮೊಹಮ್ಮದ್ ಶಮಿ 3–0–33–1; ಸಿಮರ್ಜೀತ್ ಸಿಂಗ್ 3–0–46–2; ಪ್ಯಾಟ್ ಕಮಿನ್ಸ್ 4–0–60–0; ಅಭಿಷೇಕ್ ಶರ್ಮಾ 2–0–17–0; ಆ್ಯಡಂ ಜಂಪಾ 4–0–48–1; ಹರ್ಷಲ್ ಪಟೇಲ್ 4–0–34–2.
ಪಂದ್ಯದ ಆಟಗಾರ: ಇಶಾನ್ ಕಿಶನ್

ಫಲಿತಾಂಶ: ಸನ್‌ರೈಸರ್ಸ್‌ಗೆ 44 ರನ್‌ಗಳ ಗೆಲುವು

ಐಪಿಎಲ್‌ನಲ್ಲಿ ಗರಿಷ್ಠ ಮೊತ್ತ ಗಳಿಸಿದ ತಂಡಗಳು


ಮೊತ್ತ	ತಂಡ	ಎದುರಾಳಿ	ಸ್ಥಳ	ವರ್ಷ
3ಕ್ಕೆ287	ಸನ್‌ರೈಸರ್ಸ್	ಆರ್‌ಸಿಬಿ	ಬೆಂಗಳೂರು	2024
6ಕ್ಕೆ286	ಸನ್‌ರೈಸರ್ಸ್	ರಾಜಸ್ಥಾನ	ಹೈದರಾಬಾದ್	2025
3ಕ್ಕೆ277	ಸನ್‌ರೈಸರ್ಸ್	ಮುಂಬೈ	ಹೈದರಾಬಾದ್	2024
7ಕ್ಕೆ272	ಕೋಲ್ಕತ್ತ	ಡೆಲ್ಲಿ	ವಿಶಾಖಪಟ್ಟಣ	2024
7ಕ್ಕೆ266	ಸನ್‌ರೈಸರ್ಸ್	ಡೆಲ್ಲಿ	ನವದೆಹಲಿ	2024
5ಕ್ಕೆ263	ಆರ್‌ಸಿಬಿ	ಪುಣೆ ವಾರಿಯರ್ಸ್	ಬೆಂಗಳೂರು	2013

ರಚಿನ್, ನೂರ್ ಆಟಕ್ಕೆ ಜಯ

ಚೆನ್ನೈ (ಪಿಟಿಐ): ರಚಿನ್ ರವೀಂದ್ರ ಅಜೇಯ ಅರ್ಧಶತಕ ಮತ್ತು ಋತುರಾಜ್ ಗಾಯಕವಾಡ ಅವರ ಮಿಂಚಿನ ಬ್ಯಾಟಿಂಗ್ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶುಭಾರಂಭ ಮಾಡಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮುಂಬೈ ಇಂಡಿಯನ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 155 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಚೆನ್ನೈ ತಂಡವು 4 ವಿಕೆಟ್‌ಗಳಿಂದ ಜಯಿಸಿತು. ಆದರೆ ಮುಂಬೈ ತಂಡದಲ್ಲಿ ಪದಾರ್ಪಣೆ ಮಾಡಿದ ಎಡಗೈ ಸ್ಪಿನ್ನರ್ ವಿಘ್ನೇಷ್ ಪುತ್ತೂರ್ (32ಕ್ಕೆ3) ಅವರ ದಾಳಿಯಿಂದಾಗಿ ಚೆನ್ನೈ ತಂಡಕ್ಕೆ ಸುಲಭ ಜಯ ಒಲಿಯಲಿಲ್ಲ.

ರಚಿನ್ ಮತ್ತು ನಾಯಕ ಋತುರಾಜ್ 2ನೇ ವಿಕೆಟ್ ಜೊತೆಯಾಟದಲ್ಲಿ 67 ರನ್ ಸೇರಿಸಿದರು. ಎಂಟನೇ ಓವರ್‌ನಲ್ಲಿ ಋತುರಾಜ್ (53; 26ಎ, 4X6, 6X3) ವಿಕೆಟ್ ಗಳಿಸುವಲ್ಲಿ ಯಶಸ್ವಿಯಾದ ವಿಘ್ನೇಷ್ ಜೊತೆಯಾಟ ಮುರಿದರು. ತಮ್ಮ ಇನ್ನೆರಡು ಓವರ್‌ಗಳಲ್ಲಿ ಶಿವಂ ದುಬೆ ಮತ್ತು ದೀಪಕ್ ಹೂಡಾ ಅವರ ವಿಕೆಟ್‌ಗಳನ್ನೂ ವಿಘ್ನೇಶ್ ಗಳಿಸಿದರು. ಆದರೆ ಆರಂಭಿಕ ಬ್ಯಾಟರ್ ರಚಿನ್ (ಔಟಾಗದೇ 65; 45ಎ, 4X2, 6X4) ಮತ್ತು ರವೀಂದ್ರ ಜಡೇಜ (17; 18ಎ, 4X1) ಎಚ್ಚರಿಕೆಯಿಂದ ಆಡಿದರು. ವಿಘ್ನೇಶ್ ಹಾಕಿದ 18ನೇ ಓವರ್‌ನಲ್ಲಿ ರಚಿನ್ ಮುನ್ನುಗ್ಗಿ ಎರಡು ಸಿಕ್ಸರ್ ಬಾರಿಸಿದರು. ಅದರೊಂದಿಗೆ ತಮ್ಮ ತಂಡದ ಗೆಲುವಿನ ಹಾದಿ ಸುಲಭಗೊಳಿಸಿದರು. ಜಯಕ್ಕೆ 4 ರನ್‌ಗಳ ಅಗತ್ಯವಿದ್ದಾಗ ಜಡೇಜ ರನ್‌ಔಟ್ ಆದರು. ಆಗ ಮಹೇಂದ್ರಸಿಂಗ್ ಧೋನಿ ಕ್ರೀಸ್‌ಗೆ ಬಂದರು. ಅವರು ಎರಡು ಎಸೆತಗಳನ್ನು ಎದುರಿಸಿದರು. ಆದರೆ ರನ್ ಗಳಿಸಲಿಲ್ಲ.


ನೂರ್



ರಚಿನ್ ರವೀಂದ್ರ ಬ್ಯಾಟಿಂಗ್ ವೈಖರಿ ಎಎಫ್‌ಪಿ ಚಿತ್ರ

ಖಲೀಲ್–ನೂರ್ ದಾಳಿ: ಚೆನ್ನೈನ ಎಡಗೈ ವೇಗಿ ಖಲೀಲ್ ಅಹಮದ್ (29ಕ್ಕೆ3) ಮತ್ತು ಅಫ್ಗಾನಿಸ್ತಾನದ ಎಡಗೈ ಸ್ಪಿನ್ನರ್ ನೂರ್ ಅಹಮದ್ (18ಕ್ಕೆ4) ಅವರಿಬ್ಬರ ಬೌಲಿಂಗ್ ಮುಂದೆ ಮುಂಬೈ ಇಂಡಿಯನ್ಸ್ ತಂಡವು ಸಾಧಾರಣ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 9ಕ್ಕೆ155 (ಸೂರ್ಯಕುಮಾರ್ ಯಾದವ್ 29, ತಿಲಕ್ ವರ್ಮಾ 31, ದೀಪಕ್ ಚಾಹರ್ ಔಟಾಗದೇ 28, ಖಲೀಲ್ ಅಹಮದ್ 29ಕ್ಕೆ3, ನೂರ್ ಅಹಮದ್ 18ಕ್ಕೆ4). **ಚೆನ್ನೈ ಸೂಪರ್ ಕಿಂಗ್ಸ್:** 19.1 ಓವರ್‌ಗಳಲ್ಲಿ 6ಕ್ಕೆ158 (ರಚಿನ್ ರವೀಂದ್ರ ಅಜೇಯ 65, ಋತುರಾಜ್ ಗಾಯಕವಾಡ 53, ರವೀಂದ್ರ ಜಡೇಜ 17, ವಿಘ್ನೇಶ್ ಪುತ್ತೂರ್ 32ಕ್ಕೆ3) **ಫಲಿತಾಂಶ:** ಚೆನ್ನೈ ಸೂಪರ್ ಕಿಂಗ್ಸ್‌ಗೆ 4 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ನೂರ್ ಅಹಮದ್

ಅಕ್ಷರ್ ನಾಯಕತ್ವಕ್ಕೆ ಲಖನೌ ಜೈಂಟ್ಸ್ ಸವಾಲು ಇಂದು

ಡೆಲ್ಲಿ ಕ್ಯಾಪಿಟಲ್ಸ್‌ಗೆ ರಿಷಭ್ ‘ಪಂಥಾಹ್ವಾನ’

ವಿಶಾಖಪಟ್ಟಣ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಸೋಮವಾರ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರವಾಗಿ ಕಣಕ್ಕಿಳಿಯಲಿದ್ದಾರೆ. ಹೋದ ವರ್ಷ ತಾವು ನಾಯಕತ್ವ ವಹಿಸಿದ್ದ ಲಖನೌ ಸೂಪರ್ ಜೈಂಟ್ಸ್ ತಂಡವನ್ನೂ ಎದುರಿಸುವರು. ಆದರೆ ರಾಹುಲ್ ಡೆಲ್ಲಿ ತಂಡದ ನಾಯಕತ್ವ ವಹಿಸುತ್ತಿಲ್ಲ. ವಿಕೆಟ್‌ಕೀಪರ್–ಬ್ಯಾಟರ್ ಆಗಿ ಆಡಲಿದ್ದಾರೆ. ಅಕ್ಷರ್ ಪಟೇಲ್ ಸಾರಥ್ಯವಹಿಸಿದ್ದಾರೆ.

ಹೋದ ವರ್ಷ ಡೆಲ್ಲಿ ತಂಡದ ನಾಯಕರಾಗಿದ್ದ ರಿಷಭ್ ಪಂತ್ ಈಗ ಲಖನೌ ಬಳಗದ ಸಾರಥಿಯಾಗಿದ್ದಾರೆ. ತಮ್ಮ ನಿಕಟಪೂರ್ವ ತಂಡದ ಎದುರು ಆಡುವ ಮೂಲಕ ಈ ವರ್ಷದ ಐಪಿಎಲ್‌ಅಭಿಯಾನವನ್ನು ಆರಂಭಿಸಲಿದ್ದಾರೆ. ಈಚೆಗೆ ನಡೆದ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ರಿಷಭ್ ಪಂತ್ ಅವರನ್ನು (₹ 27 ಕೋಟಿ) ಲಖನೌ ತಂಡವು ದಾಖಲೆಯ ಮೊತ್ತಕ್ಕೆ ಖರೀದಿಸಿತ್ತು. ಮೇಲ್ನೋಟಕ್ಕೆ ಡೆಲ್ಲಿ ತಂಡವು ಸಮತೋಲನವಾಗಿರುವಂತೆ ಕಾಣುತ್ತಿದೆ. ಬ್ಯಾಟಿಂಗ್ ಪಡೆ ಉತ್ತಮವಾಗಿದೆ. ಯುವ ಆಟಗಾರ ಜೇಕ್ ಫ್ರೇಸರ್ ಮೆಕ್‌ಗುರ್ಕ್, ಕಳೆದ ದೇಶಿ ಋತುವಿನಲ್ಲಿ ರನ್‌ಗಳ ಹೊಳೆ ಹರಿಸಿದ್ದ ಕರುಣ್ ನಾಯರ್, ಫಾಫ್ ಡುಪ್ಲೆಸಿ, ಅಭಿಷೇಕ್ ಪೊರೇಲ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರ ಬ್ಯಾಟಿಂಗ್ ಬಲ ಇದೆ. ಬೌಲಿಂಗ್ ಪಡೆಯಲ್ಲಿ ವೇಗಿ ಮಿಚೆಲ್ ಸ್ಟಾರ್ಕ್, ಟಿ. ನಟರಾಜನ್, ಮೋಹಿತ್ ಶರ್ಮಾ ಮತ್ತು ಮುಕೇಶ್ ಕುಮಾರ್ ಇದ್ದಾರೆ. ಕುಲದೀಪ್ ಯಾದವ್ ಸ್ಪಿನ್ ಹೊಣೆ ನಿಭಾಯಿಸುವರು.


ರಿಷಭ್ ಪಂತ್


ಕೆ.ಎಲ್ ರಾಹುಲ್

ಲಖನೌ ತಂಡದಲ್ಲಿ ಡೇವಿಡ್ ಮಿಲ್ಲರ್, ಏಡನ್ ಮರ್ಕರಂ ಮತ್ತು ನಿಕೊ ಲಸ್ ಪೂರನ್ ಅವರಂತಹ ಬೀಸಾಟದ ಪರಿಣತರಿದ್ದಾರೆ. ಮಿಚೆಲ್ ಮಾರ್ಷ್ ಹಾಗೂ ಆಯುಷ್ ಬಡೋನಿ ಅವರು ತಮ್ಮ ಲಯಕ್ಕೆ ಮರಳಿದರೆ ತಂಡದ ಮೊತ್ತ ಮತ್ತಷ್ಟು ದೊಡ್ಡದಾಗಬ ಹುದು. ಬೌಲಿಂಗ್‌ನಲ್ಲಿ ಆವೇಶ್ ಖಾನ್, ಆಕಾಶ್ ದೀಪ್ ಮತ್ತು ರವಿ ಬಿಷ್ಣೋಯಿ ಪ್ರಮುಖರಾಗಿದ್ದರೆ.ವೇಗಿ ಮಯಂಕ್ ಯಾದವ್‌ಅವರು ಆಡುವುದು ಖಚಿತವಾಗಿಲ್ಲ. ಗಾಯಗೊಂಡಿರುವ ಮೊಹಸಿನ್ ಖಾನ್ ಬದಲಿಗೆ ಶಾರ್ದೂಲ್ ಠಾಕೂರ್ ಸ್ಥಾನ ಪಡೆದುಕೊಂಡಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಸಂಭಲ್: ಮಸೀದಿ ಸಮಿತಿ ಅಧ್ಯಕ್ಷನ ಸೆರೆ

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ಕಳೆದ ವರ್ಷದ ನವೆಂಬರ್‌ನಲ್ಲಿ ನಡೆದಿದ್ದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಶಾಹಿ ಜಾಮಾ ಮಸೀದಿ ಸಮಿತಿಯ ಅಧ್ಯಕ್ಷ ಜಾಫರ್ ಅಲಿ ಅವರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಸಂಭಲ್ ಜಿಲ್ಲೆಯ ಚಂದೌಸಿಯಲ್ಲಿನ ಮಸೀದಿಯಲ್ಲಿ ನ್ಯಾಯಾಲಯದ ಆದೇಶದಂತೆ ಅಧಿಕಾರಿಗಳು ಸಮೀಕ್ಷೆ ನಡೆಸಲು ಮುಂದಾದಾಗ ನಡೆದಿದ್ದ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟು, ಹಲವರು ಗಾಯಗೊಂಡಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆ ದಾಖಲಿಸಲು ಸ್ಥಳೀಯ ಪೊಲೀಸರ ವಿಶೇಷ ತನಿಖಾ ತಂಡವು ಜಾಫರ್ ಅವರನ್ನು ವಶಕ್ಕೆ ಪಡೆದಿದೆ ಎಂದು ಅಧಿಕಾರಿಗಳು ಭಾನುವಾರ ಬೆಳಿಗ್ಗೆ ಹೇಳಿದ್ದರು. ‘ನ.24ರಂದು ನಡೆದಿದ್ದ ಹಿಂಸಾಚಾರ ಪ್ರಕರಣದಲ್ಲಿ ಮಸೀದಿ ಸಮಿತಿ ಅಧ್ಯಕ್ಷರನ್ನು ಬಂಧಿಸಲಾಗಿದೆ’ ಎಂದು ಸಂಭಲ್ ಎಸ್‌ಪಿ ಕೃಷ್ಣಕುಮಾರ್ ಬಿಷ್ಣೋಯಿ ತಿಳಿಸಿದ್ದಾರೆ. ಆದರೆ, ಅವರು ಹೆಚ್ಚಿನ ವಿವರ ಬಹಿರಂಗಪಡಿಸಲಿಲ್ಲ.

ಹಿಂಸಾಚಾರದ ಕುರಿತು ತನಿಖೆ ನಡೆಸುತ್ತಿರುವ ನ್ಯಾಯಾಂಗ ಆಯೋಗದ ಎದುರು ಹೇಳಿಕೆ ನೀಡದಂತೆ ತಡೆಯಲು ಈ ಬಂಧನ ನಡೆದಿದೆ ಎಂದು ಅಲಿ ಅವರ ಸಹೋದರ ಆರೋಪಿಸಿದ್ದಾರೆ. ಅಲಿ ಅವರು ಆಯೋಗದ ಎದುರು ಸೋಮವಾರ ಹೇಳಿಕೆ ನೀಡುವವರಿದ್ದರು. ಉತ್ತರ ಪ್ರದೇಶ ಸರ್ಕಾರವು ತನಿಖೆಗಾಗಿ ಡಿ.11ರಂದು ಮೂವರು ಸದಸ್ಯರನ್ನೊಳಗೊಂಡ ನ್ಯಾಯಾಂಗ ಆಯೋಗವನ್ನು ರಚಿಸಿತ್ತು.

ಗಾಂಧಿವಾದಿ ಕೃಷ್ಣ ಭಾರತಿ ಇನ್ನಿಲ್ಲ

ಹೈದರಾಬಾದ್ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ, ಗಾಂಧಿವಾದಿ ಪಾಸಲ ಕೃಷ್ಣ ಭಾರತಿ (92) ಭಾನುವಾರ ನಿಧನರಾದರು.

ಮಹಾತ್ಮ ಗಾಂಧಿಯವರ ನಿಕಟವರ್ತಿಯಾಗಿದ್ದ ಪಾಸಲ ಕೃಷ್ಣಮೂರ್ತಿ ಮತ್ತು ಅಂಜಾ ಲಕ್ಷ್ಮೀ ದಂಪತಿಯ ಪುತ್ರಿಯಾಗಿದ್ದ ಇವರು, ಬಡವರು–ದಲಿತರ ಶಿಕ್ಷಣಕ್ಕಾಗಿ ಶ್ರಮಿಸಿದ್ದರು. ಹಲವು ಶಿಕ್ಷಣ ಸಂಸ್ಥೆಗಳಿಗೆ ದೇಣಿಗೆ ನೀಡಿದ್ದರು. ಗೋಶಾಲೆಗಳನ್ನು ನಡೆಸುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ತಮ್ಮ ತಂದೆ– ತಾಯಿ ಜೈಲಿನಲ್ಲಿದ್ದಾಗಲೇ ಜನಿಸಿದ್ದ ಕೃಷ್ಣ ಭಾರತಿ ಅವರು, ಮಹಾತ್ಮ ಗಾಂಧಿಯವರೊಂದಿಗೂ ಒಡನಾಟ ಹೊಂದಿದ್ದರು. ಅವಿವಾಹಿತರಾಗಿ ಉಳಿದಿದ್ದ ಅವರು, ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.


ಚುನಾವಣಾ ಆಯೋಗ ನಿಷ್ಕ್ರಿಯ ಸಂಸ್ಥೆ: ಕಪಿಲ್

ನವದೆಹಲಿ (ಪಿಟಿಐ): ‘ಭಾರತದ ಚುನಾವಣಾ ಆಯೋಗವು ಸಂಪೂರ್ಣವಾಗಿ ನಿಷ್ಕ್ರಿಯವಾಗಿದ್ದು, ವಿಫಲಗೊಂಡ ಸಂಸ್ಥೆಯಾಗಿದೆ. ಸಂವಿಧಾನಕ್ಕೆ ಅನುಗುಣವಾಗಿ ಆಯೋಗವು ಜವಾಬ್ದಾರಿ ನಿರ್ವಹಿಸುತ್ತಿಲ್ಲ, ಹೀಗಾಗಿ, ಬಹುಸಂಖ್ಯಾತರು ಆಯೋಗದ ಮೇಲಿನ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ’ ಎಂದು ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಅಭಿಪ್ರಾಯಪಟ್ಟಿದ್ದಾರೆ.

‘ಪಿಟಿಐ’ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ‘ಆಯೋಗದ ಮೇಲೆ ಹೋಗಿರುವ ನಂಬಿಕೆ ಮತ್ತೆ ಮೂಡುವಂತೆ ಎಷ್ಟು ಬೇಗ ಮಾಡಲಾದೀತೊ, ಅಷ್ಟು ಬೇಗ ದೇಶದ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯವಾಗಲಿದೆ’ ಎಂದಿದ್ದಾರೆ.

ವ್ಯವಸ್ಥಿತ ರೂಪ ಅಗತ್ಯ: ‘ಬಿಜೆಪಿ ವಿರುದ್ಧ ರಚನೆಯಾಗಿರುವ ವಿರೋಧ ಪಕ್ಷಗಳ ‘ಇಂಡಿಯಾ’ ಕೂಟಕ್ಕೆ ವ್ಯವಸ್ಥಿತ ರೂಪ ನೀಡಬೇಕಾಗಿದ್ದು, ಸಾರ್ವಜನಿಕ ಅಭಿಪ್ರಾಯ ವ್ಯಕ್ತಪಡಿಸಲು ವಕ್ತಾರರು ಇರಬೇಕು’ ಎಂದು ಸಲಹೆ ನೀಡಿದ್ದಾರೆ.

‘ಇಂಡಿಯಾ’ ಕೂಟವು ಸಂಘಟಿತ ನೀತಿ, ಸ್ಪಷ್ಟವಾದ ಸೈದ್ಧಾಂತಿಕ ಚೌಕಟ್ಟು, ಭವಿಷ್ಯದ ಕುರಿತು ಕಾರ್ಯಕ್ರಮಗಳನ್ನು ಹೊಂದಿರಬೇಕು’ ಎಂದೂ ಹೇಳಿದ್ದಾರೆ.



ಕ್ಷೇತ್ರ ಮರುವಿಂಗಡನೆಯಾದರೆ, ದೇಶದ ಭವಿಷ್ಯದ ರಾಜಕೀಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. 2021ರಲ್ಲಿ ಜನಗಣತಿ ನಡೆದಿಲ್ಲ. ಮೊದಲು ಗಣತಿಯಾಗಲಿ
ಕಪಿಲ್ ಸಿಬಲ್, ರಾಜ್ಯಸಭಾ ಸಂಸದ

ಇತ್ತೀಚೆಗೆ ನಡೆದ ವಿವಿಧ ರಾಜ್ಯಗಳ ಚುನಾವಣೆಯಲ್ಲಿ ‘ಇಂಡಿಯಾ’ ಕೂಟದಲ್ಲಿದ್ದಪಕ್ಷಗಳೇಪರಸ್ಪರಸ್ಪರ್ಧೆನಡೆಸಿದ್ದು ಕೆಟ್ಟ ನಡವಳಿಕೆ. ‘ಇಂಡಿಯಾ’ವನ್ನು ಛಿದ್ರಗೊಳಿಸಬಾರದು ಎಂದಿದ್ದಾರೆ.

ವಕ್ಫ್ ಕಾದು ನೋಡೋಣ: ‘ವಕ್ಫ್ (ತಿದ್ದುಪಡಿ) ಕಾಯ್ದೆಯನ್ನು ಈಗಿನ ಬಜೆಟ್ ಅಧಿವೇಶನದಲ್ಲಿಯೇ ಮಂಡಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಈ ವಿಷಯದಲ್ಲಿ ಪ್ರತಿಪಕ್ಷಗಳಿಗೆ ಹೆಚ್ಚಿನ ಅವಕಾಶವಿದೆ. ಬಿಜೆಪಿಗೆ ಸ್ಪಷ್ಟ ಬಹುಮತವಿಲ್ಲ. ಹೀಗಾಗಿ, ಎನ್‌ಡಿಎ ಮಿತ್ರಪಕ್ಷಗಳು ಯಾವ ನಿರ್ಧಾರ ತೆಗೆದುಕೊಳ್ಳಲಿದೆ ಎಂಬುದು ಕುತೂಹಲ ಕೆರಳಿಸಿದೆ’ ಎಂದರು.

‘ಈಗ ಅವರ ಪರಿಸ್ಥಿತಿ ನೋಡಿ. ಬಿಹಾರದಲ್ಲಿ ಸದ್ಯ ದಲ್ಲೇ ಚುನಾವಣೆ ನಡೆಯಲಿದೆ. ಒಂದೊಮ್ಮೆ ಮಸೂದೆಜಾರಿಗೊಳಿಸಿದರೆ,ಬಿಹಾರದಲ್ಲಿ ಅದರಿಂದಆಗುವಪರಿಣಾಮಗಳಕುರಿತು ಅವರಿಗೂ ಅರಿವು ಇದೆ. ಹೀಗಾಗಿ ಕಾದು ನೋಡಬೇಕು’ ಎಂದರು.

‘ನ್ಯಾಯಾಂಗದ ಮೇಲೆ ನಂಬಿಕೆ ಕ್ಷೀಣ’

‘ನ್ಯಾಯಾಂಗದ ಮೇಲಿನ ಜನರ ನಂಬಿಕೆಯು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ನ್ಯಾಯಾಂಗದ ನೇಮಕಾತಿಯು ಸರಿಯಾಗಿ ಆಗುತ್ತಿಲ್ಲ. ಇದನ್ನು ಸರ್ಕಾರ ಹಾಗೂ ನ್ಯಾಯಾಂಗ ಒಪ್ಪಿಕೊಂಡಾಗ ಮಾತ್ರ ಪರ್ಯಾಯ ಅವಕಾಶಗಳು ಸೃಷ್ಟಿಯಾಗಬಹುದು’ ಎಂದು ಕಪಿಲ್ ಸಿಬಲ್ ಹೇಳಿದರು.

‘ನ್ಯಾಯಾಲಯದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರದ ಕುರಿತು ನಾವು ಪ್ರಶ್ನಿಸಿಕೊಳ್ಳಬೇಕಿದೆ. ನ್ಯಾಯಾಂಗವೂ ತನ್ನನ್ನು ತಾನು ಪ್ರಶ್ನಿಸಿಕೊಳ್ಳಬೇಕು. ಜನರಲ್ಲಿಯೂ ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಕಡಿಮೆಯಾಗುತ್ತಿದೆ’ ಎಂದರು.

ಗ್ರೆನೇಡ್ ದಾಳಿ: 4 ಉಗ್ರರ ವಿರುದ್ಧ ಆರೋಪಪಟ್ಟಿ

ನವದೆಹಲಿ (ಪಿಟಿಐ): ಚಂಡೀಗಢದಲ್ಲಿ 2024ರಲ್ಲಿ ನಡೆದಿದ್ದ ಗ್ರೆನೇಡ್ ದಾಳಿ ಕೃತ್ಯದ ಸಂಬಂಧ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಸಂಘಟನೆಯ ನಾಲ್ವರು ಉಗ್ರರ ವಿರುದ್ಧ ಎನ್‌ಐಎ ಆರೋಪಪಟ್ಟಿ ದಾಖಲಿಸಿದೆ.

ಪಾಕಿಸ್ತಾನದಲ್ಲಿ ನೆಲೆಯಾಗಿರುವ ಉಗ್ರ ಹರ್ವಿಂದರ್ ಸಿಂಗ್ ಸಂಧು ಅಲಿಯಾಸ್ ರಿಂದಾ, ಅಮೆರಿಕದಲ್ಲಿ ನೆಲೆಯಾಗಿರುವ ಹರ್‌ಪ್ರೀತ್ ಸಿಂಗ್ ಅಲಿಯಾಸ್ ಹ್ಯಾಪಿ ಪಾಸಿ ಈ ನಾಲ್ವರು ಉಗ್ರರಲ್ಲಿ ಸೇರಿದ್ದಾರೆ ಎಂದು ಎನ್‌ಐಎ ಹೇಳಿಕೆಯಲ್ಲಿ ತಿಳಿಸಿದೆ.

ಇಲ್ಲಿನ ವಿಶೇಷ ಎನ್‌ಐಎ ಕೋರ್ಟ್‌ನಲ್ಲಿ, ಈ ನಾಲ್ವರ ವಿರುದ್ಧ ಕಾನೂನು ಬಾಹಿರ ಚಟುವಟಿಕೆ (ತಡೆ) ಕಾಯ್ದೆ (ಯುಎಪಿಎ) ಮತ್ತು ಇತರೆ ಸಂಬಂಧಿತ ಕಾಯ್ದೆಗಳಡಿ ಆರೋಪಪಟ್ಟಿ ದಾಖಲಿಸಲಾಗಿದೆ. ಉಲ್ಲೇಖಿತ ಗ್ರೆನೇಡ್ ದಾಳಿ ಕೃತ್ಯದಲ್ಲಿ ರಿಂದಾ ಮತ್ತು ಪಾಸಿ ಪ್ರಮುಖ ಸಂಚುಕೋರರಾಗಿದ್ದರು. ದಾಳಿ ನಡೆಸಲು ಈ ಇಬ್ಬರು ಅಗತ್ಯ ನೆರವು ಒದಗಿಸಿದ್ದರು ಎಂದು ತಿಳಿಸಿದೆ.

ಪಂಜಾಬ್ ಪೊಲೀಸ್‌ನ ನಿವೃತ್ತ ಅಧಿಕಾರಿಯೊಬ್ಬರನ್ನು ಗುರಿಯಾಗಿಸಿ ಸೆಪ್ಟೆಂಬರ್ 2024ರಲ್ಲಿ ದಾಳಿ ನಡೆದಿತ್ತು. ಈ ಕೃತ್ಯಕ್ಕೆ ಪ್ರಮುಖ ಆರೋಪಿಗಳು ಸ್ಥಳೀಯರಾದ ರೋಹನ್ ಮಾಸಿಹ್ ಮತ್ತು ವಿಶಾಲ್ ಮಾಸಿಹ್ ಅವರ ನೆರವು ಪಡೆದಿದ್ದರು. ಈ ಇಬ್ಬರ ಸೂಚನೆಯಂತೆ ದಾಳಿ ನಡೆದಿತ್ತು ಎಂದು ಹೇಳಿದೆ.


ಕೇರಳ ಬಿಜೆಪಿ ಅಧ್ಯಕ್ಷರಾಗಿ ರಾಜೀವ್ ಚಂದ್ರಶೇಖರ್ ಆಯ್ಕೆ?

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳ ಬಿಜೆಪಿ ಘಟಕದ ಅಧ್ಯಕ್ಷರನ್ನಾಗಿ ಕೇಂದ್ರದ ಮಾಜಿ ಸಚಿವ, ಉದ್ಯಮಿ ರಾಜೀವ್ ಚಂದ್ರಶೇಖರ್ ಅವರನ್ನು ಆಯ್ಕೆ ಮಾಡಲಾಗಿದೆ. ಪಕ್ಷವು ಸೋಮವಾರ ಈ ಕುರಿತು ಅಧಿಕೃತ ಘೋಷಣೆ ಮಾಡಲಿದೆ ಎಂದು ಹೇಳಲಾಗಿದೆ.

ಈಗಿನ ಅಧ್ಯಕ್ಷ ಕೆ. ಸುರೇಂದ್ರನ್ ಅವರ ಐದು ವರ್ಷದ ಅವಧಿಯು ಮುಕ್ತಾಯಗೊಂಡಿದೆ. ತಿರುವನಂತಪುರದಲ್ಲಿ ಭಾನುವಾರ ನಡೆದ ಪಕ್ಷದ ಸಭೆಯಲ್ಲಿ ಕೇರಳ ಉಸ್ತುವಾರಿ ಪ್ರಕಾಶ್ ಜಾವಡೇಕರ್ ಅವರು ರಾಜೀವ್ ಅವರ ಹೆಸರು ಪ್ರಸ್ತಾಪಿಸಿದರು ಎನ್ನಲಾಗಿದೆ.

ಕೇರಳದಲ್ಲಿ ಇದೇ ಮೊದಲ ಬಾರಿಗೆ ಸಂಘ ಪರಿವಾರದೊಂದಿಗೆ ನಂಟು ಇರದವರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ. ಇದೇ ಕಾರಣಕ್ಕೆ ಜಾತ್ಯತೀತ ಮನೋಭಾವ ಹೊಂದಿರುವ ಕೇರಳದ ಜನರೊಂದಿಗೆ ರಾಜೀವ್ ಅವರು ಸಂಪರ್ಕ ಸಾಧಿಸಬಲ್ಲರು ಎಂದು ಪಕ್ಷ ಯೋಚಿಸಿದೆ ಎನ್ನಲಾಗುತ್ತಿದೆ.


ರಾಜೀವ್ ಚಂದ್ರಶೇಖರ್

‘ಮಣಿಪುರ: ಜನರು ಸಂವಿಧಾನಕ್ಕೆ ಬದ್ಧರಾದರೆ ಪರಿಹಾರ ಸಾಧ್ಯ’

ಇಂಫಾಲ್ (ಪಿಟಿಐ): ‘ನಾಗರಿಕರು ಸಂವಿಧಾನಕ್ಕೆ ಬದ್ಧರಾದಲ್ಲಿ ಮಣಿಪುರದ ಈಗಿನ ಸವಾಲುಗಳಿಂದ ಹೊರಬರುವುದು ಸಾಧ್ಯ’ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎನ್.ಕೋಟೀಶ್ವರ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

‘ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ನ್ಯಾಯಮೂರ್ತಿಗಳ ನಿಯೋಗವು ಮಣಿಪುರದ ಚುರಾಚಾಂದ್‌ಪುರ ಮತ್ತು ಬಿಷ್ಣುಪುರ್‌ಗೆ ಭೇಟಿ ನೀಡಿದ್ದ ಅವಧಿಯಲ್ಲಿ ಜನರು ಆಶಾವಾದ ವ್ಯಕ್ತಪಡಿಸಿರುವುದನ್ನು ಗಮನಿಸಿದ್ದೇವೆ’ ಎಂದರು.

ಮಣಿಪುರ ಹೈಕೋರ್ಟ್‌ನ 12ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ‘ಮಣಿಪುರಕ್ಕೆ ಸವಾಲುಗಳಿವೆ. ಅದೃಷ್ಟವಶಾತ್, ನಾವು ಸಂಕಷ್ಟದಲ್ಲಿ ಮಾರ್ಗದರ್ಶನ ನೀಡುವ ಸಂವಿಧಾನವನ್ನು ಹೊಂದಿದ್ದೇವೆ’ ಎಂದರು.

9 ಮಂದಿ ಅಂತರರಾಜ್ಯ ನಿಧಿಗಳ್ಳರ ಸೆರೆ

ಮೊಳಕಾಲ್ಮುರು: ವಿಭೂತಿಗುಡ್ಡದ ಬಳಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು (ಚಿತ್ರದುರ್ಗ): ಇಲ್ಲಿನ ಪೊಲೀಸರು ಭಾನುವಾರ 9 ಮಂದಿ ಅಂತರರಾಜ್ಯ ನಿಧಿಗಳ್ಳರನ್ನು ಬಂಧಿಸಿದ್ದಾರೆ.

ತಾಲ್ಲೂಕಿನ ಭೈರಾಪುರ, ಹಿರೇಕೆರೆಹಳ್ಳಿ ರಸ್ತೆಯಲ್ಲಿರುವ ವಿಭೂತಿ ಗುಡ್ಡದಲ್ಲಿ ಕೆಲವರು ಅನುಮಾನಾಸ್ಪದವಾಗಿ ಶೋಧ ನಡೆಸುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ಆಗ ಕೃತ್ಯ ಬಯಲಾಗಿದೆ.

ತಾಲ್ಲೂಕಿನ ಭೈರಾಪುರದ ತಿಮ್ಮರಾಜು, ತೆಂಗಿನ ಗೌರಸಮುದ್ರದ ರಾಮಾಂಜಿನಿ, ಗುಂಡ್ಲೂರಿನ ಟಿ. ಸಣ್ಣಪ್ಪ, ಬೊಮ್ಮಲಿಂಗೇನ ಹಳ್ಳಿಯ ಮೈಲಾರಪ್ಪ, ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಕಳಿಕೊತ್ತೂರ್ ಗ್ರಾಮದ ಎಂ.ಆರ್. ಮಂಜುನಾಥ್, ಎನ್. ಕೊತ್ತೂರ್ ಗ್ರಾಮದ ಎಂ. ಆನಂದ್, ಕಲಾಂನಗರದ ರವಿಶ್ರೀ, ತೆಲಂಗಾಣದ ಚಿನ್ನಬೋಯಿನಪಲ್ಲಿಯ ಸಲ್ಕಾಪುರಂ ಶ್ರೀನಿವಾಸುಲು ಹಾಗೂ ವೆಂಕಟೇಶ್ ಬಂಧಿತರು.



ಮತ್ತೊಬ್ಬ ಆರೋಪಿ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ವೇಣು ನಾಪತ್ತೆ ಆಗಿದ್ದಾನೆ.

ಇವರು ತಾಲ್ಲೂಕಿನ ಐತಿಹಾಸಿಕ ನುಂಕಿಮಲೆ ಸಿದ್ದೇಶ್ವರ ಬೆಟ್ಟ, ಅಶೋಕನ ಶಿಲಾ ಶಾಸನ, ಜಟ್ಟಂಗಿ ರಾಮೇಶ್ವರ ಬೆಟ್ಟ ಸೇರಿದಂತೆ ವಿವಿಧ ಸ್ಥಳಗಳು ಮತ್ತು ದೇವಸ್ಥಾನಗಳಲ್ಲಿ ಸ್ಥಳೀಯರ ನೆರವು ಪಡೆದು ನಿಧಿ ಆಸೆಗೆ ಭೂಮಿ ಅಗೆಯುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಇವರಿಂದ ಇನ್ನೋವಾ ಕಾರು, ಜನರೇಟರ್ ಮತ್ತು ನೆಲ ಅಗೆಯುವ ಸಲಕರಣೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಡಿವೈಎಸ್‌ಪಿ ಕೆ. ರಾಜಣ್ಣ, ಸಿಪಿಐ ವಸಂತ್ ಆಸೋದೆ, ಪಿಎಸ್‌ಐಗಳಾದ ಜಿ. ಪಾಂಡುರಂಗಪ್ಪ, ಈರೇಶ್ ಮತ್ತು ಸಿಬ್ಬಂದಿಯನ್ನು ಒಳಗೊಂಡ ತಂಡವು ಈ ಕಾರ್ಯಾಚರಣೆಯನ್ನು ನಡೆಸಿದೆ.



ಅಂತರರಾಜ್ಯ ನಿಧಿಗಳ್ಳರಿಂದ ವಶಪಡಿಸಿಕೊಂಡಿರುವ ಕಾರು ಮತ್ತು ಸಲಕರಣೆಗಳೊಂದಿಗೆ ಮೊಳಕಾಲ್ಮುರು ಠಾಣೆ ಪೊಲೀಸರು

₹4 ಸಾವಿರ ಕೋಟಿ ಹಿಂಬಾಕಿಗೆ ತಡೆ

ಒಂದನೇ ಪುಟದಿಂದ...

ವಿವಿಧ ಇಲಾಖೆಗಳು, ನಿಗಮ–ಮಂಡಳಿಗಳು ಸೇರಿದಂತೆ ನೌಕರರಿಗೆ ಬರಬೇಕಾದ ಆರೋಗ್ಯ ವೆಚ್ಚದ ಬಾಕಿ, ಪ್ರಯಾಣ ಭತ್ಯೆ, ವಾಹನ ಬಾಡಿಗೆ ಭತ್ಯೆ, ಕೆಲಸಕ್ಕೆ ಸೇರಿ 15, 20 ವರ್ಷಗಳಾದರೂ ಬಡ್ತಿ ಸಿಗದಿದ್ದಾಗ, ನೀಡುವ ಕಾಲಮಿತಿ ವೇತನ ಬಡ್ತಿ ಸೇರಿದಂತೆ 2023–24ನೇ ಹಣಕಾಸು ವರ್ಷ ಹಾಗೂ ಅದಕ್ಕೂ ಹಿಂದಿನಿಂದ ಇರುವ ಎಲ್ಲ ವೇತನ ಬಾಕಿ ತಡೆಹಿಡಿಯಲಾಗಿದೆ. ಈ ಮೊತ್ತ ಸುಮಾರು ₹4,000 ಕೋಟಿಗೂ ಹೆಚ್ಚಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

₹500 ಕೋಟಿ ವೈದ್ಯಕೀಯ ಬಾಕಿ: ವಿವಿಧ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುವ ನೌಕರರಿಗೆ ನಗದುರಹಿತ ಚಿಕಿತ್ಸಾ ಸೌಲಭ್ಯ ಇನ್ನೂ ಅಧಿಕೃತವಾಗಿ ಜಾರಿಯಾಗಿಲ್ಲ. ಚಿಕಿತ್ಸೆ ಪಡೆದ ನಂತರ ಆ ಮೊತ್ತದ ಮರುಪಾವತಿಗಾಗಿ ತಮ್ಮ ಇಲಾಖೆಗಳ ಮೂಲಕ ಚಿಕಿತ್ಸಾ ವೆಚ್ಚದ ಬಿಲ್ ಸಲ್ಲಿಸುತ್ತಾರೆ. ಹೀಗೆ ಸಲ್ಲಿಕೆಯಾದ ಹಿಂದಿನ ವರ್ಷಗಳ ಬಾಕಿ ಮೊತ್ತ ₹500 ಕೋಟಿಗೂ ಅಧಿಕವಿದೆ. ಶಾಲಾ ಶಿಕ್ಷಣ ಇಲಾಖೆಯೊಂದರಲ್ಲೇ ಈ ಮೊತ್ತ ₹120 ಕೋಟಿಯಷ್ಟಿದೆ.

ಪ್ರಕ್ರಿಯೆಯ ವಿಳಂಬ, ನೌಕರರಿಗೆ ಸಂಕಷ್ಟ: ವೇತನ ಬಾಕಿ ಪಡೆಯಲು ನೌಕರರು ಸಮಯಕ್ಕೆ ಸರಿಯಾಗಿ ತಮ್ಮ ಇಲಾಖೆಯ ವೇತನ ಬಟವಾಡೆ ಅಧಿಕಾರಿಗಳಿಗೆ ಸಲ್ಲಿಸಿದ್ದರೂ ಕೆಳ ಹಂತದಿಂದ ಇಲಾಖಾ ಮುಖ್ಯಸ್ಥರವರೆಗೆ ಕಡತ ಸಾಗಿ ಅನುಮೋದನೆಗೊಂಡು ಮರಳಲು, ನಂತರ ಖಜಾನೆಗೆ ಕಳುಹಿಸಲು ವರ್ಷ, ಎರಡು ವರ್ಷಗಳನ್ನು ತೆಗೆದುಕೊಳ್ಳಲಾಗುತ್ತಿದೆ.

‘ಮಂಜೂರಾದ ಹೃದಯದ ಶಸ್ತ್ರಚಿಕಿತ್ಸಾ ವೆಚ್ಚದ ಹಣ ಪಡೆಯಲು ಸಲ್ಲಿಸಿದ ಕಡತ ಎಫ್‌ಡಿಎ, ಕಚೇರಿ ಅಧೀಕ್ಷಕರು, ಮುಖ್ಯಸ್ಥರ ಮೂಲಕ ಸಾಗಿ ಕೇಂದ್ರ ಕಚೇರಿ ತಲುಪಿ, ಅನುಮೋದನೆ ಪಡೆಯಲು ಒಂದೂವರೆ ವರ್ಷ ಆಯಿತು. ಪ್ರಸಕ್ತ ಹಣಕಾಸು ವರ್ಷದ ಮೇನಲ್ಲೇ ಖಜಾನೆಗೆ ಕಳಹಿಸಿದ್ದರೂ ಹಣ ಸಿಗಲಿಲ್ಲ. ಈಗ ಆರ್ಥಿಕ ಇಲಾಖೆ ಅನುಮತಿ ಇಲ್ಲ ಎಂದು ವಾಪಸು ಕಳುಹಿಸಿದ್ದಾರೆ’ ಎಂದು ಶಿಕ್ಷಕಿ ಲತಾ ಆರೋಗ್ಯ ವೆಚ್ಚದ ಬಾಕಿ ಪಡೆಯಲು ನಡೆಸಿದ ಅಲೆದಾಟ ವಿವರಿಸಿದರು.

ಕಾಲಮಿತಿಯ ವೇತನ ಬಡ್ತಿ ಪಡೆಯಲೂ ಹಾಗೂ ಮಂಜೂರಾದ ನಂತರ ಹಿಂದಿನ ವರ್ಷಗಳ ಬಾಕಿಗಾಗಿ ಸಾವಿರಾರು ನೌಕರರು ಅಲೆದಾಡುತ್ತಲೇ ಇದ್ದಾರೆ.

ಧರ್ಮಾಧಾರಿತ ಮೀಸಲಾತಿಗೆ ಅವಕಾಶ ಇಲ್ಲ

ಒಂದನೇ ಪುಟದಿಂದ...

‘ಸಮಾಜ ಮತ್ತು ರಾಷ್ಟ್ರದ ಒಳಿತು ಬಯಸಿದವರು ಆದರ್ಶವಾಗಿರಬೇಕು. ಅಸಹಿಷ್ಣುತೆ ಮತ್ತು ರಾಷ್ಟ್ರದ ನೀತಿಗಳನ್ನು ಧಿಕ್ಕರಿಸಿದವರು ಆಗಿರಬಾರದು. ಔರಂಗಜೇಬ್ ನಡೆದುಕೊಂಡ ರೀತಿಗೆ ಈಗ ವಿರೋಧ ವ್ಯಕ್ತವಾಗುತ್ತಿದೆ. ಇದು ಧರ್ಮದ ಕಾರಣಕ್ಕೆ ವಿರೋಧವಲ್ಲ. ದಾರಾ ಶಿಕೋಗೆ ಯಾರ ವಿರೋಧವೂ ಇಲ್ಲ’ ಎಂದು ಪ್ರತಿಪಾದಿಸಿದರು.

‘ಇಂದು, ಸ್ವಾತಂತ್ರ್ಯ ಸೇನಾನಿಗಳಾದ ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮರಾದ ದಿನ. ಭಾರತದ ಮಹಾನ್ ಮಹಿಳಾ ಸ್ವಾತಂತ್ರ್ಯ ಸೇನಾನಿ, ಕುಶಲ ಆಡಳಿತಗಾರ್ತಿ ಮತ್ತು ನಿರ್ಭೀತ ಯೋಧೆ ಅಬ್ಬಕ್ಕ ಅವರು ಜನಿಸಿ 500 ವರ್ಷಗಳಾದವು. ಅವರು ಎಲ್ಲರಿಗೂ ಸ್ಫೂರ್ತಿ’ ಎಂದು ಸ್ಮರಿಸಿದರು.

‘ಆರ್‌ಎಸ್‌ಎಸ್ ಯಾವ ಹೊಸ ಕಾರ್ಯವನ್ನೂ ಮಾಡಿಲ್ಲ. ದೇಶದಲ್ಲಿ ಶತಮಾನಗಳಿಂದ ಇರುವುದನ್ನೇ ಮುಂದುವರಿಸಿದೆ. ಸಂಘಕ್ಕೆ 100 ವರ್ಷ ಆಗಿದ್ದನ್ನು ನಾವು ಸಂಭ್ರಮಿಸುತ್ತಿಲ್ಲ. ಆತ್ಮಾವಲೋಕನ ಮತ್ತು ಸಂಘದ ಕೆಲಸ, ಸಮಾಜವನ್ನು ಸಂಘಟಿಸಲು ಪುನರ್ ಸಮರ್ಪಿಸಿಕೊಳ್ಳುವ ಸಮಯವಾಗಿ ಮಾಡಿಕೊಳ್ಳುತ್ತಿದ್ದೇವೆ’ ಎಂದರು.

ಜಾತಿ ವಿನಾಶಕ್ಕಾಗಿ ಸಂಘಕ್ಕೆ ಸೇರಿ

‘ಜಾತಿ ಬಗ್ಗೆ ಮಾತನಾಡಿದಷ್ಟೂ ಸಮಾವೇಶಗಳನ್ನು ಮಾಡಿದಷ್ಟು ಜಾತಿ ಗಟ್ಟಿಯಾಗುತ್ತಾ ಹೋಗುತ್ತದೆ. ಸಂಘವು ಯಾವುದೇ ಪ್ರಚಾರವಿಲ್ಲದೇ ಜಾತಿ ಪದ್ಧತಿ ವಿನಾಶಕ್ಕೆ ಶ್ರಮಿಸುತ್ತಿದೆ’ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದರು.

ಸಂಘಕ್ಕೆ ಸೇರಿದ ಮೇಲೆ ಜಾತಿ ಭಾವ ಇಲ್ಲದೆ ಎಲ್ಲ ಸಮಾನರಾಗಿ ಕಾರ್ಯನಿರ್ವಹಿಸುತ್ತಾರೆ. ಅಂತರ್ಜಾತಿ ವಿವಾಹ ಆಗುತ್ತವೆ. ಜಾತಿ ವಿನಾಶ ಬಯಸುವವರು ಸಂಘಕ್ಕೆ ಸೇರಬೇಕು ಎಂದು ಆಹ್ವಾನಿಸಿದರು.

ಶತಮಾನೋತ್ಸವದ ಕಾರ್ಯಕ್ರಮ

ಸಂಘದ ಶತಮಾನೋತ್ಸವ ವರ್ಷಾಚರಣೆ 2025ರ ವಿಜಯದಶಮಿ ದಿನ ಆರಂಭವಾಗಲಿದೆ. ಸರಸಂಘಚಾಲಕರು ಪ್ರತಿ ವರ್ಷದಂತೆ ಈ ಬಾರಿಯೂ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ದೇಶದಾದ್ಯಂತ ಮಂಡಲ ಹಾಗೂ ನಗರ ಮಟ್ಟದಲ್ಲಿ ಗಣವೇಷಧಾರಿ ಸ್ವಯಂಸೇವಕರ ಕಾರ್ಯಕ್ರಮಗಳು ನಡೆಯಲಿವೆ ಎಂದು ದತ್ತಾತ್ರೇಯ ಹೊಸಬಾಳೆ ಮಾಹಿತಿ ನೀಡಿದರು.

‘ಪ್ರತಿ ಗ್ರಾಮ, ಪ್ರತಿ ವಸತಿ, ಪ್ರತಿ ಮನೆ’ ಎಂಬ ಎಂಬ ಘೋಷಣೆಯೊಂದಿಗೆ ನವೆಂಬರ್‌ನಿಂದ 2026ರ ಜನವರಿವರೆಗೆ ತಿಂಗಳಿಗೆ ಮೂರು ವಾರ ಮನೆ-ಮನೆ ಸಂಪರ್ಕ ಅಭಿಯಾನ ನಡೆಸಲಾಗುವುದು. ಮಂಡಲ ಅಥವಾ ವಸತಿಗಳಲ್ಲಿ ಹಿಂದೂ ಸಮ್ಮೇಳನ ಏರ್ಪಡಿಸಲಿದ್ದೇವೆ. ನಿತ್ಯದ ಜೀವನದಲ್ಲಿ ಒಗ್ಗಟ್ಟು ಮತ್ತು ಸಾಮರಸ್ಯ, ರಾಷ್ಟ್ರದ ಕಾರಣಕ್ಕಾಗಿ ಎಲ್ಲರ ಕೊಡುಗೆ ಮತ್ತು ಪ್ರತಿಯೊಬ್ಬರ ಭಾಗವಹಿಸುವಿಕೆಯ ಸಂದೇಶವನ್ನು ನೀಡಲಾಗುವುದು ಎಂದರು.

15–30 ವರ್ಷ ವಯಸ್ಸಿನ ಯುವಜನರಿಗಾಗಿ ರಾಷ್ಟ್ರ ನಿರ್ಮಾಣ, ಸೇವಾ ಚಟುವಟಿಕೆ ಮತ್ತು ಪಂಚ ಪರಿವರ್ತನದ ಮೇಲೆ ಕೇಂದ್ರೀಕರಿಸುವ ಕಾರ್ಯಕ್ರಮ ಏರ್ಪಡಿಸಲಾಗುವುದು ಎಂದರು.

ಫೈನಲ್‌ಗೆ ಕರ್ನಾಟಕ ಮಹಿಳಾ ತಂಡ

23 ವರ್ಷದೊಳಗಿನವರ ಬ್ಯಾಸ್ಕೆಟ್‌ಬಾಲ್ • ಪುರುಷರ ತಂಡಕ್ಕೆ ಸೋಲು

ಬೆಂಗಳೂರು: ಕರ್ನಾಟಕ ತಂಡಗಳು ಗುವಾಹಟಿಯಲ್ಲಿ ನಡೆಯುತ್ತಿರುವ 23 ವರ್ಷದೊಳಗಿನವರ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಭಾನವಾರ ಮಿಶ್ರ ಫಲ ಅನುಭವಿಸಿದವು. ಸೆಮಿಫೈನಲ್ ಪಂದ್ಯದಲ್ಲಿ ದೆಹಲಿ ಮೇಲೆ ಗೆದ್ದ ಮಹಿಳೆಯರ ತಂಡ ಫೈನಲ್ ತಲುಪಿದರೆ, ಪುರುಷರ ತಂಡ ಸೆಮಿಫೈನಲ್‌ನಲ್ಲಿ ಹರಿಯಾಣ ಎದುರು ಸೋಲನುಭವಿಸಿತು.

ಸರುಸಜಯಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಮಹಿಳೆಯರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ 67–48 ಅಂಕಗಳಿಂದ ದೆಹಲಿ ತಂಡವನ್ನು ಸೋಲಿಸಿತು.

ಫೈನಲ್‌ನಲ್ಲಿ ಕರ್ನಾಟಕದ ಎದುರಾಳಿ ತಮಿಳುನಾಡು. ಇನ್ನೊಂದು ಸೆಮಿಫೈನಲ್‌ನಲ್ಲಿ ತಮಿಳುನಾಡು ತಂಡ 70–61 ರಿಂದ ಕೇರಳವನ್ನು ಮಣಿಸಿತು.



ದೆಹಲಿ ವಿರುದ್ಧದ ಪಂದ್ಯದಲ್ಲಿ ಚೆಂಡನ್ನು ಹಿಡಿತಕ್ಕೆ ಪಡೆದ ಕರ್ನಾಟಕದ ಪಾವನಿ ಪಾಯಿಂಟ್ ಗಳಿಸುವ ಯತ್ನ ನಡೆಸಿದರು.

ಅಂತರರಾಷ್ಟ್ರೀಯ ಆಟಗಾರ್ತಿ ಸತ್ಯಾ ಅವರ ಉತ್ತಮ ಆಟದಿಂದ ಕರ್ನಾಟಕ ಮೊದಲ ಕ್ವಾರ್ಟರ್‌ನಲ್ಲಿ ಕರ್ನಾಟಕ 19-11ರಿಂದ ಮುನ್ನಡೆ ಪಡೆಯಿತು. ವಿರಾಮದ ವೇಳೆ ಮುನ್ನಡೆಯನ್ನು 35–23ಕ್ಕೆ ಹೆಚ್ಚಿಸಿತು. ನಾಯಕಿ ನಿಹಾರಿಕಾ ರೆಡ್ಡಿ 27 ಅಂಕ ಗಳಿಸಿ ಮಿಂಚಿದರೆ, ಮೇಖಲಾ ಗೌಡ 18 ಮತ್ತು ಪಾವನಿ ಸಾಂಗ್ವಾನ್ 12 ಅಂಕ ಗಳಿಸಿದರು. ದೆಹಲಿ ರೈಲ್ವೆ ತಂಡದ ರಾಶಿ ಕೊಟಾನಿ 21 ಅಂಕ ಗಳಿಸಿದರು.

ಪುರುಷರ ವಿಭಾಗದ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡ 70–84 ರಿಂದ ಹರಿಯಾಣ ತಂಡಕ್ಕೆ ಶರಣಾಯಿತು.

ವಿರಾಮದ ವೇಳೆಗೆ ಕರ್ನಾಟಕ 47–42ರಿಂದ ಮುನ್ನಡೆ ಪಡೆ ದಿತ್ತು. ಮೂರನೇ ಕ್ವಾರ್ಟರ್‌ನಲ್ಲೂ 63–59ರಿಂದ ಅಲ್ಪ ಮುನ್ನಡೆ ಉಳಿಸಿಕೊಂಡಿತ್ತು. ಆದರೆ ಕೊನೆಯ ಕ್ವಾರ್ಟರ್‌ನಲ್ಲಿ ಹರಿಯಾಣ ತಂಡ ಅಮೋಘ ಆಟ ಪ್ರದರ್ಶಿಸಿ 84–70 ರಿಂದ ಪಂದ್ಯ ತನ್ನದಾಗಿಸಿಕೊಂಡಿತು. ಕರ್ನಾಟಕದ ಪರ ಮನೋಜ್ ಬಿ.ಎಂ. (21 ಅಂಕ), ದಿನೇಶ್ ಕೆ.ಪಿ. (15 ಅಂಕ), ಗೌತಮ್ ಪಿ.ಕೆ. (11 ಅಂಕ) ಉತ್ತಮ ಪ್ರದರ್ಶನ ನೀಡಿದರು.

‘ಟ್ರ್ಯಾಕ್ ಡಬಲ್’ ಸಾಧಿಸಿದ ಜಾಕೋಬ್

ನಾನ್‌ಜಿಂಗ್ (ಚೀನಾ), (ಎಎಫ್‌ಪಿ): ನಾರ್ವೆಯ ಜಾಕೋಬ್ ಇನ್ಯಬ್ರಿಟ್ಸೆನ್ ಅವರು ವಿಶ್ವ ಒಳಾಂಗಣ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ 1500 ಮೀಟರ್ ಓಟವನ್ನು ಗೆಲ್ಲುವ ಮೂಲಕ ‘ಅಪರೂಪದ ಟ್ರ್ಯಾಕ್ ಡಬಲ್’ ಪೂರೈಸಿದರು.

ಶನಿವಾರ 3000 ಮೀ. ಓಟ ಗೆಲ್ಲುವ ಮೂಲಕ ವಿಶ್ವ ಒಳಾಂಗಣ ಕೂಟದಲ್ಲಿ ತಮ್ಮ ಮೊದಲ ಚಿನ್ನ ಗೆದ್ದಿದ್ದ ಜಾಕೋಬ್ ಭಾನುವಾರ 3ನಿ.38.79 ಸೆ.ಗಳಲ್ಲಿ ನಿಗದಿತ ದೂರವನ್ನು ಕ್ರಮಿಸಿ ಸಂಭ್ರಮಿಸಿದರು. ಇಥಿಯೋಪಿಯಾದ ಹೇಲೆ ಗೆಬ್ರೆಸಿಲಾಸಿ 1999ರಲ್ಲಿ ಕೊನೆಯದಾಗಿ ಮೆಬಾಶಿಯಲ್ಲಿ ನಡೆದ ಕೂಟದಲ್ಲಿ ಟ್ರ್ಯಾಕ್ ಡಬಲ್ ಸಾಧನೆಯನ್ನು ದಾಖಲಿಸಿದ್ದರು.

ಈ ಓಟದಲ್ಲಿ ಕೊನೆಗೂ ಅವರು ಪ್ರಶಸ್ತಿ ಗೆದ್ದಂತಾಯಿತು. ಈ ಹಿಂದೆ ಅವರು ಮೂರು ಬೆಳ್ಳಿ (ಎರಡು ಹೊರಾಂಗಣ ವಿಶ್ವ ಚಾಂಪಿಯನ್‌ಷಿಪ್, ಒಮ್ಮೆ ಒಳಾಂಗಣ) ಗೆದ್ದಿದ್ದರು.

3–1ರಿಂದ ಸರಣಿ ಕೈವಶ ಮಾಡಿಕೊಂಡ ನ್ಯೂಜಿಲೆಂಡ್

ಟಿ20: ಪಾಕ್‌ಗೆ ಮುಖಭಂಗ

ಮೌಂಟ್ ಮಾಂಗಾನುಯಿ (ನ್ಯೂಜಿಲೆಂಡ್), (ಎಎಫ್‌ಪಿ): ನ್ಯೂಜಿಲೆಂಡ್ ವೇಗದ ದಾಳಿಗೆ ಸಿಲುಕಿದ ಪಾಕಿಸ್ತಾನ ಭಾನುವಾರ ನಡೆದ ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲಿ 115 ರನ್‌ಗಳ ಮುಖಭಂಗ ಅನುಭವಿಸಿತು. ಒಂದು ಪಂದ್ಯ ಉಳಿದಿರುವಂತೆ ಸರಣಿಯನ್ನು ನ್ಯೂಜಿಲೆಂಡ್ 3–1 ಕೈವಶ ಮಾಡಿಕೊಂಡಿದೆ.

ಇದು ಚುಟುಕು ಮಾದರಿಯಲ್ಲಿ ಪಾಕ್ ಅನುಭವಿಸಿದ ಅತಿ ದೊಡ್ಡ ಅಂತ ರದ ಸೋಲೆನಿಸಿತು. ವೆಲಿಂಗ್ಟನ್‌ನಲ್ಲಿ 9 ವರ್ಷಗಳ ಹಿಂದೆ ಇದೇ ತಂಡದ ವಿರುದ್ಧ 95 ರನ್ ಅಂತರದ ಸೋಲಾಗಿತ್ತು. ಅಂತಿಮ ಪಂದ್ಯ ಬುಧವಾರ ವೆಲಿಂಗ್ಟನ್‌ನಲ್ಲಿ ನಡೆಯಲಿದೆ.

ಆತಿಥೇಯರು 6 ವಿಕೆಟ್‌ಗೆ 220 ರನ್ ಗಳಿಸಿದ ಮೇಲೆ ಪಾಕಿಸ್ತಾನ 17ನೇ ಓವರಿನಲ್ಲಿ 105 ರನ್‌ಗಳಿಗೆ ಉರುಳಿತು. ಜಾಕೋಬ್ ಡಫಿ 20 ರನ್ನಿಗೆ 4 ವಿಕೆಟ್ ಪಡೆದರೆ, ಮತ್ತೊಬ್ಬ ವೇಗಿ ಝಕಾರಿ ಫಾಲ್ಕ್ಸ್ 25 ರನ್ನಿಗೆ 3 ವಿಕೆಟ್ ಗಳಿಸಿದರು. ಒಂದು ಹಂತದಲ್ಲಿ 56 ರನ್ನಿಗೆ 8 ವಿಕೆಟ್ ಕಳೆದುಕೊಂಡಿದ್ದ ಪಾಕಿಸ್ತಾನ ಆಲ್‌ರೌಂಡರ್ ಅಬ್ದುಲ್ ಸಮದ್ ಅವರು 44 ರನ್‌ಗಳ (30 ಎಸೆತ) ಆಟದಿಂದ ನೂರರ ಗಡಿ ದಾಟಲು ಸಾಧ್ಯವಾಯಿತು. ಇದಕ್ಕೆ ಮೊದಲು, ಫಿನ್ ಅಲೆನ್ (50, 20ಎ) ಮತ್ತು ಟಿಮ್ ಸೀಫರ್ಟ್ (44, 22ಎ) ನ್ಯೂಜಿಲೆಂಡ್‌ಗೆ ಉತ್ತಮ ಆರಂಭ ನೀಡಿದರು. ನಾಯಕ ಮೈಕೆಲ್ ಬ್ರೇಸ್‌ವೆಲ್ (ಅಜೇಯ 46, 26ಎ) ಅಂತಿಮ ಹಂತದಲ್ಲಿ ರನ್ ವೇಗ ಹೆಚ್ಚಿಸಿದರು.



ಫಿನ್ ಆ್ಯಲೆನ್ ಬ್ಯಾಟಿಂಗ್

ಸ್ಕೋರುಗಳು: ನ್ಯೂಜಿಲೆಂಡ್ 20 ಓವರುಗಳಲ್ಲಿ 220 (ಟಿಮ್ ಸೀಫರ್ಟ್ 44, ಫಿನ್ ಅಲೆನ್ 50, ಮೈಕೆಲ್ ಬ್ರೇಸ್‌ವೆಲ್ ಔಟಾಗದೇ 46; ಹ್ಯಾರಿಸ್ ರವೂಫ್ 27ಕ್ಕೆ3); **ಪಾಕಿಸ್ತಾನ:** 16.2 ಓವರುಗಳಲ್ಲಿ 105 (ಅಬ್ದುಲ್ ಸಮದ್ 44; ಜಾಕೋಬ್ ಡಫಿ 20ಕ್ಕೆ4, ಝಕಾರಿ ಫಾಲ್ಕ್ಸ್ 25ಕ್ಕೆ3). ಪಂದ್ಯದ ಆಟಗಾರ: ಫಿನ್ ಅಲೆನ್.

ನಮ್ಮ ಬ್ಯಾಟರ್‌ಗಳಿಗೇ ಬೌಲ್ ಮಾಡಲು ಭಯ: ಕಮಿನ್ಸ್

ಹೈದರಾಬಾದ್: ‘ಐಪಿಎಲ್‌ನಲ್ಲಿ ನಮ್ಮ ತಂಡದ ಬ್ಯಾಟರ್‌ಗಳು ಎದುರಾಳಿ ಬೌಲರ್‌ಗಳನ್ನು ಚೆಂಡಾಡುವ ರೀತಿ ನೋಡಿದಾಗಲೇ ಭಯವಾಗುತ್ತದೆ. ಅವರೆದುರು ಸ್ವತಃ ನಾನೇ ಬೌಲಿಂಗ್ ಮಾಡಲು ಮುಂದಾಗುತ್ತಿರಲಿಲ್ಲ’ ಎಂದು ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿದರು.

ಭಾನುವಾರ ನಡೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡ 20 ಓವರುಗಳಲ್ಲಿ 6 ವಿಕೆಟ್‌ಗೆ 286 ರನ್ ಹೊಡೆದು 44 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಲಿಸಿತ್ತು.‘ನಮ್ಮ ಬ್ಯಾಟರ್‌ಗಳಿಗೆ ಬೌಲಿಂಗ್ ಮಾಡಲು ಸ್ವತಃ ನಾನೇ ಹೆದರುತ್ತಿದ್ದೆ. ನಂಬಲು ಅಸಾಧ್ಯ ರೀತಿಯಲ್ಲಿ ಅವರು ಆಡುತ್ತಿದ್ದಾರೆ. ನೋಡುವಾಗ ದಿಗಿಲುಟ್ಟಿಸುತ್ತಿದೆ’ ಎಂದು ಕಮಿನ್ಸ್ ಪಂದ್ಯಾನಂತರದ ಪ್ರಶಸ್ತಿ ಪ್ರದಾನದ ವೇಳೆ ಹೇಳಿದರು.

ರಾಷ್ಟ್ರೀಯ ದಾಖಲೆ ಸ್ಥಾಪಿಸಿದ ರೇಸ್ ವಾಕರ್ ಪ್ರಿಯಾಂಕಾ ಗೋಸ್ವಾಮಿ

ನವದೆಹಲಿ (ಪಿಟಿಐ): ಕಾಮನ್ವೆಲ್ತ್ ಕ್ರೀಡೆಗಳ ಪದಕ ವಿಜೇತೆ ರೇಸ್ ವಾಕರ್ ಪ್ರಿಯಾಂಕಾ ಗೋಸ್ವಾಮಿ ಅವರು ಸ್ಲೊವಾಕಿಯಾದ ಡುಡಿನ್ಸ್‌ನಲ್ಲಿ ನಡೆದ ಡುಡಿನ್‌ಸ್ಕಾ 50 ಕೂಟದ ಮಹಿಳೆಯರ 35 ಕಿ.ಮೀ. ಸ್ಪರ್ಧೆಯಲ್ಲಿ ನೂತನ ರಾಷ್ಟ್ರೀಯ ದಾಖಲೆ ಸ್ಥಾಪಿಸಿದರು.



ಪ್ರಿಯಾಂಕಾ

ಗೋಸ್ವಾಮಿ ಶನಿವಾರ ನಡೆದ ಸ್ಪರ್ಧೆಯನ್ನು 2ಗಂಟೆ 56 ನಿಮಿಷ 34 ಸೆ.ಗಳಲ್ಲಿ ಪೂರೈಸಿದರು. ಡುಡಿನ್ಸ್‌ನ ಬೀದಿಗಳಲ್ಲಿ ಮಾರ್ಚ್ ತಿಂಗಳಲ್ಲಿ ನಡೆಯುವ ಇದು ವಿಶ್ವ ಅಥ್ಲೆಟಿಕ್ಸ್ ರೇಸ್ ವಾಕಿಂಗ್ ಟೂರ್ ಗೋಲ್ಡ್ ಲೇಬಲ್ ಕೂಟವಾಗಿದೆ. 44ನೇ ವರ್ಷ ನಡೆಯುತ್ತಿದೆ.

29 ವರ್ಷ ವಯಸ್ಸಿನ ಪ್ರಿಯಾಂಕಾ ಅವರ ಈ ಹಿಂದಿನ ವೈಯಕ್ತಿಕ ಉತ್ತಮ ಸಾಧನೆ 3ಗಂ.13ನಿಮಿಷ 19 ಸೆಕೆಂಡುಗಳಾಗಿವೆ. ಅವರು 2023ರಲ್ಲಿ ರಾಂಚಿಯಲ್ಲಿ ನಡೆದ ರಾಷ್ಟ್ರೀಯ ಓಪನ್ ರೇಸ್ ವಾಕಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಜು ರಾಣಿ ಸ್ಥಾಪಿಸಿದ್ದ 2ಗಂ.57ನಿ.54 ಸೆ.ಗಳ ದಾಖಲೆ ಮುರಿದರು.

ಇಕ್ವೆಡೋರ್‌ನ ಪೌಲಾ ಮಿಲೆನಾ ಟೊರೆಸ್ (2:44:26) ಮೊದಲ ಸ್ಥಾನ ಪಡೆದರು. ಪೆರುವಿನ ಕಿಂಬರ್ಲಿ ಗಾರ್ಸಿಯಾ (2:45:59) ಮತ್ತು ಪೋಲೆಂಡ್‌ನ ಕಟರ್ಜಿನಾ ಜಿಬೆಬ್ಲೊ (2:46:59) ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು.

ಪ್ರಿಯಾಂಕಾ ಅವರು 20 ಕಿ.ಮೀ. ರೇಸ್ ವಾಕ್‌ನಲ್ಲಿ ರಾಷ್ಟ್ರೀಯ ದಾಖಲೆ (1:28:45) ಹೊಂದಿದ್ದಾರೆ. 2022ರ ಬರ್ಮಿಂಗ್‌ಹ್ಯಾಮ್ ಕಾಮನ್ವೆಲ್ತ್ ಗೇಮ್ಸ್‌ನಲ್ಲಿ 10,000 ಮೀ. ರೇಸ್ ವಾಕ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.